ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 22 ಶುಕ್ರವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 245 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಭಾರತೀಯ ವಿದ್ಯಾಭವನದಲ್ಲಿ ತಿಂಗಳ ಸಂಗೀತ ಕಾರ್ಯಕ್ರಮ


ವಿದ್ವಾನ್ ಎನ್.ಆರ್.ಪ್ರಶಾಂತ್


ವಿದ್ವಾನ್ ಕೇಶವ


ವಿದ್ವಾನ್ ರಾಧೇಶ್

ಮೈಸೂರು, ಡಿ.21– ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರದ ವತಿಯಿಂದ ಡಿ.23ರಂದು ಸಂಜೆ 5.30 ಗಂಟೆಗೆ ಭಾರತೀಯ ವಿದ್ಯಾಭವನದ ಪ್ರೊ. ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ತಿಂಗಳ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಂದು ಸಂಜೆ 5.45 ಗಂಟೆಗೆ ವಿದ್ಯಾಭವನದ ಕಲಾ ಭಾರತಿ ಹಿಂದೂಸ್ತಾನಿ ಸಂಗೀತ ವಿದ್ಯಾರ್ಥಿಗಳಿಂದ ಪ್ರಾರ್ಥನೆ, ಸಂಜೆ 5.40ರಿಂದ ಬಿವಿಬಿ ಸದಸ್ಯರಾದ ಡಾ.ತುಳಸಿ ರಾಮಚಂದ್ರ ಅವರಿಂದ ಕಲಾವಿದರ ಪರಿಚಯ ಕಾರ್ಯಕ್ರಮವಿದೆ. ಸಂಜೆ 6ರಿಂದ ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಗಾಯನವಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಕೇಶವ–ಪಿಟೀಲು, ವಿದ್ವಾನ್ ರಾಧೇಶ್–ಮೃದಂಗ ವಾದನದಲ್ಲಿ ಸಹಕಾರ ನೀಡಲಿದ್ದಾರೆ.

ವಿದ್ವಾನ್ ಎನ್.ಆರ್.ಪ್ರಶಾಂತ್: 1967ರಲ್ಲಿ ಜನಿಸಿದ ಇವರು, ತಮ್ಮ ವಿನೂತನ ಸಂಗೀತ ಶೈಲಿಗೆ ಹೆಸರುವಾಸಿಯಾದ ಗಾಯಕರಾಗಿದ್ದಾರೆ. ಗೌರವಾನ್ವಿತ ಗುರುಗಳಿಂದ ಮಾರ್ಗದರ್ಶನ ಮತ್ತು ಪ್ರಸ್ತುತ ಪ್ರೊ.ಆರ್.ವಿಶ್ವೇಶ್ವರನ್ ಅವರಲ್ಲಿ ಸಂಗೀತ ಅಭ್ಯಾಸ, ರಾಗ, ಶುದ್ಧತೆ, ನಿಯಂತ್ರಿತ ಗಮಕಗಳು ಮತ್ತು ಸರಳತೆಯ ಮೇಲೆ ಪಾಂಡಿತ್ಯವನ್ನು ಹೊಂದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಜಿನಿಯರಿಂಗ್ ಪದವಿ ಪಡೆದಿದ್ದು, ಸಂಗೀತಕ್ಕೆ ತಮ್ಮನ್ನು ಸಮರ್ಪಿಸಿಕೊಂಡು, ಯುನೈಟೆಡ್ ಕಿಂಗ್‌ಡಂ, ಮಲೇಷಿಯಾ, ಸಿಂಗಾಪುರ್, ಆಸ್ಟ್ರೇಲಿಯಾ, ಯುಎಸ್‌ಎ, ಇಂಡಿಯಾ ಸೇರಿದಂತೆ ವಿವಿಧ ದೇಶಗಳಲ್ಲಿ ಜಾಗತಿಕ ಮಟ್ಟದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡುವ ಮೂಲಕ ಎನ್.ಆರ್. ಪ್ರಶಾಂತ್ ಮೆಚ್ಚುಗೆ ಗಳಿಸಿದ್ದಾರೆ.

ಸಿಂಗಾಪುರ್ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯಲ್ಲಿ ಬೋಧಕರು, ಪ್ರಿನ್ಸಿಪಲ್ ಟ್ಯೂಟರ್ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಆಗಿ ಹಲವಾರು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಬೆಂಗಳೂರು ಗಾಯನ ಸಮಾಜದಿಂದ 'ಅತ್ಯುತ್ತಮ ಸಂಗೀತಗಾರ' ಆರ್ಯಭಟ ಅಂತರರಾಷ್ಟ್ರೀಯ ಪ್ರಶಸ್ತಿ, ಸ್ವರಲಯ ರತ್ನ, ಕಲಾಜ್ಯೋತಿ ಇನ್ನಿತರ ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಮಕ್ಕಳಿಗೆ ಶಾಲೆ ಹಂತದಲ್ಲೇ ರಾಷ್ಟ್ರಪ್ರೇಮದ ಜಾಗೃತಿ ಮೂಡಿಸಿ

ತುಮಕೂರು ರಾಮಕೃಷ್ಣ ಆಶ್ರಮದ ಶ್ರೀ ವೀರೇಶಾನಂದ ಸ್ವಾಮೀಜಿ ಅಭಿಮತ

ಮೈಸೂರು, ಡಿ.21(ಜಿಎ)–ಮನೆ ಮತ್ತು ಶಾಲೆಯ ಹಂತದಲ್ಲಿಯೇ ದೇಶಭಕ್ತಿಯನ್ನು ಬೆಳೆಸುವ ಪ್ರಯತ್ನವಾಗಬೇಕು ಎಂದು ತುಮಕೂರು ರಾಮಕೃಷ್ಣ ಆಶ್ರಮದ ಶ್ರೀ ವೀರೇಶಾನಂದ ಸ್ವಾಮೀಜಿ ತಿಳಿಸಿದರು.




ಕಲಾಮಂದಿರದಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರ ಜಾಗೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ರಾಷ್ಟ್ರ ಜಾಗೃತಿ ಎಂಬುದು ನಿರಂತರ ಪ್ರಕ್ರಿಯೆ. ಪಠ್ಯದಲ್ಲಿ ದೇಶದ ಬಗ್ಗೆ ಅಭಿಮಾನ ಬೆಳೆಸುವ ಪಾಠಗಳು ಇರಬೇಕು ಎಂದರು.

ರಾಷ್ಟ್ರಪ್ರೇಮದ ಬಗ್ಗೆ ಉಚ್ಚಮಟ್ಟದ ಭಾವವನ್ನು ಜಾಗೃತಗೊಳಿಸುವ ಕೆಲಸ ಎಲ್ಲೆಡೆ ಸತತವಾಗಿ ನಡೆಯಬೇಕು. ಧಮನಿ ಧಮನಿಗಳಲ್ಲಿ ರಾಷ್ಟ್ರಪ್ರೇಮ ಜಾಗೃತ ಆಗಬೇಕು. ಸ್ವಾಮಿ ವಿವೇಕಾನಂದರು ರಾಷ್ಟ್ರ ಜಾಗೃತಿಗೆ ಶ್ರಮಿಸಿದರು ಎಂದು ಸ್ಮರಿಸಿದರು.

ಮಕ್ಕಳ ಹೃದಯ ತಜ್ಞೆ ಡಾ.ವಿಜಯಲಕ್ಷ್ಮೀ ಬಾಳೆಕುಂದ್ರಿ ಮಾತನಾಡಿ, ಗಾಂಧೀಜಿ, ಸುಭಾಷ್ ಚಂದ್ರ ಬೋಸ್ ಸೇರಿ ಹಲವರು ರಾಷ್ಟ್ರ ಜಾಗೃತಿಯಲ್ಲಿ ಪಾಲ್ಗೊಂಡಿದ್ದರು. ದೇಶ ಭಕ್ತಿ ಹಾಗೂ ರಾಷ್ಟ್ರದ ಬಗೆಗಿನ ಜ್ಞಾನ ಹೆಚ್ಚಿಸುವ ಕೆಲಸಗಳನ್ನು ಆಡಳಿತಾರೂಢ ಸರ್ಕಾರಗಳು ಮಾಡಬೇಕು ಎಂದರು. ರಾಷ್ಟ್ರಗೀತೆಯನ್ನು ಬೇರೆ ದೇಶಗಳಲ್ಲಿ ಎಲ್ಲರೂ ಎಲ್ಲಾ ಅವಧಿಯಲ್ಲಿ ಹಾಡುವಂತಿಲ್ಲ. ಆದರೆ, ನಮ್ಮ ದೇಶದಲ್ಲಿ ಮಾತ್ರ ಎಲ್ಲರಿಗೂ ಹಾಡಲು ಅವಕಾಶವಿದೆ. ಆದರೆ, ಬಹುತೇಕರಿಗೆ ರಾಷ್ಟ್ರಗೀತೆ ಪೂರ್ತಿಯಾಗಿ ಹಾಡಲು ಬರುವುದಿಲ್ಲ. ಶಾಲಾವಧಿಯಲ್ಲಿ ಹಾಡುವ ರಾಷ್ಟ್ರಗೀತೆಯನ್ನು ದೊಡ್ಡವರಾದಂತೆ ಮರೆಯುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಾಧೀಶರು ಮತ್ತು ರಾಷ್ಟ್ರ ಜಾಗೃತಿ ಅಭಿಯಾನ ಸಮಿತಿ ಅಧ್ಯಕ್ಷರೂ ಆದ ಎನ್.ಕುಮಾರ್, ಜಿಲ್ಲಾಧ್ಯಕ್ಷ ಜಿ.ಆರ್.ನಾಗರಾಜು, ಸ್ವಾಗತ ಸಮಿತಿ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್, ಮಾರ್ಗದರ್ಶಕಿ ವನಜಾ ಪಂಡಿತ್ ಉಪಸ್ಥಿತರಿದ್ದರು.



ಕಲ್ಪ ಹೆರಿಟೇಜ್ ಟ್ರಸ್ಟ್ ನಿರ್ಮಾಣ ಮಾಡಿರುವ ಡಾ.ವಿ.ಆರ್.ಅನಿಲ್‌ಕುಮಾರ್ ನಿರ್ದೇಶನದ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಕುರಿತ ಸಾಕ್ಷ್ಯಚಿತ್ರ ಪ್ರಶಸ್ತಿಗೆ ಆಯ್ಕೆಯಾಗಿದೆ. ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆದ 3ನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್‌ನಲ್ಲಿ ಕಿರುತೆರೆ ನಟ ಋತ್ವಿಕ್ ಮಠಾಡ್ ಅವರು ಸಾಕ್ಷ್ಯಚಿತ್ರ ನಿರ್ದೇಶನ ಮಾಡಿರುವ ಡಾ.ವಿ.ಆರ್. ಅನಿಲ್‌ಕುಮಾರ್‌ರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರಿಂದ ವಾಸ್ಕೋ–ಡ–ಗಾಮಾ ನಡುವೆ ವಿಶೇಷ ರೈಲು

ಮೈಸೂರು,ಡಿ.21(ಬಿಎಲ್‌ಯು)–ಬೆಂಗಳೂರು ಮತ್ತು ಹುಬ್ಬಳ್ಳಿ ಮುಖಾಂತರ ಮೈಸೂರು ಹಾಗೂ ವಾಸ್ಕೋ–ಡ–ಗಾಮಾ ನಡುವೆ ವಾರಕ್ಕೊಮ್ಮೆ ವಿಶೇಷ ರೈಲು ಸಂಚಾರ ಸೌಲಭ್ಯ ಕಲ್ಪಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ. ತಡೆರಹಿತ ಪ್ರಯಾಣಕ್ಕೆ ಅನುಕೂಲವಾಗುವಂತೆ ಹಾಗೂ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ಈ ತೀರ್ಮಾನ ಕೈಗೊಂಡಿದೆ.

ರೈಲು ಗಾಡಿ ಸಂಖ್ಯೆ 06231, ಡಿ.22 ಮತ್ತು 29ರಂದು ರಾತ್ರಿ 7.10 ಗಂಟೆಗೆ ಹೊರಟು ಮಾರನೆ ದಿನ 1.30 ಗಂಟೆಗೆ ವಾಸ್ಕೋ–ಡ–ಗಾಮ ತಲುಪಲಿದೆ.

ಮಾರ್ಗ ಮಧ್ಯೆ ಮಂಡ್ಯ, ರಾಮನಗರ, ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ತುಮಕೂರು, ತಿಪಟೂರು, ಅರಸಿಕೆರೆ, ಬೀರೂರು, ದಾವಣಗೆರೆ, ಹರಿಹರ, ರಾಣಿಬೆನ್ನೂರು, ಹಾವೇರಿ, ಹುಬ್ಬಳ್ಳಿ, ಧಾರವಾಡ, ಲೋಂಡಾ, ಕ್ಯಾಸಲ್ ರಾಕ್, ಕ್ಯೂಲಂ, ಸಾನ್ವೊರ್ಡಾಮ್, ಕರ್ಚೋರೆಮ್ ನಿಲುಗಡೆ ಮಾಡುವ ವಿಶೇಷ ರೈಲು ಅಂತಿಮವಾಗಿ ಮಡಗಾಂವ್ ತಲುಪಲಿದೆ.



ಡಿಸೆಂಬರ್ 25 ಮತ್ತು ಜನವರಿ 1ರಂದು 2.30 ಗಂಟೆಗೆ ವಾಸ್ಕೋ–ಡ–ಗಾಮಾದಿಂದ ನಿರ್ಗಮಿಸಲಿದ್ದು, ಮಾರ್ಗ ಮಧ್ಯೆ ಮೇಲಿನ ನಿಲ್ದಾಣಗಳಲ್ಲಿ ರೈಲು ನಿಲುಗಡೆಯಾಗಲಿದೆ. ವಿಶೇಷ ರೈಲು 22 ಕೋಚ್ ಹೊಂದಿದೆ. ಮೊದಲ ದರ್ಜೆ ಎಸಿ ಕೋಚ್ 1, ಎರಡನೇ ಶ್ರೇಣಿ ಎಸಿ ಕೋಚ್ 2, ಮೂರನೇ ಶ್ರೇಣಿ ಎಸಿ ಕೋಚ್ 7, ಸ್ಲೀಪರ್ ದರ್ಜೆಯ 8 ಕೋಚ್, ಸಾಮಾನ್ಯ ದರ್ಜೆಯ ಕೂರುವ ಎರಡು ಕೋಚ್ ಹೊಂದಿರುತ್ತದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಜೆ.ಲೋಹಿತೇಶ್ವರ ತಿಳಿಸಿದ್ದಾರೆ.


ಇಂದು ಮೈಸೂರಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಡಿ.21–ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಶನ್ ಸೊಸೈಟಿ, ಬೆಂಗಳೂರು, ಮೈಸೂರು ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಇಎಸ್‌ಐ ಆಸ್ಪತ್ರೆ, ಮೈಸೂರು, ಅಮೃತ ಕೃಪಾ ಆಸ್ಪತ್ರೆ, ಲಯನ್ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ನಾಳೆ (ಡಿ.22) ಬೆಳಗ್ಗೆ 9 ಗಂಟೆಗೆ ಮೈಸೂರಿನ ಅಂಬೇಡ್ಕರ್ ಜ್ಞಾನ ಲೋಕ ಮೇಟಗಳ್ಳಿಯ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಇಎಸ್‌ಐ ಆಸ್ಪತ್ರೆ ಆಪ್ತ ಸಮಾಲೋಚಕ ಗೋಪಾಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃಗಾಲಯದ ಸುತ್ತಮುತ್ತ 'ನಿಶ್ಯಬ್ದ' ವಲಯ

ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಆದೇಶ



ಮೈಸೂರು, ಡಿ.21–ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆ ಸುತ್ತಲಿನ ರಸ್ತೆಗಳನ್ನು 'ನಿಶ್ಯಬ್ದ' ವಲಯ ಎಂದು ಘೋಷಿಸಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶ ಹೊರಡಿಸಿದ್ದಾರೆ.

ಮೃಗಾಲಯ ಮತ್ತು ಕಾರಂಜಿ ಕೆರೆ ಸುತ್ತಮುತ್ತ ಎಂ.ಎಲ್.ಸೋಮಸುಂದರಂ ವೃತ್ತದಿಂದ ಎಸ್.ಲಿಂಗಣ್ಣ ವೃತ್ತದವರೆಗಿನ ಶಾಲಿವಾಹನ ರಸ್ತೆ, ಎಲ್.ಲಿಂಗಣ್ಣ ವೃತ್ತದಿಂದ ಸರ್ಕಸ್ ಗ್ರೌಂಡ್ ಜಂಕ್ಷನ್‌ವರೆಗಿನ ಲೋಕರಂಜನ್ ರಸ್ತೆ, ಸರ್ಕಲ್ ಗ್ರೌಂಡ್ ಜಂಕ್ಷನ್‌ನಿಂದ ಮಹಾರಾಣ ಪ್ರತಾಪ್ ಸಿಂಹ ವೃತ್ತದವರೆಗಿನ ಟ್ಯಾಂಕ್‌ಬಂಡ್ ರಸ್ತೆ ಮತ್ತು ಮಹಾರಾಣ ಪ್ರತಾಪ್ ಸಿಂಹ ವೃತ್ತದಿಂದ ಎಂ.ಎಲ್.ಸೋಮಸುಂದರಂ ವೃತ್ತದವರೆಗಿನ ಎಂ.ಜಿ. ರಸ್ತೆಯಲ್ಲಿ ವಾಹನಗಳ ಹಾರನ್, ಪಟಾಕಿ ಹಾಗೂ ಧ್ವನಿವರ್ಧಕಗಳ ಶಬ್ದಗಳನ್ನು ನಿಷೇಧಿಸಲಾಗಿದೆ.

ಶ್ರೀ ಚಾಮರಾಜೇಂದ್ರ ಮೃಗಾಲಯವು ವನ್ಯಪ್ರಾಣಿಗಳ, ಪಕ್ಷಿ ಸಂಕುಲನಗಳ ಹಾಗೂ ದೇಶ–ವಿದೇಶಗಳ ಜೀವ ಸಂಕುಲದ ಆವಾಸ ಸ್ಥಾನವಾಗಿದೆ. ಕಾರಂಜಿ ಕೆರೆಯು ಋತುಮಾನಕ್ಕೆ ತಕ್ಕಂತೆ ವಲಸೆ ಪ್ರಾಣಿಗಳು ಬಂದು ನೆಲೆಸುವ ನೆಚ್ಚಿನ ತಾಣವಾಗಿದೆ. ಈ ಪ್ರದೇಶಗಳು ಸೂಕ್ಷ್ಮತೆಯಿಂದ ಕೂಡಿದ್ದು, ವನ್ಯಜೀವಿ ಸಂಕುಲಗಳು ವಾಸಿಸಲು ನಿಶ್ಯಬ್ದತೆಯಿಂದ ಕೂಡಿದ ಪ್ರಶಾಂತತೆ ವಾತಾವರಣವನ್ನು ಸೃಷ್ಟಿಸುವ ಅಗತ್ಯತೆ ಇರುತ್ತದೆ. ಮೃಗಾಲಯ ಮತ್ತು ಕಾರಂಜಿ ಕೆರೆ ಸುತ್ತಲಿನ ರಸ್ತೆಗಳಲ್ಲಿ ಭಾರೀ ವಾಹನಗಳ ಸಂಚಾರ ಅಧಿಕವಾಗಿದ್ದು, ವಾಹನಗಳ ಹಾರನ್ ಶಬ್ದ, ಹಬ್ಬ–ಹರಿದಿನಗಳಲ್ಲಿ ಧ್ವನಿವರ್ಧಕಗಳ ಬಳಕೆ ಮತ್ತು ಪಟಾಕಿಗಳ ಬಳಕೆಯಿಂದ ಶಬ್ದ ಮತ್ತು ವಾಯುಮಾಲಿನ್ಯ ಹೆಚ್ಚಾಗಿ ವನ್ಯಜೀವಿ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಈ ರಸ್ತೆಗಳನ್ನು ನಿಶ್ಯಬ್ದ ವಲಯ ಎಂದು ಘೋಷಿಸುವಂತೆ ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಕೋರಿದ ಮೇರೆಗೆ ನಗರ ಪೊಲೀಸ್ ಆಯುಕ್ತರು ಈ ರಸ್ತೆಗಳನ್ನು ನಿಶ್ಯಬ್ದ ವಲಯ ಎಂದು ಘೋಷಿಸಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ಜನ್ಮದಿನ, ಬೃಹತ್ ರಕ್ತದಾನ ಶಿಬಿರ

ಅಟಲ್ ಜೀ ದೇಶ ಕಂಡ ಧೀಮಂತ ನಾಯಕ: ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು, ಡಿ.21–ಜನಸಂಘದ ಕಾಲದಿಂದಲೂ ಸಾಮಾಜಿಕವಾಗಿ, ರಾಜಕೀಯವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಒಂದೇ ಒಂದು ಕಪ್ಪು ಚುಕ್ಕೆಯಿಲ್ಲದೇ ಸೇವೆ ಸಲ್ಲಿಸಿ ಜನಮಾನಸದಲ್ಲಿ ನೆನಪಾಗಿರುವ ದೇಶ ಕಂಡ ಧೀಮಂತ ನಾಯಕ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ. ಅವರ ಜನ್ಮದಿನವನ್ನು ಬಿಜೆಪಿ ಸುಶಾಸನ ದಿನವನ್ನಾಗಿ ಆಚರಿಸುತ್ತಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.



ನಗರದ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ವೈದ್ಯಕೀಯ ಪ್ರಕೋಷ್ಠ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಡಿ.25ರಂದು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನ ಅಂಗವಾಗಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಿದ್ದು, ಅದರ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬಿಜೆಪಿ ಮೊದಮೊದಲು ಹೀನಾಯವಾಗಿ ಪರಾಭವ ಹೊಂದಿದಾಗ ನ ದೈನ್ಯಮ ನ ಪಲಾಯನಂ ಎಂಬ ಧ್ಯೇಯ ವಾಕ್ಯದೊಂದಿಗೆ ಪಕ್ಷ ಕಟ್ಟಿ ಅಧಿಕಾರಕ್ಕೆ ತಂದು ಪ್ರಧಾನಿಯಾಗಿ ಅತ್ಯುತ್ತಮ ಆಡಳಿತ ನೀಡಿದರು. ಅತೀ ಸರಳ ಸಜ್ಜನ ರಾಜಕಾರಣಿಯಾಗಿದ್ದ ವಾಜಪೇಯಿಯವರು ಪತ್ರಕರ್ತರು, ಕವಿಗಳೂ ಆಗಿದ್ದರು ಎಂದರು. ಅವರ ಜನುಮದಿನ ನಿಮಿತ್ತ ನಡೆಸುತ್ತಿರುವ ರಕ್ತದಾನ ಶಿಬಿರದಲ್ಲಿ ಅತೀ ಹೆಚ್ಚು ಯುವಕರು, ಕಾರ್ಯಕರ್ತರು, ಸಂಘ ಸಂಸ್ಥೆಗಳವರು ಸ್ವಯಂಪ್ರೇರಿತ ರಕ್ತದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸೋಣ ಎಂದು ಕರೆ ನೀಡಿದರು.

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಹಾಗೂ ಬಿಜೆಪಿ ವೈದ್ಯಕೀಯ ಪ್ರಕೋಷ್ಠ ಸಂಚಾಲಕ ಗಿರೀಶ್ ಮಾತನಾಡಿ, ಡಿ.25ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಿದ್ದು, ರಕ್ತದಾನ ಮಾಡಲು ಇಚ್ಛಿಸುವವರು 9880752727/ 9844613407 ಸಂಪರ್ಕಿಸಬಹುದು ಎಂದರು. ಇದೇ ವೇಳೆ ನಗರ ಪ್ರಧಾನ ಕಾರ್ಯದರ್ಶಿ ವಾಣೀಶ್‌ಕುಮಾರ್, ಮಾಜಿ ನಗರಪಾಲಿಕೆ ಸದಸ್ಯರಾದ ಕೆ.ಜೆ.ರಮೇಶ್, ಜಯರಾಮ್, ಕೆಎಮ್‌ಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಬೈರತಿ ಲಿಂಗರಾಜು, ಮಂಜು, ಶಶಿ, ಸೋಮು, ಮಂಜು ಇನ್ನಿತರರು ಹಾಜರಿದ್ದರು.

ಡಿ.24, ವಿದ್ಯಾರ್ಥಿ ಪುಷ್ಕೀಕರಣ

ಮೈಸೂರು,ಡಿ.21–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ನಂ.422, 4ನೇ ಮುಖ್ಯರಸ್ತೆ, ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದಲ್ಲಿ ಡಿ.24ರಂದು ಸಂಜೆ 4ರಿಂದ 6ರವರೆಗೆ 'ಇಂದು ಪ್ರಬಲ ವಿದ್ಯಾರ್ಥಿಯು ನಾಳೆ ನಮ್ಮ ದೇಶಕ್ಕೆ ಆಸ್ತಿಯಾಗಬಹುದು' ವಿಷಯ ಕುರಿತು ವಿದ್ಯಾರ್ಥಿ ಪುಷ್ಕೀಕರಣ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಸ್ವಯಂ ಪ್ರಾಮುಖ್ಯತೆ (ಪಾತ್ರ ನಿರ್ಮಾಣ), ಕೋಪ ನಿರ್ವಹಣೆ ಕೌಶಲ್ಯಗಳು, ಪೋಷಕರ ಪ್ರಾಮುಖ್ಯತೆ, ಸಂವಹನ ಕೌಶಲ್ಯಗಳು, ಅಧ್ಯಯನ ಕೌಶಲ್ಯಗಳ ಬಗ್ಗೆ ಕೌನ್ಸೆಲಿಂಗ್ ಸೈಕಾಲಜಿಸ್ಟ್ ಬಿ.ಎಲ್.ವೇದಪ್ರಭ ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ 10ರಿಂದ 18 ವರ್ಷ ವಯೋಮಿತಿ ವಿದ್ಯಾರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ 9900264937 ಸಂಪರ್ಕಿಸಬಹುದು.

ನಾಳೆ ನಂ.ಗೂಡಲ್ಲಿ ಉಚಿತ ಆರೋಗ್ಯ ತಪಾಸಣೆ



ಮೈಸೂರು, ಡಿ.21(ಜಿಎ)–ರಾಷ್ಟ್ರೀಯ ರೈತ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ವತಿಯಿಂದ ಡಿ.23ರಂದು ನಂಜನಗೂಡಿನ ಅಂಬೇಡ್ಕರ್ ಭವನದಲ್ಲಿ ಕೃಷಿ ಸಾಧಕರಿಗೆ ಕೃಷಿ ರತ್ನ ಪ್ರಶಸ್ತಿ ಪ್ರದಾನ, ಉಚಿತ ಕಣ್ಣಿನ ಹಾಗೂ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಹೇಮಂತ್‌ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ ವಹಿಸಲಿದ್ದು, ಶಾಸಕರಾದ ದರ್ಶನ್ ಧ್ರುವನಾರಾಯಣ್, ಕೆ.ಹರೀಶ್ ಗೌಡ, ಸಿ.ಎನ್ ಮಂಜೇಗೌಡ, ಮಾಜಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಕಳಲೆ ಕೇಶವಮೂರ್ತಿ, ನಂಜುಂಡಸ್ವಾಮಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಯುವ ಮುಖಂಡರಾದ ಸಂದೇಶ್ ಸ್ವಾಂಡಿ ಇನ್ನಿತರರು ಉಪಸ್ಥಿತರಿರುತ್ತಾರೆ ಎಂದರು.

ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ಆಯೋಜಿಸಿದ್ದು, ಅಂದು ಬೆಳಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಆರೋಗ್ಯ ತಪಾಸಣೆ ನಡೆಯಲಿದೆ. ಜೊತೆಗೆ ಮೈಸೂರಿನ ರಾಜೀವ್‌ನಗರದ ನವಮಿ ಡಯಾಗೋಸ್ಟಿಕ್ ವತಿಯಿಂದ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ಕೂಡ ನಡೆಯಲಿದೆ ಎಂದರು. ಗೋಷ್ಠಿಯಲ್ಲಿ ಹರೀಶ್ ಪಿ.ಗೌಡ, ಪ್ರತಾಪ್, ಗಿರೀಶ್ ಉಪಸ್ಥಿತರಿದ್ದರು.

ಇಂದು ಮೈಸೂರಿಗೆ ಭಗೀರಥ ಭಾರತ ಕಲ್ಯಾಣ ರಥ



ಮೈಸೂರು, ಡಿ.21(ಜಿಎ)–ಮೀಸಲಾತಿಗಾಗಿ ಸಂಚರಿಸುತ್ತಿರುವ ಭಗೀರಥ ಭಾರತ ಜನಕಲ್ಯಾಣ ರಥಯಾತ್ರೆಯು ಡಿ.22ರಂದು ಬೆಳಗ್ಗೆ 10ಕ್ಕೆ ನಗರದ ಪುರಭವನಕ್ಕೆ ಆಗಮಿಸಲಿದೆ ಎಂದು ಜಿಲ್ಲಾಧ್ಯಕ್ಷ ಎಸ್.ಯೋಗೀಶ್ ಉಪ್ಪಾರ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿಗೆ ಆಗಮಿಸುತ್ತಿರುವ ರಥವನ್ನು ರಾಜ್ಯ ಉಪ್ಪಾರ ಸಂಘ, ಜಿಲ್ಲಾ ಭಗೀರಥ ಉಪ್ಪಾರರ ಸಂಘದ ವತಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಗುತ್ತಿದ್ದು, ಅಂದು ವಿವಿಧ ಕಲಾತಂಡಗಳ ಮೂಲಕ ದೇವರಾಜ ಅರಸು ರಸ್ತೆ ಮೂಲಕ ದಿವಾನ್ಸ್ ರಸ್ತೆಯಲ್ಲಿನ ಯಾದವ ಸಭಾಂಗಣ ತಲುಪಲಿದ್ದು, ಅಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ಶಾಸಕ ಸಿ.ಪುಟ್ಟರಂಗಶೆಟ್ಟಿ, ಉಪ್ಪಾರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ವೆಂಕೋಬ ಭಾಗವಹಿಸಲಿದ್ದಾರೆ ಎಂದರು.

ದೇಶಾದ್ಯಂತ ಹರಿದು ಹಂಚಿಹೋಗಿರುವ ಸಮುದಾಯವನ್ನು ಒಗ್ಗೂಡಿಸುವುದು, ಕೇಂದ್ರ ಸರ್ಕಾರವೇ ಭಗೀರಥ ಜಯಂತಿ ಆಚರಿಸಬೇಕೆಂಬ ಒತ್ತಾಯ, ಗಂಗೆಯನ್ನು ಧರೆಗೆ ತಂದ ಮಹರ್ಷಿ ಭಗೀರಥರ ಭವ್ಯ ಮೂರ್ತಿಯನ್ನು ಗಂಗೆ ದಡದಲ್ಲಿ ಸ್ಥಾಪಿಸಬೇಕು, ಉಪ್ಪಾರರ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಒತ್ತಾಯ ಈ ರಥಯಾತ್ರೆಯದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಟಿ.ಆರ್.ಶಿವರಾಜ್, ಲಿಂಗರಾಜು, ಮಲ್ಲೇಶ್, ಮರಿಸ್ವಾಮಿ, ಶಿವಮಲ್ಲು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.12.2023 ಶುಕ್ರವಾರ, ಮಳೆ ನಕ್ಷತ್ರ: ಮೂಲ 16.12.2023ರಿಂದ 28.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ತರಳಬಾಳು ಶಿಕ್ಷಣ ಕೇಂದ್ರ :** ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಸ್ತು ಪ್ರದರ್ಶನ, ಉದ್ಘಾಟನೆ: ನಿವೃತ್ತ ಪರಿಸರ ಇಸ್ರೋ ವಿಜ್ಞಾನಿ ಡಾ. ವಿ. ಜಗನ್ನಾಥ್, ಮುಖ್ಯ ಅತಿಥಿಗಳು : ಡಾ. ಜಿ.ಆರ್. ಶಿವಮೂರ್ತಿ, ಉಪಸ್ಥಿತರು : ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ. ಆನಂದಪ್ಪ, ಅಧ್ಯಕ್ಷತೆ : ತರಳಬಾಳು ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಡಿ. ನಾಗೇಂದ್ರಪ್ಪ, ಸ್ಥಳ: ಶಾಲಾ ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸೋರಿಯಾಸಿಸ್, ಇಸುಬು, ಹುಳಕಡ್ಡಿ ಚರ್ಮರೋಗಗಳಿಗೆ ಆಯುರ್ವೇದ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಶ್ರೀ ಸ್ವಾಮಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ನೂತನ ಪತ್ರಿಕಾ ಭವನ ಹಾಗೂ ತರಬೇತಿ ಕೇಂದ್ರದ ಶಂಕುಸ್ಥಾಪನಾ ಕಾರ್ಯಕ್ರಮ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಂಕುಸ್ಥಾಪನೆ ಮತ್ತು ನಾಮಫಲಕ ಅನಾವರಣ: ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್, ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಉಪಸ್ಥಿತರು: ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ. ರಾಜೀವ್, ಯಶಸ್ವಿ ಎಸ್.ಸೋಮಶೇಖರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಪರ ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ಮದನ್‌ಗೌಡ, ಸ್ಥಳ: ಕೆಎನ್‌ಎಸ್ ಬಡಾವಣೆ, ಸಿಎ ನಿವೇಶನ ಸಂಖ್ಯೆ–2, ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರದ ಅತಿಥಿ ಉಪನ್ಯಾಸಕ ಡಾ. ಚಂದ್ರಗುಪ್ತ ಅವರಿಂದ ಭಾರತದ ಸಂವಿಧಾನದ ಲಕ್ಷಣಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ವರಕೋಡು ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲ ಅಶ್ವತಪ್ಪ, ಸ್ಥಳ: ಮೊರಾರ್ಜಿ ದೇಸಾಯಿ ವಸತಿ ಶಾಲೆ, ವರಕೋಡು, ಮಧ್ಯಾಹ್ನ 2.30ಕ್ಕೆ.

■ **ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ:** ರಾಷ್ಟ್ರೀಯ ಗಣಿತ ದಿನ, ಅಧ್ಯಕ್ಷತೆ: ಮುಖ್ಯ ಶಿಕ್ಷಕ ಕೃಪಾಶಂಕರ್, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಪ್ರಧಾನ ಭಾಷಣ: ಲೇಖಕ ಎಸ್.ಜಿ.ಸೀತಾರಾಂ, ವಿಶೇಷ ಆಹ್ವಾನಿತರು: ಮುತ್ತುಸ್ವಾಮಿ, ಬಹುಮಾನ ವಿತರಣೆ: ಜಮುನಾರಾಣಿ ಮಿರ್ಲೆ, ಉಪಸ್ಥಿತರು: ಎನ್.ಕೆ. ಕಾವೇರಿಯಮ್ಮ, ಎ.ಸಂಗಪ್ಪ, ಸ್ಥಳ: ಡಿ.ಬನುಮಯ್ಯ ಬಾಲಕರ ಪ್ರೌಢಶಾಲೆ, ಮಧ್ಯಾಹ್ನ 2.30ಕ್ಕೆ.

■ **ಜಿಲ್ಲಾ ಸಮಾದೇಷ್ಟರು ಗೃಹರಕ್ಷಕ ದಳ:** ಗೃಹರಕ್ಷಕರ ವಾರ್ಷಿಕ ವಲಯ ಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಕೇಂದ್ರ ಅಬಕಾರಿ ಮತ್ತು ಸೀಮಾಸುಂಕ ಇಲಾಖೆ ಅಪರ ಆಯುಕ್ತರಾದ ಪ್ರಿಯಾಂಕ, ಅಪರ ಪೊಲೀಸ್ ಅಧೀಕ್ಷಕಿ ಡಾ.ಬಿ.ಎನ್. ನಂದಿನಿ, ಅಧ್ಯಕ್ಷತೆ: ಜಿಲ್ಲಾ ಗೃಹರಕ್ಷಕ ದಳ ಸಮಾದೇಷ್ಟರಾದ ಡಾ.ಎಂ.ಕಾಂತರಾಜು, ಸ್ಥಳ: ಡಿಎಆರ್ ಮೈದಾನ, ಜ್ಯೋತಿನಗರ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಲಾಲ್‌ಗುಡಿ ಜಿ.ಜಯರಾಮನ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಶರಧಿ ಪಾಟೀಲ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ನೇದನೂರಿ ಕೃಷ್ಣಮೂರ್ತಿ–ಹಾಡುಗಾರಿಕೆ, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ರಾಧಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ, 8.00 ರಂಗ ಕಲಾವಿದರಾದ ನಂಜನಗೂಡಿನ ಕೆರೆಹಳ್ಳಿ ಮಹದೇವಸ್ವಾಮಿ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುತ್ತಾರೆ–ಡಾ.ಮೈಸೂರು ಉಮೇಶ್, 9.30 ಮಲ್ಲಾಡಿ ಸೂರಿ ಬಾಬು–ಹಾಡುಗಾರಿಕೆ, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ಬಲಿಪಶು" ರಚನೆ–ಡಾ.ಎಲ್. ಮಂಜುನಾಥ ಹಾಗೂ ಡಾ.ಕೆ.ಸತ್ಯನಾರಾಯಣ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ

■ **ರಾಧಾನಂದ ಎಜುಕೇಷನಲ್ ಟ್ರಸ್ಟ್, ಸಹನಾ ಕಾನ್ವೆಂಟ್:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಡಾ. ಸುಧಾಕರ ಹೊಸಳ್ಳಿ, ಗೌರವ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಸ್ಕೂಲ್ ಆಫ್ ಲಾಂಗ್ವೇಜಸ್ :** ಬೆಳಗ್ಗೆ 11ಕ್ಕೆ ಭಾರತೀಯ ಸಾಹಿತ್ಯಂ (ಇಂಡಿಯನ್ ಲಿಟರೇಚರ್), ಭಾಷಾ ಸಂಗಮ–2023 ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಸದರನ್ ರೀಜನಲ್ ಲಾಂಗ್ವೇಜಸ್ ಸೆಂಟರ್ ಪ್ರಿನ್ಸಿಪಾಲ್ ಡಾ. ರಾಕೇಶ್ ಚೇರುಕೊಡು, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಕರಾಮುವಿವಿ ಡೀನ್ ಪ್ರೊ. ಎನ್. ಲಕ್ಷ್ಮಿ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸ್ಥಳ: ಬಿಒಎಂ ಹಾಲ್, ಕರಾಮುವಿವಿ.

■ **ಶ್ರೀ ಕೃಷ್ಣ ಗಾನಸಭಾ :** ಸ್ಮರಣಾರ್ಥ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, ಮುಖ್ಯ ಅತಿಥಿಗಳು : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸು, ಕೊಳಲು ಮಾಂತ್ರಿಕ ಟಿ.ಆರ್. ಮಹಾಲಿಂಗಂ ಅವರ ಜನ್ಮ ದಿನೋತ್ಸವದ ಅಂಗವಾಗಿ ವಿದ್ವಾನ್ ವಂಶೀಧರ್ ಮತ್ತು ವೃಂದದವರಿಂದ ಕೊಳಲು ವಾದನ, ವಿದ್ವಾನ್ ಕೆ. ಜನಾರ್ಧನ–ಪಿಟೀಲು, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 5.45ಕ್ಕೆ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪಂಡಿತ್ ಶ್ರೀ ರಾಮಚಂದ್ರಾಚಾರ್ಯ ಉಮರ್ಜಿ ಅವರಿಂದ ಭಗವದ್ಗೀತೆ ಪ್ರವಚನ– ಅಧ್ಯಾಯ 13, ಸ್ಥಳ: ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಅಗ್ರಹಾರ, ಸಂಜೆ 6.30 ರಿಂದ.

■ **ನಿರಂತರ ಫೌಂಡೇಶನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ನಿರಂತರ ರಂಗ ಉತ್ಸವ, ಸಂಜೆ 6.30ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು : ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಹಿರಿಯ ಅಭಿಯಂತರ ಎನ್.ಎಸ್. ಆನಂದ್, ಸಂಜೆ 7ಕ್ಕೆ ಬೆಂಗಳೂರು ಅಭಿನಯ ತರಂಗ ತಂಡದಿಂದ ಆತಂಕವಾದಿಯ ಆಕಸ್ಮಿಕ ಸಾವು ನಾಟಕ ಪ್ರದರ್ಶನ, ರಚನೆ : ದಾರಿಯೋ ಫೋ, ನಿರ್ದೇಶನ : ಎಚ್.ಕೆ. ಶ್ವೇತಾರಾಣಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ.

■ **ಶ್ರೀ ಗೀತಾಪ್ರಚಾರಿಣೀ ಸಭಾ ಟ್ರಸ್ಟ್:** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7ರಿಂದ ಗೀತಾ ಜಯಂತಿ ಧ್ವಜಾರೋಹಣ, ಬೆ. 8ರಿಂದ ಸಾಮೂಹಿಕ ಭಗವದ್ಗೀತಾ ಪಾರಾಯಣ, ಬೆ. 8.30ರಿಂದ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6ರಿಂದ ಬೆಂಗಳೂರಿನ ರಾಮಜ್ಯೋತಿನಗರದ ವಂದನಾ ಭಜನಾ ಮಂಡಳಿ ಅವರಿಂದ ಭಜನೆ, ಸಂಜೆ 7ರಿಂದ ವಿದ್ವಾನ್ ಸತ್ಯನಾರಾಯಣ ಅವರಿಂದ ಪ್ರವಚನ 'ಕೃಷ್ಣವಾಣಿ', ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 22 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 245 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಪ್ರಧಾನಿ ಭೇಟಿಯಾದ ಗೌಡರ ಪರಿವಾರ

● ಆತ್ಮೀಯವಾಗಿ ಉಪಚರಿಸಿದ ಪ್ರಧಾನಿ ● ಸೀಟು ಹಂಚಿಕೆ, ಅಭ್ಯರ್ಥಿಗಳ ಆಯ್ಕೆ ಸಂಬಂಧ ಮೋದಿ ಅವರೊಂದಿಗೆ ಕುಮಾರಸ್ವಾಮಿ ಚರ್ಚೆ ● ಸಿದ್ದರಾಮಯ್ಯ ಆಡಳಿತಾವಧಿಯ ಭ್ರಷ್ಟಾಚಾರ ಕುರಿತಂತೆಯು ಪ್ರಸ್ತಾಪಿಸಿರುವ ಊಹಾಪೋಹ

ಬೆಂಗಳೂರು, ಡಿ.21(ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನಲ್ಲಿರುವ ಒಡಕು, ಸಿದ್ದರಾಮಯ್ಯ ಸರ್ಕಾರದಲ್ಲಿನ ಭ್ರಷ್ಟಾಚಾರ ಮತ್ತು ತಾರತಮ್ಯ ಆಡಳಿತ, ಮುಂಬರುವ ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಪ್ರಧಾನಿ ಮೋದಿ ಅವರಿಗೆ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಮಾಹಿತಿ ನೀಡಿದ್ದಾರೆ.

ದೆಹಲಿಯಲ್ಲಿಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಜತೆಗೂಡಿ ಪ್ರಧಾನಿ ಅವರನ್ನು ಭೇಟಿ ಮಾಡಿ ಸುಮಾರು 50 ನಿಮಿಷಗಳ ಕಾಲ ಚರ್ಚೆ ನಡೆಸಿದ ಸಂದರ್ಭದಲ್ಲಿ ಲೋಕಸಭಾ ಚುನಾವಣೆ ವಿಚಾರವೇ ಕೇಂದ್ರಬಿಂದುವಾಗಿತ್ತು.


ಕರ್ನಾಟಕ ಕಾಂಗ್ರೆಸ್ ಮತ್ತು ಆಡಳಿತದಲ್ಲಿ ಇರುವ ಭಿನ್ನಾಭಿಪ್ರಾಯವನ್ನು ಮಾತುಕತೆ ಸಂದರ್ಭದಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟ ಕುಮಾರಸ್ವಾಮಿ ಅವರು, ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ನಡೆದಿರುವ ಹಗರಣಗಳ ಬಗ್ಗೆಯೂ ದಾಖಲೆ ಸಹಿತ ಪ್ರಧಾನಿ ಅವರಿಗೆ ಮಾಹಿತಿ ನೀಡಿ, ಚುನಾವಣೆಯಲ್ಲಿ ಈ ವಿಷಯವನ್ನು ರಾಜಕೀಯವಾಗಿ ಬಳಸಿಕೊಳ್ಳುವ ಕುರಿತಂತೆ ಚರ್ಚೆಯಾಗಿದೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದ ಮಟ್ಟಿಗೆ ಬಿಜೆಪಿ ಮತ್ತು ಜೆಡಿಎಸ್ ಒಗ್ಗಟ್ಟಿನಿಂದ ಹೋರಾಟ ನಡೆಸಿ 20ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವ ಸಂಬಂಧ ಪ್ರಧಾನಿ ಅವರು ಕೆಲವು ● 9ನೇ ಪುಟಕ್ಕೆ



ಮಾಜಿ ಪ್ರಧಾನಿ ದೇವೇಗೌಡರ ಪರಿವಾರ ಗುರುವಾರ ನವದೆಹಲಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿಯಾಯಿತು.

ಬಿಜೆಪಿ ರಾಜ್ಯಾಧ್ಯಕ್ಷರಾದ ಬಳಿಕ

ಮೊದಲ ಬಾರಿ ಪ್ರಧಾನಿ ಮೋದಿ ಭೇಟಿಯಾದ ಬಿ.ವೈ.ವಿಜಯೇಂದ್ರ




ನವದೆಹಲಿ, ಡಿ.21–ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರು ಬಿಜೆಪಿ ರಾಜ್ಯಾಧ್ಯಕ್ಷರಾದ ನಂತರ ಇದೇ ಮೊದಲ ಬಾರಿಗೆ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು.

ಇದಕ್ಕು ಮುನ್ನ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಮತ್ತು ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ● 9ನೇ ಪುಟಕ್ಕೆ

ಜ.12, ಯುವನಿಧಿ ಯೋಜನೆ ಜಾರಿ

● ಉನ್ನತ ವ್ಯಾಸಂಗ ಮಾಡುತ್ತಿರುವವರು, ಸರ್ಕಾರಿ ಇಲ್ಲವೇ ಖಾಸಗಿ ವಲಯದ ಉದ್ಯೋಗಿಗಳಿಗಿಲ್ಲ ಯುವನಿಧಿ ● ಮಹತ್ವಾಕಾಂಕ್ಷಿ ಐದು ಗ್ಯಾರಂಟಿಗಳಲ್ಲಿ ಇದೇ ಅಂತಿಮ ಗ್ಯಾರಂಟಿ



ಬೆಂಗಳೂರು, ಡಿ.21(ಕೆಎಂಶಿ) –ಪದವಿ ಪಡೆದು ಉನ್ನತ ವ್ಯಾಸಂಗ ಮಾಡುತ್ತಿರುವವರು ಹಾಗೂ ಸರ್ಕಾರಿ ಇಲ್ಲವೇ ಖಾಸಗಿ ವಲಯಗಳಲ್ಲಿ ಉದ್ಯೋಗದಲ್ಲಿರುವವರು ಯುವನಿಧಿ ಸೌಲಭ್ಯ ಪಡೆಯಲು ಅರ್ಹರಲ್ಲ ಎಂದು ಸರ್ಕಾರ ಇಂದಿಲ್ಲಿ ಸ್ಪಷ್ಟಪಡಿಸಿದೆ.



ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ್, ಯುವನಿಧಿ ಯೋಜನೆ ಜನವರಿ 12ರಿಂದ ಜಾರಿಗೊಳ್ಳಲಿದೆ. ವಿಧಾನಸಭಾ ಚುನಾವಣೆಗೂ ಮುನ್ನ ನಮ್ಮ ಪಕ್ಷ ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಈಗಾಗಲೇ ನಾಲ್ಕು ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದು, ಕೊನೆಯ ಭರವಸೆಯನ್ನೂ ಸರ್ಕಾರ ಈಗ ಈಡೇರಿಸುತ್ತಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯಾದ್ಯಂತ ಒಟ್ಟು 5,29,153 ವಿದ್ಯಾರ್ಥಿಗಳು ಪದವಿ ಇಲ್ಲವೇ ಡಿಪ್ಲೊಮಾ ಪಡೆದಿದ್ದಾರೆ. ಪದವಿ ಪಡೆದ ನಂತರ ನಿರುದ್ಯೋಗಿಗಳಾಗಿ ಇರುವವರು ಡಿಸೆಂಬರ್ 26ರಿಂದ ಯುವನಿಧಿ ಯೋಜನೆಗೆ ನೋಂದಣಿ ಮಾಡಿಕೊಳ್ಳಬೇಕು. ನಂತರ ಮಾಸಿಕ ಪದವಿ ಪಡೆದ ನಿರುದ್ಯೋಗಿಗಳಿಗೆ 3,000 ರೂ., ಡಿಪ್ಲೊಮಾ ಪಡೆದವರಿಗೆ 1,500 ರೂ. ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಗದು ವರ್ಗಾವಣೆ ಆಗಲಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿ ಪದವಿ, ಡಿಪ್ಲೊಮಾದಲ್ಲಿ 2023ರಲ್ಲಿ ತೇರ್ಗಡೆಯಾಗಿರಬೇಕು.

ಕರ್ನಾಟಕದಲ್ಲಿ ಕನಿಷ್ಠ ಆರು ವರ್ಷ ವ್ಯಾಸಂಗ ಮಾಡಿರಬೇಕು, ಸ್ವಯಂ ಉದ್ಯೋಗಿಗಳಾಗಿದ್ದರೂ ಅಂತಹವರಿಗೆ ಇದರ ಲಾಭ ಇರುವುದಿಲ್ಲ. ● 9ನೇ ಪುಟಕ್ಕೆ



ಕೊರೊನಾ ರೂಪಾಂತರಿ ಹಾವಳಿ ಯಾವ ನಿರ್ಬಂಧವೂ ಇಲ್ಲ; ಆದರೆ ಎಚ್ಚರಿಕೆ ವಹಿಸಿ

● ರಾಜ್ಯದ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ● ಎಲ್ಲರೂ ಮಾಸ್ಕ್ ಧರಿಸುವ ಅಗತ್ಯವಿಲ್ಲ ● ತಜ್ಞರ ಸಮಿತಿ ವರದಿ ಆಧರಿಸಿ ಕಾಲಾನುಕಾಲಕ್ಕೆ ಸಭೆ ● ಲಸಿಕೆ ಸಿದ್ಧವಿಟ್ಟುಕೊಳ್ಳಲು ಮುಖ್ಯಮಂತ್ರಿ ಉನ್ನತ ಸಭೆಯಲ್ಲಿ ಸೂಚನೆ ● ಮೊದಲಾದಂತೆ ಯಾವುದೇ ಕೊರತೆ ಆಗಬಾರದು



ಬೆಂಗಳೂರು, ಡಿ.21(ಕೆಎಂಶಿ)– ಆರ್ಥಿಕ ಚಟುವಟಿಕೆಗಳಿಗೆ ನಿರ್ಬಂಧವಿಲ್ಲ, ಆದರೆ ಕೊರೊನಾ ರೂಪಾಂತರಿ ತಳಿ ಜೆಎನ್.1 ಬಗ್ಗೆ ಎಚ್ಚರಿಕೆ ವಹಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಸೋಂಕು ತಡೆಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲರೂ ಮಾಸ್ಕ್ ಧರಿಸುವ ಅವಶ್ಯಕತೆ ಇಲ್ಲ, ಆದರೆ, 60 ವರ್ಷ ಮೇಲ್ಪಟ್ಟವರು, ಬಹುವಿಧದ ಖಾಯಿಲೆಯಿಂದ ಬಳಲುತ್ತಿರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಎಂದಿದ್ದಾರೆ.

ಜನದಟ್ಟಣೆಯಿಂದ ದೂರ ಇರಬೇಕು, ರೂಪಾಂತರಿಯ ಹೊಸ ತಳಿ ಜೆಎನ್.1 ಅಪಾಯಕಾರಿ ಅಲ್ಲ ಎಂದು ತಜ್ಞರು ತಿಳಿಸಿದ್ದಾರೆ, ಆದರೂ ನಾವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತೇವೆ ಹಿಂದಿನ ಸರ್ಕಾರಗಳಲ್ಲಾಗಿರುವ ಅವಾಂತರಗಳು ಮತ್ತೆ ಮರುಕಳಿಸಬಾರದೆಂಬ ಉದ್ದೇಶದಿಂದ ಈ ವೈರಾಣು ಬಗ್ಗೆ ಸದಾ ಎಚ್ಚರಿಕೆಯಿಂದಿರಲು ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಚಿವ ● 9ನೇ ಪುಟಕ್ಕೆ

ಸಂಸತ್ ಭವನದಲ್ಲಿ ಕಲರ್ ಸ್ಮೋಕ್ ಸ್ಫೋಟಿಸಿದ ಪ್ರಕರಣಕ್ಕೆ ಬಿಗ್ ಟ್ವಿಸ್ಟ್

ಮನೋರಂಜನ್ ಸಂಪರ್ಕ: ದೆಹಲಿ ಪೊಲೀಸರಿಂದ ಮೈಸೂರಿನ ಸೂರಪ್ಪನ ವಿಚಾರಣೆ

● ಬೆಳಗ್ಗೆಯಿಂದ ರಾತ್ರಿ ತನಕ ಪ್ರಶ್ನೆಗಳ ಸುರಿಮಳೆ
● ಮತ್ತಷ್ಟು ದಿನ ದೆಹಲಿ ಪೊಲೀಸರ ವಾಸ್ತವ್ಯ ಸಾಧ್ಯತೆ
● ಪ್ರಕರಣ ಇನ್ನಷ್ಟು ಜನರಿಗೆ ಉರುಳಾಗುವ ಸಾಧ್ಯತೆ

ಮೈಸೂರು, ಡಿ.21(ಬಿಎಲ್‌ಯು)– ಲೋಕಸಭೆಯ ಕಲಾಪದಲ್ಲಿ ಕಲರ್ ಗ್ಯಾಸ್ ಸ್ಫೋಟಿಸಿದ ಪ್ರಕರಣದಲ್ಲಿ ಮೈಸೂರಿನ ಮತ್ತೊಬ್ಬ ಯುವಕನನ್ನು ದೆಹಲಿ ಪೊಲೀಸ್ ಅಧಿಕಾರಿಗಳು ವಿಚಾರಣೆಗೊಳಪಡಿಸಿದ್ದಾರೆ. ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್ ಬಳಿಯ ಸಲೂನ್ ನಡೆಸುತ್ತಿರುವ ಸೂರಪ್ಪ ಎಂಬಾತನನ್ನು ದೆಹಲಿ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಕಲರ್ ಗ್ಯಾಸ್ ಸ್ಫೋಟಿಸಿದ ಮನೋರಂಜನ್‌ನಿಂದ ಬಹಳಷ್ಟು ಸ್ಫೋಟಕ ಮಾಹಿತಿಗಳು ದೆಹಲಿ ಪೊಲೀಸರಿಗೆ ಲಭ್ಯವಾಗಿದೆ.

ಇದರಲ್ಲಿ ಮನೋರಂಜನ್ ಹಾಗೂ ಸೂರಪ್ಪನಡುವೆ ಬ್ಯಾಂಕ್ ಮೂಲಕ ಲಕ್ಷಾಂತರ ರೂಪಾಯಿ ಹಣಕಾಸು ● 9ನೇ ಪುಟಕ್ಕೆ



ಸೂರಪ್ಪನ ನಡೆಸುತ್ತಿದ್ದ ಸೆಲ್ಯೂನ್ ಶಾಪ್ (ಗುರುತು ಮಾಡಿರುವುದು)

ಕರ್ನಾಟಕ–ಕೇರಳ ಗಡಿ ಬಾವಲಿ ಚೆಕ್‌ಪೋಸ್ಟ್‌ಗೆ ಡಿಸಿ ಡಾ.ಕೆ.ವಿ.ರಾಜೇಂದ್ರ ಭೇಟಿ




ಮೈಸೂರು, ಡಿ.21(ಎಂಟಿವೈ)– ಕೇರಳದಲ್ಲಿ ಕೊರೊನಾ ರೂಪಾಂತರಿ ಜೆಎನ್–1 ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಕರ್ನಾಟಕ–ಕೇರಳ ಗಡಿ ಬಾವಲಿ ಚೆಕ್‌ಪೋಸ್ಟ್‌ಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಕೈಗೊಂಡಿರುವ ಕ್ರಮ ಕುರಿತು ಪರಿಶೀಲನೆ ನಡೆಸಿದರು.

ಕೇರಳ ಸೇರಿದಂತೆ ದೇಶದಲ್ಲಿ ಕೊರೊನಾ ರೂಪಾಂತರಿ ಜೆಎನ್–1 ಸ್ಫೋಟಗೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಜನರ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ಕಟ್ಟೆಚ್ಚರ ವಹಿಸಲು ಜಿಲ್ಲಾಡಳಿತ ಸೂಚನೆ ನೀಡಿದೆ. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ● 9ನೇ ಪುಟಕ್ಕೆ

ಮೈಸೂರಲ್ಲಿ ಆರು ಮಂದಿಗೆ ಕೊರೊನಾ ಸೋಂಕು

ಇವರೆಲ್ಲಾ ವಿವಿಧ ಕಾಯಿಲೆಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ

ಮೈಸೂರು, ಡಿ.21(ಎಸ್‌ಬಿಡಿ)–ಮೈಸೂರಲ್ಲಿ ಬೇರೆ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗಿರುವ ಆರು ಮಂದಿಯಲ್ಲಿ ಕೋವಿಡ್ ಸೋಂಕು ದೃಢಪಟ್ಟಿದೆ. ಆದರೆ ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಅನಿಯಂತ್ರಿತ ಡಯಾಬಿಟಿಸ್, ಅಧಿಕ ರಕ್ತದೊತ್ತಡ ಸೇರಿದಂತೆ ಒಂದಕ್ಕಿಂತ ಹೆಚ್ಚು ಸಮಸ್ಯೆಗಳಿರುವ ಕೊಮಾರ್ಬಿಡಿಟಿ ಪ್ರಕರಣಗಳಲ್ಲಿ ಕೋವಿಡ್ ದೃಢಪಟ್ಟಿದೆ. ಮೂತ್ರಪಿಂಡ, ಕಿಡ್ನಿ ಕಾರ್ಯ ಪರೀಕ್ಷೆ ಸೇರಿದಂತೆ ಇನ್ನಿತರ ವೈದ್ಯಕೀಯ ಪರೀಕ್ಷೆಗಳ ಜೊತೆಗೆ ಕೋವಿಡ್–19 ಪರೀಕ್ಷೆಯನ್ನೂ ನಡೆಸಿದ ಸಂದರ್ಭದಲ್ಲಿ ಸೋಂಕಿರುವುದು ದೃಢಪಟ್ಟಿದೆ. ಆದರೆ ಅವರಲ್ಲಿ ಯಾರಿಗೂ ಟ್ರಾವೆಲಿಂಗ್ ಹಿಸ್ಟರಿ ಇಲ್ಲದ ಕಾರಣ ● 6ನೇ ಪುಟಕ್ಕೆ



ಪಿ.ಸಿ.ಕುಮಾರಸ್ವಾಮಿ

ಡಿ.ಕೆ.ಸುರೇಶ್ ಸೇರಿ ಮೂವರು ಸಂಸದರ ಅಮಾನತು: ಸಸ್ಪೆಂಡ್ ಆದವರ ಸಂಖ್ಯೆ ಬರೋಬ್ಬರಿ 146

ನವದೆಹಲಿ, ಡಿ.21– ಸಂಸತ್ ಭದ್ರತಾ ಲೋಪ ಖಂಡಿಸಿ ಕಲಾಪಕ್ಕೆ ಅಡ್ಡಿಪಡಿಸಿದ ಮೂವರು ಕಾಂಗ್ರೆಸ್ ಸಂಸದರನ್ನು ಗುರುವಾರ ಚಳಿಗಾಲದ ಅಧಿವೇಶನದ ಉಳಿದ ಭಾಗಕ್ಕೆ ಲೋಕಸಭೆಯಿಂದ ಅಮಾನತುಗೊಳಿಸಲಾಗಿದ್ದು, ಇದರೊಂದಿಗೆ ಅಮಾನತುಗೊಂಡ ಸಂಸದರ ಸಂಖ್ಯೆ 146ಕ್ಕೆ ಏರಿಕೆಯಾಗಿದೆ. ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಅವರು ಡಿ.ಕೆ.ಸುರೇಶ್, ದೀಪಕ್ ಬೈಜ್ ಮತ್ತು ನಕುಲ್ ನಾಥ್ ಅವರನ್ನು ಅಮಾನತುಗೊಳಿಸುವ ಪ್ರಸ್ತಾಪ ಮಂಡಿಸಿದರು. ದೀಪಕ್ ಬೈಜ್, ಡಿ.ಕೆ.ಸುರೇಶ್, ನಕುಲ್‌ನಾಥ್ ಅವರು ಸದನದ ಬಾವಿಗೆ ಇಳಿದು ಫಲಕಗಳನ್ನು ಪ್ರದರ್ಶಿಸುವ ಮೂಲಕ ಅಶಿಸ್ತಿನಿಂದ ವರ್ತಿಸಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಈ ಸದನ ಅವರನ್ನು ಸದನದಿಂದ ಅಮಾನತುಗೊಳಿಸಬಹುದು ಎಂದು ಜೋಶಿ ಹೇಳಿದರು. ● 6ನೇ ಪುಟಕ್ಕೆ

ಕೆಆರ್‌ಎಸ್ ಹಿನ್ನೀರಲ್ಲಿ ಇಬ್ಬರು ಅಪರಿಚಿತ ಯುವಕರ ಶವ ಪತ್ತೆ

● ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ನೀರಿಗೆಸೆದಿದ್ದಾರೆ ● ಎಲ್ಲೋ ಕೊಂದು ಇಲ್ಲಿ ತಂದು ಹಾಕಿರುವ ಶಂಕೆ

ಕೆ.ಆರ್.ನಗರ, ಡಿ.21–ಯುವಕರಿಬ್ಬರನ್ನು ಕೊಲೆಗೈದು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಸಾಗರಕಟ್ಟೆ ಸೇತುವೆ ಬಳಿ ಮೂಲೆಪೆಟ್ಲುವಿನಲ್ಲಿ ಕೆಆರ್‌ಎಸ್ ಹಿನ್ನೀರಲ್ಲಿ ಬಿಸಾಡಲಾಗಿದೆ. ಪ್ಲಾಸ್ಟಿಕ್ ಚೀಲದಲ್ಲಿ ತುಂಬಿದ ಸ್ಥಿತಿಯಲ್ಲಿ ಇಬ್ಬರು ಯುವಕರ ಮೃತದೇಹ ಪತ್ತೆಯಾಗಿದೆ. ಸುಮಾರು 25 ರಿಂದ 30 ವರ್ಷ ವಯಸ್ಸಿನವರಾಗಿದ್ದು, ಎಲ್ಲೋ ಕೊಂದು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಸಾಗರಕಟ್ಟೆ ಬಳಿ ಕೆಆರ್‌ಎಸ್ ಹಿನ್ನೀರಿನಲ್ಲಿ ಬಿಸಾಡಿ ಹೋಗಿರುವ ಶಂಕೆ ವ್ಯಕ್ತವಾಗಿದೆ.

ಓರ್ವನ ಶವ ನಿನ್ನೆ ಪತ್ತೆಯಾಗಿದೆ. ಆತನ ಕೈ ಮೇಲೆ ನಾಗರಾಜನ್ VR POSTER 4B LEGEND ಎಂದು ಟ್ಯಾಟೂ ಹಾಕಲಾಗಿದೆ. ಅದೇ ರೀತಿ ಮತ್ತೋರ್ವನ ಶವ ಬೆಳಗ್ಗೆ ಅದೇ ಸ್ಥಳದಲ್ಲಿ ಪತ್ತೆಯಾಗಿದ್ದು ಅವನ ಕೈಯಲ್ಲೂ ಸೂಪರ್ ಮ್ಯಾನ್, ಅಮ್ಮ ಎಸ್.ಉಪೇಂದ್ರ, VR46 the doctor Legend ಎಂದು ಹಚ್ಚೆ, ಬಲ ಕೈಯಲ್ಲಿ ಸಿಂಹದ ಚಿತ್ರ ಹಾಗೂ ಶಿಲುಬೆ ಚಿತ್ರವಿದೆ. ಜೊತೆಗೆ ಹೃದಯದ ಆಕೃತಿ ಒಳಗೆ AM ಎಂದು ಹಾಕಲಾಗಿದೆ.

ಈ ಬಗ್ಗೆ ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ಕೆ.ಆರ್.ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂತೋಷ್, ಪಿಎಸ್‌ಐಗಳಾದ ಧನರಾಜು, ನಂಜಪ್ಪ, ಸಿಬ್ಬಂದಿಗಳಾದ ಧನಂಜಯ, ಜವರೇಶ್, ಮಂಜು, ದೇವರಾಜು ತಂಡ ತಡರಾತ್ರಿ ಶವ ಮೇಲೆತ್ತಿ ಪರಿಶೀಲನೆ ನಡೆಸಿದರು. ಬೆಳ್ಳಂಬೆಳಗ್ಗೆ ಮತ್ತೋರ್ವನ ಶವ ಅದೇ ಸ್ಥಳ(ಹಿನ್ನೀರಿನಲ್ಲಿ)ದಲ್ಲಿ ಪತ್ತೆಯಾಗಿದ್ದು, ಸ್ಥಳಕ್ಕೆ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ ಮತ್ತು ಡಿವೈಎಸ್ಪಿ ಕರೀಂ ರಾವತ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಪೊಲೀಸರು ಮೃತರ ಮಾಹಿತಿ ಕಲೆ ಹಾಕಲು ಮುಂದಾಗಿದ್ದಾರೆ.

ಶವಗಳನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದ್ದು, ವಾರಸುದಾರರು ಇದ್ದರೆ ಕೆ.ಆರ್.ನಗರ ಪೊಲೀಸರನ್ನು ಸಂಪರ್ಕಿಸುವಂತೆ ಕೋರಲಾಗಿದೆ. ಬೆರಳಚ್ಚು ತಜ್ಞರು, ಎಫ್‌ಎಸ್‌ಎಲ್ ತಂಡ, ಶ್ವಾನದಳ ಸೇರಿದಂತೆ ಪೊಲೀಸ್ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿತು. ಕೊಲೆಯಾದವರ ವಾರಸುದಾರರು ಪತ್ತೆಯಾದರೆ ಕೊಲೆಗಾರರನ್ನು ಶೀಘ್ರ ಪತ್ತೆ ಮಾಡಬಹುದು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್ ತಿಳಿಸಿದರು.





ಮೈಸೂರು ಜಿಲ್ಲೆ ಕೆ.ಆರ್ ನಗರ ಪೊಲೀಸ್ ಠಾಣಾ ಸರಹದ್ದಿನ ಮೂಲೆಪೆಟ್ಲು ಗ್ರಾಮದ ಬಳಿ ಕೆಆರ್‌ಎಸ್ ಹಿನ್ನೀರಿನಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿದ್ದಂತೆ ಇಬ್ಬರ ಶವಗಳು ಪತ್ತೆ ಆಗಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸೀಮಾ ಲಾಟ್ಕರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ.ನಂದಿನಿ ಭೇಟಿ ನೀಡಿ, ಪರಿಶೀಲಿಸಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : "ಅಲ್ಲರೀ, ಮದುವೆ ಮಾಡಿಕೊಂಡಿದ್ದೇ ಅಡುಗೆ ಮನೆಯಿಂದ ಮುಕ್ತಿ ಸಿಗಲಿ ಅಂತ, ಅಂಥಾದ್ರಲ್ಲಿ ನೀವ್ಯಾಕ್ರಿ ಅಡುಗೆ ಮಾಡ್ತೀರಿ"

ತಿಮ್ಮ : "ನಾನೆಲ್ಲಿ ಮಾಡ್ತೀನಿ? ಅವಳು ನನ್ನ ಕೈಲಿ ಮಾಡಿಸ್ತಾಳೆ ಅಷ್ಟೇ!"

ಮೈಸೂರು ಮಿತ್ರ

ಶುಕ್ರವಾರ, 22 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........


ನಿಮಗೆ ಅಧಿಕಾರದ ಅವಶ್ಯಕತೆಯಿದ್ದಾಗ ದೃಢವಾಗಿರಿ. ಆದರೆ ಅಧಿಕಾರ ಚಲಾಯಿಸುವಾಗ ಸಹೃದಯಿಗಳಾಗಿರಿ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೆಮ್ಮೋ ಎಮ್ಮೆ ಕೊಟ್ಟು ತಿವಿಂಯೋ ಎತ್ತು ಕೊಂಡಂಗೆ

ನಿಮ್ಮ ಪತ್ರಗಳು

ಮೈಸೂರು ವಿಮಾನ ನಿಲ್ದಾಣಕ್ಕೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ಸೂಕ್ತ

ಮಾನ್ಯರೆ,



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ 1902 ರಿಂದ 1940ರವರೆಗಿನ 38 ವರ್ಷಗಳ ಅವಧಿಯಲ್ಲಿ ಮೈಸೂರು ರಾಜ್ಯ ಸರ್ವತೋಮುಖ ಅಭಿವೃದ್ಧಿ ಕಂಡಿದೆ. ಬಹುಶಃ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡಿದ್ದರಿಂದ ಈ ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಕೂಡ ಆಗಿನ ಕಾಲದಲ್ಲೇ ಗಾಂಧೀಜಿಯವರಿಂದ ಸಿಕ್ಕಿತ್ತು. ದೇಶವೇ ಹಾಹಾಕಾರ ಹಾಗೂ ಬರಗಾಲದಿಂದ ತೀವ್ರವಾಗಿ ತತ್ತರಿಸಿದಂತ ಸಂದರ್ಭದಲ್ಲೂ ಮೈಸೂರು ಸಂಸ್ಥಾನ ಮಾತ್ರ ಯಾವುದೇ ತೊಂದರೆಗೆ ಒಳಗಾಗದೆ ಜನಗಳಿಗೆ ಇನ್ನಷ್ಟು ಹತ್ತಿರವಾಗಿ ನಾಲ್ವಡಿಯವರು ಜನಹಿತ ಆಡಳಿತ ನೀಡಿ ಮಾದರಿಯಾಗಿದ್ದರು. ಜನರ ಹಿತಕ್ಕಾಗಿ ಕೆಆರ್‌ಎಸ್ ಅಣೆಕಟ್ಟು ಕಟ್ಟುವ ಸಮಯದಲ್ಲಿ ತಮ್ಮ ತಾಯಿ ಹಾಗೂ ಹೆಂಡತಿಯ ಒಡವೆಗಳನ್ನು ಮುಂಬೈನಲ್ಲಿ ಅಡವಿಟ್ಟು ಆ ಹಣದಲ್ಲಿ ಕೆಆರ್‌ಎಸ್ ಅಣೆಕಟ್ಟು ಕಟ್ಟಿಸಲು ವಿನಿಯೋಗಿಸಿದ್ದು ಇತಿಹಾಸ. ಇಂದು ಮೈಸೂರು ವಿಶ್ವ ಮಟ್ಟದಲ್ಲೂ ಮಾನ್ಯತೆ ಪಡೆದಿದೆ ಎಂದರೆ ಅದಕ್ಕೆ ಪ್ರಮುಖ ಕಾರಣ ನಾಲ್ವಡಿಯವರು. ದೂರದೃಷ್ಟಿ ಆಡಳಿತ ಹಾಗೂ ಸಾಕಷ್ಟು ಜನಪರ ಕಾರ್ಯಗಳು ಇದಕ್ಕೆ ನಿದರ್ಶನ. ಇತಿಹಾಸವಿರುವ ಈ ಸಂಸ್ಥಾನದಲ್ಲಿ ಕಲೆ, ಸಂಗೀತ, ಸಾಹಿತ್ಯ, ಸಂಸ್ಕೃತಿಗಳ ಮತ್ತು ಶೈಕ್ಷಣಿಕ ಅರಮನೆಗಳ ಹಾಗೂ ಸಾಂಸ್ಕೃತಿಕ ನಗರಿ ಹೀಗೆಲ್ಲಾ ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವಾಗಿ ರೂಪಿಸಿದ ಕೀರ್ತಿ ನಾಲ್ವಡಿಯವರಿಗೆ ನಿಸ್ವಾರ್ಥವಾಗಿ ಸಲ್ಲುತ್ತದೆ. ಇಷ್ಟೆಲ್ಲಾ ಕೊಡುಗೆ ನೀಡಿರುವ ಇವರನ್ನು ಮುಂದಿನ ಪೀಳಿಗೆ ಶಾಶ್ವತವಾಗಿ ಸ್ಮರಿಸಲು ಸರ್ಕಾರ "ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ವಿಮಾನ ನಿಲ್ದಾಣ" ಎಂದು ಹೆಸರಿಟ್ಟು ಅವರ ಅಜರಾಮರ ಕಾರ್ಯಗಳನ್ನು ಗೌರವಿಸಲಿ.

– ಅನಿಲ್‌ಕುಮಾರ್, ನಂಜನಗೂಡು

ಮತ್ತೆ ಕೊರೊನಾ : ಗೊಂದಲ ತಪ್ಪಿಸಿ

ಮಾನ್ಯರೆ,

ಮತ್ತೆ ಕೊರೊನಾ ಎಂಬ ಮಹಾಮಾರಿ ವಕ್ಕರಿಸುತ್ತಾ ಇದೆ ಎಂಬ ಸುದ್ದಿ ಬರುತ್ತಿದೆ. ಈ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು. ಅತಿಯಾದ ಸಮಸ್ಯೆಯಾದರೆ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳಬೇಕು. ಆದರೆ ಜನ ಸಾಮಾನ್ಯರಿಗೆ ಇನ್ನೂ ಕೊರೊನಾ ಬಗ್ಗೆ ಅನೇಕ ಗೊಂದಲಗಳಿವೆ.ಕಳೆದ ಬಾರಿ ಕೊರೊನಾ ಲಸಿಕೆ ತೆಗೆದುಕೊಂಡಿದ್ದರಿಂದ ಹೃದಯಾಘಾತ ಜಾಸ್ತಿ ಆಗಿದೆಯಾ, ಲಸಿಕೆ ಮತ್ತೆ ತೆಗೆದುಕೊಂಡರೆ ಯಾವುದಾದರೂ ಅಡ್ಡ ಪರಿಣಾಮಗಳಿವೆಯಾ, ಬರೀ ಡೋಲೋ 650 ಮಾತ್ರೆಯಿಂದ ಕೊರೊನಾ ಹೋಗುತ್ತದಾ, ಆಸ್ಪತ್ರೆಗೆ ಹೋಗಿ ಸಾವಿರಾರು ರೂ ಖರ್ಚು ಮಾಡಬೇಕಾ, ಇತ್ಯಾದಿ ಗೊಂದಲಗಳು. ವಿಶ್ವ ಆರೋಗ್ಯ ಸಂಸ್ಥೆಯಾಗಲೀ, ಕೇಂದ್ರ ಅಥವಾ ರಾಜ್ಯ ಸರ್ಕಾರವಾಗಲೀ, ಆರೋಗ್ಯ ಇಲಾಖೆಯವರಾಗಲೀ, ನುರಿತ ವೈದ್ಯರಾಗಲೀ ಈ ಹೊಸ ರೂಪಾಂತರಿ ಕೊರೊನಾ ಬಗ್ಗೆ ಅಗತ್ಯವಿರುವ ಸತ್ಯಾಂಶದಿಂದ ಕೂಡಿದ ಮಾಹಿತಿಯನ್ನು ನೀಡಬೇಕು. ಅನಗತ್ಯವಾಗಿ ಯಾರನ್ನೂ ಹೆದರಿಸುವ ಕೆಲಸವಾಗಬಾರದು. ಹಾಗೆಯೇ ಅಗತ್ಯ ಮಾಹಿತಿ ನೀಡುವುದರೊಂದಿಗೆ ಸಕಾಲಿಕ ಚಿಕಿತ್ಸೆ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು. ಮಾಧ್ಯಮಗಳೂ ಕೂಡ ಊಹಾಪೋಹಗಳಿಗೆ ಆದ್ಯತೆ ನೀಡದೆ ನಿಖರವಾದ ಸುದ್ದಿಗಳನ್ನು ಬಿತ್ತರಿಸಬೇಕು.

–ರಾಘವೇಂದ್ರ ಜೋಯಿಸ್, ಮೈಸೂರು

ಕುವೆಂಪು ಜ್ಞಾನತಾಣ ಸ್ವಚ್ಛಗೊಳಿಸಲಿ

ಮಾನ್ಯರೆ,

ಮೈಸೂರು ನಗರದ ವಾರ್ಡ್ ನಂ. 47ರ ವ್ಯಾಪ್ತಿಯ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆ, ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದಲ್ಲಿರುವ ಕುವೆಂಪು ಜ್ಞಾನತಾಣದಲ್ಲಿ ಹೈಮಾಸ್ಟ್ ದೀಪ ಅಳವಡಿಸಲು ಕೇಬಲ್, ಟೈಲ್ಸ್ ಕಿತ್ತು ಹಾಕಿ 2–3 ತಿಂಗಳು ಕಳೆದರೂ ಆ ಟೈಲ್ಸ್‌ಗಳ ಒಡೆದ ತ್ಯಾಜ್ಯ ತೆಗೆದು ಹಾಕಿಲ್ಲ. ಹಾಗೂ ಪ್ರತಿನಿತ್ಯ ಮರಗಳ ಒಣ ಎಲೆಗಳ ತ್ಯಾಜ್ಯ ಹಾಗೆಯೇ ಬಿದ್ದಿರುತ್ತದೆ. ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಇದನ್ನು ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಸೂಚಿಸಿ ಕ್ರಮ ವಹಿಸಲಿ.

–ಜಿ. ನಾಗೇಂದ್ರ ಶರ್ಮ, ಮೈಸೂರು.

ನಕಲಿ ವೈದ್ಯರ ಹಾವಳಿಗೆ ಕಠಿಣ ಕಡಿವಾಣ ಹಾಕಿ

ಮಾನ್ಯರೆ,

ರಾಜ್ಯದಲ್ಲಿ ಬಹಳಷ್ಟು ನಕಲಿ ವೈದ್ಯರ ಹಾವಳಿ ಹೆಚ್ಚಾಗಿದ್ದು, ಇತ್ತೀಚೆಗೆ ಬಯಲಿಗೆ ಬರುತ್ತಿದೆ. ಇದಕ್ಕೆ ಸರ್ಕಾರ ಹಾಗೂ ಆರೋಗ್ಯ ಇಲಾಖೆಯು ಸೂಕ್ಷ್ಮವಾಗಿ ಪತ್ತೆ ಹಚ್ಚಿ ಅಂತಹ ನಕಲಿ ವೈದ್ಯರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗಿದೆ. ಅಕ್ರಮವಾಗಿ ವೈದ್ಯಕೀಯ ಪ್ರಮಾಣಪತ್ರವನ್ನು ಪಡೆದುಕೊಂಡು ಹಣ ಮಾಡುವ ಉದ್ದೇಶದಿಂದ ಲೈಸೆನ್ಸ್ ರಹಿತವಾಗಿ ಕ್ಲಿನಿಕ್‌ಗಳನ್ನು ತೆರೆದು ಅವೈಜ್ಞಾನಿಕವಾಗಿ ಔಷಧಿಗಳನ್ನು ನೀಡಿ ಆರೋಗ್ಯದಲ್ಲಿ ಏರುಪೇರು ಉಂಟಾಗಿ ಸಾವನ್ನಪ್ಪಿರುವ ಘಟನೆಗಳು ಸಹ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರಿಂದ ಸಾರ್ವಜನಿಕರ ಜೀವಗಳ ಜೊತೆ ಚೆಲ್ಲಾಟ ಆಡುವ ನಕಲಿ ವೈದ್ಯರ ಹಾವಳಿಗೆ ತಕ್ಷಣ ಸರ್ಕಾರ ಕಡಿವಾಣ ಹಾಕಬೇಕು.


–ಪವನ್ ಜಯರಾಂ, ಸಿದ್ದಯ್ಯನಪುರ. ಚಾಮರಾಜನಗರ.

ಜೆಎನ್1 ಆತಂಕ ಬೇಡ, ನಿಯಮ ಪಾಲಿಸೋಣ

ಮಾನ್ಯರೆ,

ಕೊರೊನಾ ಭೀತಿ ಮತ್ತೆ ನಮ್ಮನ್ನು ಹೈರಾಣಾಗಿಸಿದೆ. ಈ ಖಾಯಿಲೆಯ ಬಗ್ಗೆ ಹುಡುಗಾಟ ಬೇಡ. ಇದೇ ಖಾಯಿಲೆಯಿಂದ ದೇಶದಲ್ಲಿ ಎಂತಹ ಪರಿಸ್ಥಿತಿ ಎದುರಿಸಬೇಕಾಗಿ ಬಂದಿತು ಎಂದು ಯೋಚಿಸಿ. ಎಷ್ಟೋ ಕುಟುಂಬದಲ್ಲಿ ಸಾವಿನ ಸಂಖ್ಯೆಯು ಲೆಕ್ಕವಿಲ್ಲದಂತಾಯಿತು. ದೇಶದೆಲ್ಲೆಡೆ ಸಾವಿನ ಮೃದಂಗ ಬಾರಿಸಿತು. ಜೀವನದ ನಿರ್ವಹಣೆಗೆ ಜನರು ಪಟ್ಟ ಕಷ್ಟ ಎಷ್ಟೋ. ಇಂತಹ ಘೋರ ಉದಾಹರಣೆಗಳು ಕಣ್ಮುಂದೆ ಇರುವಾಗ ಪ್ರತಿಯೊಬ್ಬರೂ ಅತ್ಯಂತ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯಾವ ಮಟ್ಟದ ಜ್ವರ, ನೆಗಡಿ, ಕೆಮ್ಮು ಬಂದರೆ ತಪಾಸಣೆಯನ್ನು ಕೂಡಲೇ ಮಾಡಿಸಬೇಕು. ಇದರಿಂದ ಮತ್ತಷ್ಟು ಮಂದಿಯ ಆರೋಗ್ಯಕ್ಕೆ ಕಾರಣವಾಗುತ್ತೀರಾ. ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಡೋಣ. ಆಹಾರವು ಸ್ವಚ್ಛತೆಯಿಂದ ಕೂಡಿರಲಿ, ಎಲ್ಲೆಡೆ ಮಾಸ್ಕ್ ಧರಿಸೋಣ, ನಮಗೆ ತಿಳಿದ ವಿಷಯವನ್ನು ಎಲ್ಲರಿಗೂ ತಿಳಿಸೋಣ, ಆರೋಗ್ಯದಿಂದ ಎಲ್ಲರೂ ಚೆನ್ನಾಗಿರಬೇಕಾದರೆ ಕೊರೊನಾ ನಿಯಮ ಪಾಲಿಸಬೇಕು. ಅನುಮಾನವಿದ್ದರೆ ಎಲ್ಲೆಡೆ ತಪಾಸಣೆಯಾಗಲಿ. ಇದು ಪ್ರತಿಯೊಬ್ಬರ ಕರ್ತವ್ಯ ಕೂಡ. ಸಮಾಜದ ಸುಧಾರಣೆಗೆ ಎಲ್ಲರೂ ಶ್ರಮಿಸೋಣ ಆರೋಗ್ಯದಿಂದ ಜೀವಿಸೋಣ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಅರಿವೇ ಜೀವನ ಪರಿ...!

ನಾವೆಲ್ಲರೂ ನಮ್ಮದೇ ಆದ ಜೀವನಶೈಲಿಯನ್ನು ರೂಪಿಸಿಕೊಂಡಿರುತ್ತೇವೆ. ನಾವು ಹೆಚ್ಚು ತೊಂದರೆ ಅನುಭವಿಸಿದಷ್ಟು, ಮೋಸಹೋದಷ್ಟು, ಸಮಸ್ಯೆಗಳನ್ನು ಎದುರಿಸಿದಷ್ಟು ನಮ್ಮ ಜೀವನಕ್ಕೆ ಒಂದು ಪಕ್ವತೆ ಬರುತ್ತಾ ಹೋಗುತ್ತದೆ. ಸಮಸ್ಯೆಯೇ ಇಲ್ಲವೆಂದಾಗ ನಮಗೆ ಅನುಭವಗಳಾಗುವುದು ಕಡಿಮೆಯೇ!

ನಾವು ಕೆಲವು ಅಭ್ಯಾಸಗಳನ್ನೂ ಹೊಂದಿರುತ್ತೇವೆ. ಕೆಲವು ಸ್ವಭಾವ ನಮ್ಮ ಹುಟ್ಟಿನೊಂದಿಗೇ ಬಂದಿರಬಹುದು. ಅದರಿಂದ ಅನುಕೂಲ ಹಾಗೂ ಅನಾನುಕೂಲ ಎರಡೂ ಆಗಿರಬಹುದು. ನಮ್ಮದು ನಾಚಿಕೆ ಸ್ವಭಾವವಾಗಿದ್ದರೆ ನಾವು ಹಲವು ಕ್ಷೇತ್ರಗಳಲ್ಲಿ ಮುಂದೆ ಹೋಗಲು ಸಾಧ್ಯವಾಗದೇ ಇರಬಹುದು, ಇದರಿಂದ ಹಲವು ಮುಖ್ಯ ಆಯಾಮಗಳನ್ನು ನಾವು ಕಳೆದುಕೊಳ್ಳ ಬೇಕಾಗಬಹುದು. ಕೆಲವೊಮ್ಮೆ ನಾವು ಯಾವುದೇ ಸಂದಿಗ್ಧಗಳಿಗೆ ಸಿಲುಕದೆಯೂ ಇರಬಹುದು. ಇದು ಅನುಕೂಲ. ಆದರೆ ಈ ಸಂಕೋಚ ಪ್ರವೃತ್ತಿಯಿಂದಾಗಿ ನಾವು ಯಾರೊಡನೆಯೂ ಬೆರೆಯದಿದ್ದರೆ, ಹಲವು ವಿಶಿಷ್ಟ ಅನುಭವಗಳನ್ನು ಗಳಿಸಲಾಗುವುದಿಲ್ಲ. ಆಗೆಲ್ಲಾ ನನಗೆ ಈ ಸಂಕೋಚದ ಪ್ರವೃತ್ತಿ ಏಕೆ ಬಂತೋ? ಇದರಿಂದ ನನಗೆ ತೊಂದರೆಯೇ ಆಗುತ್ತಿದೆ ಎಂಬ ಬೇಸರವೂ ಆಗಬಹುದು.

ಹಾಗೆಯೇ ನಮ್ಮದು ಜಿಪುಣತನದ ಮನೋಭಾವವಾದರೂ ಕೆಲವೊಮ್ಮೆ ಅನುಕೂಲ ಹಾಗೂ ಕೆಲವೊಮ್ಮೆ ಅನಾನುಕೂಲ ಅನುಭವಿಸಬೇಕಾಗುತ್ತದೆ. ಜಿಪುಣರಿಗೆ ಜೀವಮಾನಪೂರ್ತಿ ಹಣದ ಕೊರತೆಯಾಗುವುದಿಲ್ಲ. ಏಕೆಂದರೆ ಅವರಿಗೆ ಗೊತ್ತಿರುವುದು ಉಳಿಸುವುದಷ್ಟೇ ಹೊರತು ಖರ್ಚು ಮಾಡುವುದಲ್ಲ. ಹಾಗಾಗಿ ಹಣಕ್ಕೆ ಕೊರತೆಯಾಗುವುದಿಲ್ಲ. ಆದರೆ ಅವರಿಗೆ ಹಣದ ಉಪಯೋಗ ಏನು? ಎಂಬುದೇ ತಿಳಿದಿರುವುದಿಲ್ಲ. ಹಣ ಇರುವುದೇ ಕೂಡಿಡುವುದಕ್ಕೆ ಎಂದು ಮಾತ್ರ ಅವರಿಗೆ ಗೊತ್ತಿರುತ್ತದೆ. ಅವರು ಇತರರು ಹೆಚ್ಚು ಖರ್ಚು ಮಾಡಿ ಸಂತೋಷವಾಗಿರುವುದನ್ನು ಗಮನಿಸಿದಾಗ ಅಯ್ಯೋ! ನಾನು ಹಾಗಿಲ್ಲವಲ್ಲ ಎನ್ನಿಸುತ್ತದೆ. ನನ್ನಲ್ಲಿ ಸಾಕಷ್ಟು ಹಣವಿದೆ. ಆದರೆ ನನ್ನ ಸ್ವಭಾವದಿಂದಾಗಿ ಖರ್ಚು ಮಾಡಲು ಮನಸ್ಸು ಒಪ್ಪುವುದಿಲ್ಲ, ಇದರಿಂದಾಗಿ ಅನೇಕ ಸಂತೋಷದ ಸಮಯವನ್ನು ಕಳೆದುಕೊಂಡಿದ್ದೇನೆ ಎನ್ನಿಸುತ್ತದೆ. ಹೀಗೆನಿಸಿದಾಗ ಯಾರನ್ನು ದೂರುವುದು?

ಹಾಗೆಯೇ ನಮ್ಮಲ್ಲಿ ಕೆಲವರಿಗೆ ಮಿತ್ರರನ್ನು ಸಂಪಾದಿಸುವುದು ಸಂತೋಷದ ವಿಷಯ. ಮಿತ್ರರಿಗಾಗಿ ಕೈಯಲ್ಲಿದ್ದುದನ್ನೆಲ್ಲಾ ಕಳೆದುಕೊಂಡವರೂ ಇದ್ದಾರೆ. ಹೀಗೆ ಹಣ ಕಳೆದುಕೊಂಡವರನ್ನು ಹತ್ತಿರದಿಂದ ಕಂಡವರು, ಇವನಿಗೆ ಬುದ್ಧಿ ಇಲ್ಲ ಎಂದು ಹೇಳುವರೇ ಹೊರತು ಅಂತಹವರನ್ನು ಮೆಚ್ಚುವುದಿಲ್ಲ. ಹೀಗೆ ನಮ್ಮದು ವೈವಿಧ್ಯದ ಸ್ವಭಾವ. ನಮ್ಮ ಸ್ವಭಾವ ಕೆಲವೊಮ್ಮೆ ಸರಿ ಎನಿಸಬಹುದು. ಕೆಲವೊಮ್ಮೆ ನನ್ನ ಸ್ವಭಾವ ಬದಲಿಸಿಕೊಂಡರೆ ಚೆನ್ನಾಗಿರುತ್ತದೆ. ಆದರೆ ಅದು ಕಷ್ಟ ಎಂದೂ ಅನ್ನಿಸಬಹುದು.

ಹಾಗಾದರೆ ನಮ್ಮ ಸ್ವಭಾವವನ್ನು ಬದಲಿಸಿಕೊಳ್ಳಲು ಸಾಧ್ಯವೇ ಇಲ್ಲವೇ? ಎಂಬ ಪ್ರಶ್ನೆ ನಮ್ಮಲ್ಲಿ ಆಗಾಗ್ಗೆ ಮೂಡುತ್ತದೆ. ಸ್ವಭಾವ ಬದಲಿಸಿಕೊಳ್ಳುವುದು ಕಷ್ಟವಾದರೂ ಅಸಾಧ್ಯವಾದುದಲ್ಲ ಎಂಬುದನ್ನು ಗಮನಿಸಬೇಕು. ನಮ್ಮ ಸ್ವಭಾವ ಸರಿಯಾದುದಲ್ಲ, ಅದರಿಂದ ನನ್ನ ಬೆಳವಣಿಗೆಗೆ ತೊಂದರೆಯಾಗುತ್ತಿದೆ ಎನಿಸಿದಾಗ ಅದನ್ನು ಬದಲಿಸಿಕೊಳ್ಳಬೇಕು. ಇದರ ಪಾಠವನ್ನು ಯಾವ ಶಾಲೆಯೂ ಹೇಳಿಕೊಡುವುದಿಲ್ಲ. ಆದರೆ ಜೀವನಾನುಭವದ ಶಾಲೆ ನಮ್ಮ ಸ್ವಭಾವವನ್ನು ಏಕೆ ಮತ್ತು ಹೇಗೆ ಬದಲಿಸಿಕೊಳ್ಳಬೇಕು ಎಂದು ತಿಳಿಸುತ್ತದೆ. ಇಲ್ಲ ನಾನಿರುವುದೇ ಹೀಗೆ, ನಾನು ಹೀಗೇ ಇರುತ್ತೇನೆ ಎಂದುಕೊಂಡರೆ ನಾವು ಹಾಗೇ ಇರಬೇಕಾಗುತ್ತದೆ. ಬದಲಾವಣೆಗೆ ಮನಸ್ಸನ್ನು ಒಗ್ಗಿಸದಿದ್ದರೆ ನಮ್ಮನ್ನು ಯಾರೂ ಬದಲಿಸಲಾರರು. ನಾವು ಜೀವನದಲ್ಲಿ ಹೀಗೆ ಬದಲಾದ ಹಲವರನ್ನು ಕಂಡಿರುತ್ತೇವೆ. 'ಹೇಗಿದ್ದವನು ಹೇಗಾದ' ನೋಡು ಎಂದು ಮೂಗಿನಮೇಲೆ ಬೆರಳಿಡುವಂತೆ ಅಂತಹ ಕೆಲವರು ಕಂಡುಬರುತ್ತಾರೆ. ಅವರಿಗೆ ಹೇಗೆ ಸಾಧ್ಯವಾಯಿತು? ಎಂದರೆ ಅವರು ಹಾಗಾಗಬೇಕೆಂದು ಮನಸ್ಸು ಮಾಡಿ, ಕಷ್ಟಪಟ್ಟು ತಮ್ಮ ಸ್ವಭಾವದಲ್ಲಿ ಆಗಬೇಕಾದ ಬದಲಾವಣೆಯನ್ನು ಕಂಡುಕೊಂಡು ಅದನ್ನು ಬದಲಿಸಿಕೊಳ್ಳಲು ತೀವ್ರವಾದ ಪ್ರಯತ್ನ ಮಾಡಿರುತ್ತಾರೆ.

ನಮ್ಮ ಸ್ವಭಾವ ಕೆಲವೊಮ್ಮೆ ಅನುಭವದ ಹಿನ್ನೆಲೆಯಲ್ಲಿ ಬದಲಾಗಬಹುದು. ನಾನು ಅಂದುಕೊಂಡದ್ದಕ್ಕಿಂತ ಬೇರೆಯದೂ ಇದೆ ಎಂದು ಕಂಡುಬಂದಾಗ ನಮ್ಮ ಸ್ವಭಾವ ಬದಲಾಗಬಹುದು. ಇದಕ್ಕೊಂದು ಉದಾಹರಣೆ ನೀಡುವುದಾದರೆ, ಒಮ್ಮೆ ಗುಡ್ಡಗಾಡಿನ ಕೆಲವು ಯುವಕರು ಪಟ್ಟಣಕ್ಕೆ ಬರುತ್ತಾರೆ. ಅವರು ಬರಿಗಾಲಲ್ಲಿ ನಡೆಯುವವರು, ಓಡುವವರು. ಕಾಡಿನ ದುರ್ಗಮ ರಸ್ತೆಯಲ್ಲಿ ಓಡಾಡಿದವರು. ಅವರು ಪಟ್ಟಣಕ್ಕೆ ಬಂದಾಗ ಅಲ್ಲಿ ಒಂದು ಓಟದ ಸ್ಪರ್ಧೆ ಇರುವುದರ ಅರಿವಾಗುತ್ತದೆ. ಇವರನ್ನು ಪಟ್ಟಣಕ್ಕೆ ಕರೆತಂದವರಿಗೆ ಇವರನ್ನೂ ಏಕೆ ಓಟಕ್ಕೆ ಇಳಿಸಬಾರದು? ಎನ್ನಿಸುತ್ತದೆ. ಗೆಲ್ಲಬೇಕು ಎಂದಲ್ಲವಾದರೂ ಅನುಭವವಾದರೂ ಆಗುವುದಲ್ಲ ಎಂದು ಅವರು ಯೋಚಿಸಿ, ಪ್ರಾಯೋಜಕರನ್ನು ಕಂಡು ತಮ್ಮ ಕೋರಿಕೆ ಸಲ್ಲಿಸುತ್ತಾರೆ. ಉಳಿದ ಸ್ಪರ್ಧಿಗಳು ತಯಾರಾಗಿ ಬಂದಿರುವಾಗ, ಯಾವ ತಯಾರಿಯೂ ಇಲ್ಲದ ಈ ಗುಡ್ಡಗಾಡಿನ ಯುವಕರಿಗೆ ಹೇಗೆ ಅವಕಾಶ ನೀಡುವುದು ಎಂದು ಪ್ರಾಯೋಜಕರು ಆಕ್ಷೇಪಿಸುತ್ತಾರೆ. ಆದರೆ ಅವರನ್ನು ಕರೆತಂದಿದ್ದವರ ವಿನಂತಿಯನ್ನು ತಿರಸ್ಕರಿಸಲು ಅವರಿಗೆ ಆಗುವುದಿಲ್ಲ. ಹಾಗಾಗಿ ಒಲ್ಲದ ಮನಸ್ಸಿನಿಂದ ಅನುಮತಿ ನೀಡುತ್ತಾರೆ. ಓಡಲು ಸಿದ್ಧರಿದ್ದ ಯುವಕರ ಕಾಲಲ್ಲಿ ಬೂಟುಗಳಿಲ್ಲ. ಓಟದ ಸ್ಪರ್ಧೆ ಎಂದರೆ ಬೂಟು ಧರಿಸಿ ಓಡುವುದು ಎಂದೇ ಆಗಿತ್ತು. ಈ ಯುವಕರು ಬಡತನದಲ್ಲಿ ಬಂದವರು. ಹಾಗಾಗಿ ಅವರು ಬರಿಗಾಲಲ್ಲೇ ಓಡಲು ನಿರ್ಧರಿಸಿದರು. ಅಂತೂ ಸ್ಪರ್ಧೆಯಲ್ಲಿ ಭಾಗವಹಿಸಿದರು. ಆಶ್ಚರ್ಯ ಎಂದರೆ ಮೊದಲಿನ ಎರಡು ಸ್ಥಾನಗಳನ್ನು ಅವರೇ ಗಳಿಸಿದರು. ನೋಡುವವರಿಗೆ ಇದು ಸೋಜಿಗವೆನಿಸಿತು. ಓಟದ ಸ್ಪರ್ಧೆಯಲ್ಲಿ ಬರಿಗಾಲಲ್ಲೂ ಓಡಬಹುದು ಎಂಬುದು ಅವರಿಗೆ ಮನವರಿಕೆಯಾಯಿತು. ಆ ಯುವಕರನ್ನು ಕಂಡು ಕೆಲವು ಸ್ಪರ್ಧಿಗಳು ಮುಂದೆ ಬರಿಗಾಲಲ್ಲಿ ಓಡುವ ಪ್ರಯತ್ನವನ್ನು ಮಾಡಿದರು. ಮುಂದೆ ಬರಿಗಾಲ ನಡಿಗೆ ಹಾಗೂ ಓಡುವುದು ಮಾಮೂಲಾಯಿತು. ಒಬ್ಬರನ್ನು ನೋಡಿ ಮತ್ತೊಬ್ಬರು ಬದಲಾದ ಪರಿ ಇದು.

> **ನಮಗೆ ಕೋಪ ಬರುವುದು ಅನೇಕ ವೇಳೆ ಸಣ್ಣಪುಟ್ಟ ಕಾರಣಕ್ಕೆ. ಮನೆಯಲ್ಲಿ ಮಗುವಾಗಲೀ ಇತರರಾಗಲೀ ಒಂದು ಗಾಜಿನ ಪಾತ್ರೆಯನ್ನು ಒಡೆದರು ಎಂದಿಟ್ಟುಕೊಳ್ಳೋಣ. ಅವರು ಹಾಗೆ ಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದಲ್ಲ. ಕೈಜಾರಿ ಇಂತಹ ಘಟನೆಗಳು ನಡೆಯುತ್ತವೆ. ಆಗ ನಾವು ಕೋಪಿಸಿಕೊಂಡು ಬೈಯ್ಯುವುದರಿಂದ ಒಡೆದುಹೋದ ಪದಾರ್ಥ ವಾಪಸ್ಸು ಬರುವುದಿಲ್ಲ ಎಂಬುದು ಒಂದಾದರೆ, ನಮ್ಮಿಂದ ಬೈಸಿಕೊಂಡವರು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಈ ಹೆದರಿಕೆಯಿಂದ ಅವರಿಂದ ಅಂತಹ ತಪ್ಪುಗಳು ಪುನರಾವರ್ತನೆಯಾಗುತ್ತದೆ. ಎರಡೂ ನಷ್ಟವೇ.**

ಮತ್ತೊಂದು ಸ್ವಾರಸ್ಯ ಕಥೆ. ಒಬ್ಬ ಸನ್ಯಾಸಿ ಇದ್ದ. ಆತ ಸನ್ಯಾಸಿಯಾದರೂ ಅವನ ಸ್ವಭಾವ ಕೋಪದ್ದು. ಸಣ್ಣಪುಟ್ಟದ್ದಕ್ಕೆಲ್ಲಾ ಕೋಪಿಸಿಕೊಳ್ಳುತ್ತಿದ್ದ. ಅವನಿಗೆ ಒಮ್ಮೆ ಅನಿಸಿತು, ನಾನು ಹೀಗೆ ಕೋಪ ಮಾಡಿಕೊಳ್ಳುವುದು ಸರಿಯಲ್ಲ ಎಂದು. ಆದರೆ ಸ್ವಭಾವವೇ ಕೋಪದ್ದು. ಅದನ್ನು ಬಿಡಬೇಕು ಎನಿಸಿದರೂ, ಯಾವುದಾದರೂ ಸ್ವಲ್ಪ ತಪ್ಪು ಕಂಡಾಗ ಅವನು ಕೋಪಿಸಿಕೊಳ್ಳುತ್ತಲೇ ಇದ್ದ. ಅವನಿಗೆ ತನ್ನ ಸ್ವಭಾವ ಬದಲಿಸಿಕೊಳ್ಳಬೇಕು ಎನಿಸಿತು. ಜನರ ಮಧ್ಯೆ ಇದ್ದರೆ ತಾನೇ ಕೋಪ ಬರುವುದು, ಜನರಿಲ್ಲದ ಜಾಗದಲ್ಲಿ ಏಕಾಂಗಿಯಾಗಿ ಧ್ಯಾನ ಮಾಡಲು ನಿರ್ಧರಿಸುತ್ತಾನೆ. ಅದಕ್ಕೆ ಅವನು ಕಂಡುಕೊಂಡ ದಾರಿ ಎಂದರೆ ಕೆರೆಯ ಮಧ್ಯದಲ್ಲಿ ದೋಣಿಯಲ್ಲಿ ಧ್ಯಾನ ಮಾಡುವುದು. ಹಾಗೇ ಮಾಡಿದ. ಕೆರೆಯ ಮಧ್ಯದಲ್ಲಿ ದೋಣಿ ನಿಲ್ಲಿಸಿ ಧ್ಯಾನ ಮಾಡತೊಡಗಿದ. ಕೆಲವು ಸಮಯ ನಿಶ್ಶಬ್ದವಾಗಿದ್ದು ಅವನ ಧ್ಯಾನಕ್ಕೆ ಅನುಕೂಲವಾಯಿತು. ಅವನಿಗೆ ಮನಸ್ಸಿನಲ್ಲಿ ತನ್ನ ನಿರ್ಧಾರ ಸರಿ ಎನಿಸಿತು. ಆದರೆ ಇದ್ದಕ್ಕಿದ್ದಂತೆಯೇ ಇನ್ನೊಂದು ದೋಣಿ ಬಂದು ಸನ್ಯಾಸಿಯ ದೋಣಿಗೆ ಡಿಕ್ಕಿ ಹೊಡೆಯಿತು. ಇವನ ಧ್ಯಾನಕ್ಕೆ ಭಂಗವಾಯಿತು, ತಕ್ಷಣವೇ ಅವನಿಗೆ ಕೋಪ ಉಕ್ಕಿ ಬಂತು. ಅದು ಅವನ ಸ್ವಭಾವ. ಹಾಗಾಗಿ ದೋಣಿಗೆ ಡಿಕ್ಕಿ ಹೊಡೆಸಿದವರನ್ನು ಚೆನ್ನಾಗಿ ಬೈದುಬಿಡಬೇಕು ಎಂದು ಸಿಟ್ಟಿನಿಂದ ಕಣ್ಣುಬಿಡುತ್ತಾನೆ. ಆದರೆ ನೋಡಿದರೆ ಎದುರಿನ ದೋಣಿ ಖಾಲಿ ಖಾಲಿ...! ನಾವಿಕನಿಲ್ಲದ ಆ ದೋಣಿ ಕಟ್ಟಿದ್ದ ಹಗ್ಗ ಕಳಚಿಕೊಂಡು ತೇಲುತ್ತಾ ಬಂದು ಸನ್ಯಾಸಿಯ ದೋಣಿಗೆ ಡಿಕ್ಕಿ ಹೊಡೆದಿತ್ತು. ಆಗ ಸನ್ಯಾಸಿಗೆ ಒಂದು ರೀತಿ ಜ್ಞಾನೋದಯವಾಗುತ್ತದೆ. ಕೋಪ ಎಂಬುದು ನನ್ನೊಳಗಿದೆಯೇ ಹೊರತು ಅದು ಹೊರಗಡೆಯಿಂದ ಬರುವಂತಹುದಲ್ಲ. ಹೊರಗಿನ ಯಾವುದೋ ಸಣ್ಣ ಸನ್ನಿವೇಶ ಇಲ್ಲವೆ ಘಟನೆಯಿಂದ ನಮ್ಮಲ್ಲಿನ ಕೋಪ ಜಾಗೃತವಾಗುತ್ತದೆ ಎಂಬುದನ್ನು ಅವನು ಅರಿತುಕೊಂಡ. ಅಂದಿನಿಂದ ಯಾರಾದರೂ ತನಗೆ ಕೋಪ ಬರುವಂತೆ ನಡೆದುಕೊಂಡರೆ ತನಗೆ ತಾನೇ ಹೇಳಿಕೊಳ್ಳುತ್ತಿದ್ದ. ಇಂತಹದ್ದಕ್ಕೆಲ್ಲಾ ಕೋಪ ಅನಗತ್ಯ, ಅವರೊಂದು ಖಾಲಿ ದೋಣಿಯಂತಹವರು. ಕೋಪ ನನ್ನೊಳಗೇ ಇದೆ ಎಂದು. ಅಂದಿನಿಂದ ಅವನು ಯಾರ ಮೇಲೂ ಕೋಪಿಸಿಕೊಳ್ಳಲಿಲ್ಲ. ಅವನ ಜ್ಞಾನ ವೃದ್ಧಿಯಾಯಿತು.

ಇಂತಹ ಮನೋಭಾವ ನಮ್ಮದಾಗಿಸಿಕೊಳ್ಳಬೇಕು. ನಮ್ಮಲ್ಲಿ ಈ ರೀತಿ ಕೋಪಿಸಿಕೊಂಡು ಬಡಬಡಿಸುವವರು ಅಲ್ಲಲ್ಲಿ ಕಂಡುಬರುತ್ತಾರೆ. ಅವರಿಗೆ ಮೂಗಿನ ತುದಿಯಲ್ಲೇ ಕೋಪ ಎಂದು ಇತರರು ಆಡಿಕೊಳ್ಳುತ್ತಿರುತ್ತಾರೆ. ಅಂತಹವರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ತನಗೆ ಯಾರಿಂದ ಹಾಗೂ ಯಾವುದರಿಂದ ಕೋಪ ಬರುತ್ತದೆ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ನಂತರ ಅಂತಹುದರಿಂದ ನಾನು ಯಾವುದೇ ಕಾರಣದಿಂದ ಕೋಪ ಮಾಡಿಕೊಳ್ಳುವುದಿಲ್ಲ ಎಂದು ನಿರ್ಧರಿಸಬೇಕು. ಹಾಗೆ ಮನಸ್ಸು ಮಾಡಿದಾಗಲೇ ನಾವು ಅರ್ಧದಷ್ಟು ಕೋಪವನ್ನು ಕಡಿಮೆ ಮಾಡಿಕೊಳ್ಳಬಹುದು. ಹಾಗೆ ನೋಡಿದರೆ ನಮಗೆ ಕೋಪ ಬರುವುದು ಅನೇಕ ವೇಳೆ ಸಣ್ಣಪುಟ್ಟ ಕಾರಣಕ್ಕೆ. ಮನೆಯಲ್ಲಿ ಮಗುವಾಗಲೀ ಇತರರಾಗಲೀ ಒಂದು ಗಾಜಿನ ಪಾತ್ರೆಯನ್ನು ಒಡೆದರು ಎಂದಿಟ್ಟುಕೊಳ್ಳೋಣ. ಅವರು ಹಾಗೆ ಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದಲ್ಲ. ಕೈಜಾರಿ ಇಂತಹ ಘಟನೆಗಳು ನಡೆಯುತ್ತವೆ. ಆಗ ನಾವು ಕೋಪಿಸಿಕೊಂಡು ಬೈಯ್ಯುವುದರಿಂದ ಒಡೆದುಹೋದ ಪದಾರ್ಥ ವಾಪಸ್ಸು ಬರುವುದಿಲ್ಲ ಎಂಬುದು ಒಂದಾದರೆ, ನಮ್ಮಿಂದ ಬೈಸಿಕೊಂಡವರು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಈ ಹೆದರಿಕೆಯಿಂದ ಅವರಿಂದ ಅಂತಹ ತಪ್ಪುಗಳು ಪುನರಾವರ್ತನೆಯಾಗುತ್ತದೆ. ಎರಡೂ ನಷ್ಟವೇ. ಆದ್ದರಿಂದ ಅಂತಹ ಸಂದರ್ಭದಲ್ಲಿ ವಿವೇಕವುಳ್ಳವನ್ನು ಹೇಗೆ ನಡೆದುಕೊಳ್ಳಬೇಕು? ಮುಂದೆ ಈ ರೀತಿ ಆಗದಂತೆ ಯಾವ ಎಚ್ಚರಿಕೆಯ ಬುದ್ಧಿವಾದ ಹೇಳಬೇಕು? ಎಂಬುದನ್ನು ಅರಿತುಕೊಳ್ಳಬೇಕು.

ಥಾಮಸ್ ಆಳ್ವಾ ಎಡಿಸನ್ ವಿದ್ಯುತ್ ಬಲ್ಬ್ ಕಂಡು ಹಿಡಿದಾದ ನಂತರ ಅದರ ಪ್ರಯೋಗ ಮಾಡಬೇಕಾಗುತ್ತದೆ. ಬಲ್ಬಿನ ಹೋಲ್ಡರ್ ಎತ್ತರದ ಜಾಗದಲ್ಲಿರುತ್ತದೆ. ಒಬ್ಬನಿಗೆ ಅಲ್ಲಿ ಬಲ್ಬ್ ಅಳವಡಿಸಲು ಹೇಳುತ್ತಾನೆ. ಹಾಗೆ ಮಾಡಲು ಹೊರಟವನಿಗೆ ಗಾಬರಿಯಾಗಿ ಬಲ್ಬನ್ನು ಸರಿಯಾಗಿ ಅಳವಡಿಸದೆ, ಬಲ್ಬ್ ಕೆಳಗೆ ಬಿದ್ದು ಒಡೆದುಹೋಗುತ್ತದೆ. ಅಲ್ಲಿದ್ದ ಇತರರೆಲ್ಲಾ ಸಿಟ್ಟು ಮಾಡಿಕೊಳ್ಳುತ್ತಾರೆ. ವರ್ಷಗಟ್ಟಲೆ ಶ್ರಮವಹಿಸಿ ತಯಾರಿಸಿದ ಬಲ್ಬ್ ಒಡೆದುಹೋಯಿತು ಎಂದು ಬಲ್ಬನ್ನು ಕೆಳಗೆ ಬೀಳಿಸಿದವನಿಗೆ ಬೈಯ್ಯುತ್ತಾರೆ. ಆದರೆ ಎಡಿಸನ್ ಹಾಗೆ ಬೈಯ್ಯದೆ ಇತರರನ್ನು ಸಮಾಧಾನಪಡಿಸುತ್ತಾನೆ. ಕೆಲ ಸಮಯದ ನಂತರ ಅವರು ಮತ್ತೊಂದು ಬಲ್ಬ್ ತಯಾರಿಸುತ್ತಾರೆ. ನಂತರ ಅದರ ಪರೀಕ್ಷೆಯಾಗಬೇಕು, ಮತ್ತದೇ ವ್ಯಕ್ತಿಗೆ ಬಲ್ಬನ್ನು ಅಳವಡಿಸಲು ಸೂಚಿಸುತ್ತಾನೆ. ಅಲ್ಲಿದ್ದವರಿಗೆ ಕೋಪ ಬರುತ್ತದೆ. ಆ ವ್ಯಕ್ತಿ ಮತ್ತೆ ಬಲ್ಬನ್ನು ಒಡೆದು ಹಾಕಿದರೆ! ಏನು ಮಾಡುವುದು ಎಂದು. ಎಡಿಸನ್ ಮಾತ್ರ ಆ ಕೆಲಸವನ್ನು ಮತ್ತೆ ಅದೇ ವ್ಯಕ್ತಿಗೆ ವಹಿಸುತ್ತಾನೆ. ಆ ವ್ಯಕ್ತಿ ಈ ಸಲ ಬಹಳ ಎಚ್ಚರಿಕೆಯಿಂದ ಬಲ್ಬನ್ನು ಅಳವಡಿಸುತ್ತಾನೆ. ಪ್ರಯೋಗ ಯಶಸ್ವಿಯಾಗುತ್ತದೆ. ಆಗ ಆತ ಇತರರಿಗೆ ಹೇಳುವುದು ಇಷ್ಟೇ : ನಾನು ಮತ್ತೆ ಬಲ್ಬನ್ನು ಅಳವಡಿಸಲು ಇತರರಿಗೆ ನೀಡಿದ್ದರೆ, ಮೊದಲು ಬಲ್ಬನ್ನು ಒಡೆದಿದ್ದವನು ಇಡೀ ಜೀವನ ಪರಿತಪಿಸುತ್ತಾನೆ. ತಪ್ಪು ಎಲ್ಲರಿಂದಲೂ ಆಗುತ್ತದೆ. ಅದನ್ನು ತಿದ್ದದಿದ್ದರೆ ಅಂತಹವರಿಂದ ಮತ್ತಷ್ಟು ತಪ್ಪುಗಳು ನಡೆಯುತ್ತಲೇ ಇರುತ್ತವೆ ಎಂದು.

ಇಂತಹ ಆಲೋಚನೆ ನಮ್ಮಲ್ಲಿ ಮೂಡಬೇಕು. ನಮ್ಮ ಸ್ವಭಾವದಿಂದ ನನಗೆ ಹಾಗೂ ನನ್ನೊಡನಿರುವವರಿಗೆ ತೊಂದರೆಯಾಗುತ್ತಿದೆ ಎಂದರೆ ಅಂತಹ ಸ್ವಭಾವವನ್ನು ಬದಲಿಸಿಕೊಳ್ಳಬೇಕು. ಮೊದಲು ನನ್ನ ಸ್ವಭಾವ ಬದಲಿಸಿಕೊಳ್ಳುವುದು ಸರಿ ಎಂದು ತೀರ್ಮಾನ ಮಾಡಿ ಅದರಂತೆ ಸರಿಪಡಿಸಿಕೊಳ್ಳಬೇಕು. ಮನುಷ್ಯ ಪ್ರಯತ್ನಕ್ಕೆ ಆಗದ್ದು ಯಾವುದೂ ಇಲ್ಲ. ನಮ್ಮ ಸ್ವಭಾವ ಜನಹಿತವಾದುದಾಗಿರಲಿ. ಹಾಗೆ ರೂಪಿಸಿಕೊಳ್ಳುವತ್ತ ಗಮನ ಹರಿಸಿದರೆ ತನಗೆ ಹಾಗೂ ತನ್ನ ಪರಿಧಿಯಲ್ಲಿರುವ ಇತರರಿಗೂ ಅನುಕೂಲವಾಗುತ್ತದೆ.

ವಾಟ್ಸಾಪ್‌ಗಳಲ್ಲಿ ಬರುವ ಸಂದೇಶಗಳ ಸಂಪೂರ್ಣ ನಂಬಬಾರದು

● ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ● 'ಮಕ್ಕಳು, ಹವಾಮಾನ ಬದಲಾವಣೆ' ಕುರಿತ ಕಾರ್ಯಾಗಾರ ● ಪತ್ರಕರ್ತರು ಆದಷ್ಟು ನಕಾರಾತ್ಮಕ ಚಿಂತನೆ ಬಿಡಿ

ಮೈಸೂರು, ಡಿ.21 (ಎಂಟಿವೈ)– ವಾಟ್ಸಾಪ್‌ಗಳಲ್ಲಿ ಬರುವ ಸುದ್ದಿಗಳಲ್ಲಿ ಬಹುತೇಕ ಸತ್ಯಕ್ಕೆ ದೂರವಾದ ಸಂಗತಿ. ಯಾರೂ ವಾಟ್ಸಾಪ್ ಸಂದೇಶಗಳನ್ನು ಸಂಪೂರ್ಣ ನಂಬಬಾರದು ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಯುನಿಸೆಫ್ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 'ಮಕ್ಕಳು ಮತ್ತು ಹವಾಮಾನ ಬದಲಾವಣೆ' ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಾಟ್ಸಾಪ್‌ಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳು ಜನರನ್ನು ದಿಕ್ಕು ತಪ್ಪಿಸುತ್ತಿವೆ. ಅವುಗಳ ನೈಜತೆಯನ್ನು ಪರಿಶೀಲಿಸದೆ ನಂಬಬಾರದು. ವಾಟ್ಸಾಪ್ ಯುನಿವರ್ಸಿಟಿಗಳನ್ನು ಜನ, ವಿದ್ಯಾರ್ಥಿಗಳು ನಂಬಬಾರದು. ತಂತ್ರಜ್ಞಾನ ಬೆಳೆದಂತೆ ಅನುಕೂಲದ ಜೊತೆಗೆ ಸಾಕಷ್ಟು ಅನಾನುಕೂಲವೂ ಇದೆ. ಯಾವುದನ್ನು ನಾವು ನಂಬಬೇಕು, ಯಾವುದನ್ನು ಬಿಡಬೇಕು ಎಂದು ಅವಲೋಕಿಸಿ ನಿರ್ಧರಿಸುವುದು ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲೂ ಬದಲಾವಣೆ ಕಾಣಬಹುದಾಗಿದೆ. ಈ ಹಿಂದೆ ಮುದ್ರಣ ಮಾಧ್ಯಮ ಮಾತ್ರ ಇತ್ತು. ಆದರೆ, ಇದೀಗ ವಿವಿಧ ಮಾಧ್ಯಮಗಳನ್ನು ಕಾಣಬಹುದು. ಆದರೂ ಸಕಾರಾತ್ಮಕ ಸುದ್ದಿಗಳಿಗಿಂತ ನಕಾರಾತ್ಮಕ ಸುದ್ದಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಪತ್ರಕರ್ತರು ಸಕಾರಾತ್ಮಕವಾದ ಸುದ್ದಿಗಳತ್ತ ಗಮನಹರಿಸಬೇಕು. ಪತ್ರಕರ್ತರು ಮತ್ತು ಪತ್ರಿಕೋದ್ಯಮಕ್ಕೆ ಬರುವ ಯುವಕರು ಆಶಾವಾದಿಗಳಾಗಿ, ನಕಾರಾತ್ಮಕ ಚಿಂತನೆ ಬಿಡಬೇಕು ಎಂದರು.



ಜಾಗತಿಕ ಸಮಸ್ಯೆ: ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆ ಕರ್ನಾಟಕ ಹಾಗೂ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಜಾಗತಿಕ ಸಮಸ್ಯೆಯಾಗಿದೆ. ಮಾಜಿ ಪ್ರಧಾನಿ ನೆಹರು ಹಾಗೂ ಮಾಜಿ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಮಕ್ಕಳ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದರು. ಅವರಲ್ಲಿ ದೂರದೃಷ್ಟಿ ಇತ್ತು. ಮಕ್ಕಳ ಸಮಸ್ಯೆ ಬಗೆಹರಿಸಲು ಈ ವರ್ಷ ಏನು ಮಾಡಬೇಕು. ಮುಂದಿನ 5 ಮತ್ತು 10 ವರ್ಷದಲ್ಲಿ ಏನೆಲ್ಲಾ ಕಾರ್ಯಕ್ರಮ ಜಾರಿಗೊಳಿಸಬೇಕು ಎಂಬ ದೂರದೃಷ್ಟಿ ಅವರದ್ದಾಗಿತ್ತು. ಈ ಹಿನ್ನೆಲೆಯಲ್ಲಿ ಪತ್ರಕರ್ತರು ಮಕ್ಕಳಿಗೆ ಸಂಬಂಧಿಸಿದ ಸಕಾರಾತ್ಮಕವಾದ ಸಣ್ಣ ಪುಟ್ಟ ಕಥೆಯನ್ನು ಪ್ರಕಟಿಸಬೇಕು. ಇದರಿಂದ ಮಕ್ಕಳಿಗೆ ಪ್ರೇರಣೆಯಾಗಿ ಸಾಧನೆ ಮಾಡಲು ಮುಂದಾಗುತ್ತಾರೆ ಎಂದರು.

ಹವಾಮಾನ ಬದಲಾವಣೆ: ಇತ್ತೀಚಿನ ದಿನಗಳಲ್ಲಿ ಹಲವು ಕಾರಣದಿಂದ ಹವಾಮಾನ ಬದಲಾವಣೆಯಾಗುತ್ತಿದೆ. ಇದು ನಮ್ಮ ಕೈಯ್ಯಲ್ಲಿಲ್ಲ. ಜನರು ಪರಿಸರದಿಂದ ದೂರವಾಗುತ್ತಿದ್ದಾರೆ. 30–40 ವರ್ಷದ ಹಿಂದೆ ಜನ ಪರಿಸರದ ಸಮೀಪ ಇರುತ್ತಿದ್ದರು. ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಆದರೆ ಈಗ ನಗರದತ್ತ ವಲಸೆ ಬರುತ್ತಿದ್ದಾರೆ. ಹಾಗಾಗಿ ಪರಿಸರದಿಂದ ದೂರವಾಗುತ್ತಿದ್ದಾರೆ ಎಂದರು.

> "ಪತ್ರಕರ್ತರು ಉತ್ತಮ ವಿಷಯಗಳನ್ನು ಆಯ್ಕೆ ಮಾಡಿಕೊಂಡು, ವಿಮರ್ಶಾತ್ಮಕವಾಗಿ ನೈಜ ವರದಿ ಮಾಡುವತ್ತ ಗಮನ ಹರಿಸಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪತ್ರಿಕಾ ಕ್ಷೇತ್ರವನ್ನು ನಾಲ್ಕನೇ ಅಂಗ ಎಂದು ಕರೆಯಲಾಗುತ್ತದೆ. ಈ ಹಿಂದೆ ಮುದ್ರಣ ಮಾಧ್ಯಮದಲ್ಲಿ ಪ್ರಕಟವಾಗುವ ಸುದ್ದಿಗಳು ಸರ್ಕಾರವನ್ನು ಎಚ್ಚರಿಸುತ್ತಿದ್ದವು. ಆದರೆ, ಇತ್ತೀಚಿನ ದಿನಗಳಲ್ಲಿ ಸರಿಯಾದ ದಿಕ್ಕಿನಲ್ಲಿ ವಿಮರ್ಶಾ ವರದಿ ಪ್ರಕಟವಾಗುತ್ತಿಲ್ಲ.
> –ಪ್ರೊ. ಎನ್.ಕೆ.ಲೋಕನಾಥ್, ಮೈಸೂರು ವಿವಿ ಕುಲಪತಿ

ಗಂಗೋತ್ರಿಯಲ್ಲೂ ಪ್ಲಾಸ್ಟಿಕ್ ಬಳಕೆ: ಪ್ಲಾಸ್ಟಿಕ್ ಬಳಕೆ ತಪ್ಪು ಎಂದು ತಿಳಿದಿದ್ದರೂ ಅದರ ಬಳಕೆ ಹೆಚ್ಚುತ್ತಲೇ ಇದೆ. ಸುಂದರ ಹಾಗೂ ಸ್ವಚ್ಛ ಪರಿಸರವುಳ್ಳ ಗಂಗೋತ್ರಿ ಆವರಣದಲ್ಲಿ ಪ್ರತಿದಿನ ನೂರಾರು ಮಂದಿ ವಾಯು ವಿಹಾರಕ್ಕೆ ಬರುತ್ತಾರೆ. ಕೆಲವು ವಾಯು ವಿಹಾರಿಗಳು ತಮ್ಮೊಂದಿಗೆ ಪ್ಲಾಸ್ಟಿಕ್ ಕವರ್‌ನಲ್ಲಿ ಕಡಲೇಪುರಿ ಸೇರಿದಂತೆ ಇತರೆ ತಿನಿಸು ತಂದು, ತಿಂದ ನಂತರ ಪ್ಲಾಸ್ಟಿಕ್ ಬಿಸಾಡಿ ಹೋಗುತ್ತಾರೆ. ಮರುದಿನ ಪ್ಲಾಸ್ಟಿಕ್ ಬಿಸಾಡಿದ್ದವರೇ ಕರೆ ಮಾಡಿ ಸ್ವಚ್ಛಗೊಳಿಸಿ ಎಂದು ಹೇಳುತ್ತಾರೆ. ನಾವು ಮತ್ತು ನಮ್ಮ ಪರಿಸರ ಸ್ವಚ್ಛವಾಗದಿದ್ದರೆ ಇಂತಹ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ತಿಳಿಸಿದರು.

ಯುನಿಸೆಫ್ ಪ್ರತಿನಿಧಿ ಪ್ರಸೂನ್‌ಸೇನ್ ಮಾತನಾಡಿ, ಮಕ್ಕಳು ಆರೋಗ್ಯ, ಶಿಕ್ಷಣ, ಪೌಷ್ಟಿಕ ಆಹಾರ ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಡತನ, ಆರೋಗ್ಯ ಸೇವೆ ಸಿಗದಿರುವುದು, ಶುದ್ಧ ನೀರಿನ ಕೊರತೆ, ಶೌಚಾಲಯಗಳ ಕೊರತೆ ಕೂಡ ಸಮಸ್ಯೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನಾ, ಪ್ರಾಧ್ಯಾಪಕ ಡಾ.ಎನ್.ಮಮತಾ, ವಿಜ್ಞಾನ ಅಂಕಣಕಾರ ಟಿ.ಜಿ.ಶ್ರೀನಿಧಿ, ಮಣಿಪಾಲ್ ಸಂವಹನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಪದ್ಮಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರು, ಡಿ.21(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ.



ನಾಳೆ ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ 10.55 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ಚಾಮುಂಡಿಬೆಟ್ಟದ ಪಾದದ ಬಳಿಯ ಕೆಎನ್‌ಎಸ್ ಬಡಾವಣೆಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ನೂತನವಾಗಿ ನಿರ್ಮಾಣ ಮಾಡುತ್ತಿರುವ ಪತ್ರಿಕಾ ಭವನ ಹಾಗೂ ತರಬೇತಿ ಕೇಂದ್ರಕ್ಕೆ ಬೆಳಗ್ಗೆ 11 ಗಂಟೆಗೆ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸುವರು. ಮೈಸೂರು ಜಿಲ್ಲೆಯ ಶಾಸಕರು, ಜನಪ್ರತಿನಿಧಿಗಳು ಸೇರಿದಂತೆ ಹಲವು ಗಣ್ಯರು ಭಾಗವಹಿಸುವರು. ಮೈಸೂರಿನ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಮೈಸೂರು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಕಟ್ಟಡಕ್ಕೆ ಮಧ್ಯಾಹ್ನ 12.30 ಗಂಟೆಗೆ ಶಂಕುಸ್ಥಾಪನೆ ನೆರವೇರಿಸುವ ಸಿದ್ದರಾಮಯ್ಯ, ಅಲ್ಲೇ ನಿರ್ಮಿಸಿರುವ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಸೇರಿದ ಬಾಲಕಿಯರ ವಿದ್ಯಾರ್ಥಿನಿಲಯ ಉದ್ಘಾಟನೆ ಮಾಡುವರು.

ಸಂಜೆ 4 ಗಂಟೆಗೆ ನಂಜನಗೂಡು ತಾಲೂಕು ಕವಲಂದೆ ಪೊಲೀಸ್ ಠಾಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಕವಲಂದೆ, ಅಂತರಸಂತೆ ಹಾಗೂ ಜಯಪುರ ಪೊಲೀಸ್ ಠಾಣೆಯ ಕಟ್ಟಡಗಳ ಉದ್ಘಾಟನೆ ನೆರವೇರಿಸುವರು. ತರುವಾಯ ಸಂಜೆ 5.30 ಗಂಟೆಗೆ ಮೈಸೂರು ಅರಮನೆ ಆವರಣದಲ್ಲಿ ಅರಮನೆ ಮಂಡಳಿ ಏರ್ಪಡಿಸಿರುವ ಅರಮನೆ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟನೆ ಮಾಡುವರು. ಡಿ.23ರಂದು ಬೆಳಿಗ್ಗೆ 11 ಗಂಟೆಗೆ ವಿವಿಧ ಕೈಗಾರಿಕೋದ್ಯಮಿಗಳ ಮುಖ್ಯಸ್ಥರೊಡನೆ ಸಿದ್ದರಾಮಯ್ಯ ಸಭೆ ನಡೆಸಲಿದ್ದಾರೆ.

ಮೈಸೂರಿನ ವಿಜಯನಗರದ ಬಂಟರ ಭವನದಲ್ಲಿ ಸಂಜೆ 4 ಗಂಟೆಗೆ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ, ಹೋಟೆಲ್ ಮಾಲೀಕರ ಸಂಘ ಹಾಗೂ ಹೋಟೆಲ್ ಮಾಲೀಕರ ಧರ್ಮದತ್ತಿ ಆಯೋಜಿಸಿರುವ ರಜತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ವಿಜಯನಗರ 3ನೇ ಹಂತದಲ್ಲಿರುವ ಕಾಗಿನೆಲೆ ಮಠದ ಕಾಲೇಜು ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಲಿದ್ದಾರೆ. 2 ದಿನಗಳ ಪ್ರವಾಸ ಮುಗಿಸಿ ಡಿ.23ರಂದು ರಾತ್ರಿ 7 ಗಂಟೆಗೆ ರಸ್ತೆ ಮೂಲಕ ಬೆಂಗಳೂರಿಗೆ ತೆರಳುವರು.

ಡಾ.ಯತೀಂದ್ರ ಸಿದ್ದರಾಮಯ್ಯಗೆ ಲೋಕಸಭಾ ಕ್ಷೇತ್ರದ ಟಿಕೆಟ್‌ಗಾಗಿ ಅಭಿಮಾನಿಗಳ ಪ್ರಾರ್ಥನೆ



ಮೈಸೂರು: ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ದೊರೆಯಬೇಕೆಂದು ಅವರ ಅಭಿಮಾನಿಗಳು ಚಾಮುಂಡೇಶ್ವರಿ ತಾಯಿಗೆ 101 ತೆಂಗಿನಕಾಯಿ ಒಡೆದು ಪ್ರಾರ್ಥಿಸಿದರು.

ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ಚಾಮುಂಡಿಬೆಟ್ಟದ ಪಾದದಲ್ಲಿ ಜಮಾಯಿಸಿದ ಅಭಿಮಾನಿಗಳು 101 ತೆಂಗಿನಕಾಯಿ ಒಡೆದು ಪ್ರಾರ್ಥಿಸಿದರು. ಈ ವೇಳೆ ಮಾತನಾಡಿದ ಲೋಕೇಶ್ ಪಿಯಾ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಯತೀಂದ್ರ ಸಿದ್ದರಾಮಯ್ಯಗೆ ಕೊಡಬೇಕು. ಈ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಕಾಂಗ್ರೆಸ್ ಗೆಲ್ಲುತ್ತದೆ. ಆದರೆ ಯತೀಂದ್ರ ಸಿದ್ದರಾಮಯ್ಯಗೆ ಟಿಕೆಟ್ ನೀಡಿದರೆ ಅವರನ್ನು 2 ಲಕ್ಷ ಮತಗಳ ಅಂತರದಿಂದ ಗೆಲ್ಲಿಸುತ್ತೇವೆ ಎಂದರು.

ಈ ವೇಳೆ ಪ್ರಶಾಂತ್ ಆರ್ಯ, ರಂಗಸ್ವಾಮಿ, ನಾಗೇಶ್, ಕೃಷ್ಣ, ಶೇಖರ್, ಅವಿನಾಶ್ ಮಂಜುನಾಥ್ ಉಪಸ್ಥಿತರಿದ್ದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಅಧಿವೇಶನಕ್ಕೆ ಮೈಸೂರಿಂದ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ

ಮೈಸೂರು, ಡಿ.21– ದಾವಣಗೆರೆಯ ಬಾಪೂಜಿ ಎಂಬಿಎ ಕಾಲೇಜು ಮೈದಾನದಲ್ಲಿ ಡಿ.23 ಮತ್ತು 24 ರಂದು ನಡೆಯುವ 24ನೇ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಅಧಿವೇಶನಕ್ಕೆ ಮೈಸೂರು ಜಿಲ್ಲೆಯಿಂದ 5000ಕ್ಕೂ ಹೆಚ್ಚು ಮಂದಿ ಭಾಗಿಯಾಗಲಿದ್ದಾರೆ ಎಂದು ರಾಜ್ಯ ಘಟಕದ ಕೋಶಾಧ್ಯಕ್ಷ ವರುಣ ಮಹೇಶ್ ತಿಳಿಸಿದ್ದಾರೆ.



ವರುಣ ಮಹೇಶ್

ವೀರಶೈವ ಲಿಂಗಾಯತ ಮಹಾ ಸಭಾದ ರಾಷ್ಟ್ರಾಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಅಧಿವೇಶನ ನಡೆಯಲಿದ್ದು, ಸುತ್ತೂರು ಶ್ರೀಗಳು ಮತ್ತು ಸಿದ್ದಗಂಗಾ ಶ್ರೀಗಳು, ಪಂಚಪೀಠದ ಶ್ರೀಗಳು, ಸಿರಿಗೆರೆ ಮಠದ ಶ್ರೀಗಳು, ಮೂರು ಸಾವಿರ ಮಠದ ಶ್ರೀಗಳು, ಗದಗ್ ಪಂಚಗವಾಯಿ ಮಠದ ಶ್ರೀಗಳು, ವಚನಾನಂದ ಶ್ರೀಗಳು, ಹಾನಗಲ್ ಶ್ರೀಗಳು ಸೇರಿದಂತೆ ಲಿಂಗಾಯತ ಸಮುದಾಯದ ಎಲ್ಲಾ ಮಂತ್ರಿಗಳು, 56 ಶಾಸಕರು ಹಾಗೂ ಮಾಜಿ ಶಾಸಕರು ಭಾಗವಹಿಸಲಿದ್ದಾರೆ. ಹಾಗೆಯೇ ರೈತರು, ಕೈಗಾರಿಕೋದ್ಯಮಿಗಳು, ನೌಕರರು, ಮಹಿಳೆಯರು, ಯುವಕರು ಸೇರಿದಂತೆ ಸುಮಾರು 3 ಲಕ್ಷಕ್ಕೂ ಹೆಚ್ಚು ಸಮುದಾಯದ ಬಂಧುಗಳು ಸೇರಲಿದ್ದು, ಮಹಾರಾಷ್ಟ್ರ, ತಮಿಳುನಾಡು ಆಂಧ್ರಪ್ರದೇಶದಿಂದಲೂ ಸಮಾಜದ ಬಂಧುಗಳು ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದು ದಿನ ಮುಂಚಿತವಾಗಿಯೇ ಲೋಕಸಭೆ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ

ನವದೆಹಲಿ: ನಿಗದಿಗಿಂತ ಒಂದು ದಿನ ಮುಂಚಿತವಾಗಿಯೇ ಸಂಸತ್ ಚಳಿಗಾಲದ ಅಧಿವೇಶನಕ್ಕೆ ಗುರುವಾರ ತೆರೆ ಬಿದ್ದಿದೆ. ಲೋಕಸಭೆ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗಿದ್ದು, ಚಳಿಗಾಲದ ಅಧಿವೇಶನ ಶೇಕಡಾ 74ರಷ್ಟು ಫಲಪ್ರದವಾಗಿದೆ ಎಂದು ಸ್ಪೀಕರ್ ಓಂ ಬಿರ್ಲಾ ಅವರು ಹೇಳಿದ್ದಾರೆ.



ಸದನವು 14 ಸಭೆಗಳನ್ನು ನಡೆಸಿದೆ ಮತ್ತು 61 ಗಂಟೆ 50 ನಿಮಿಷಗಳ ಕಾಲ ಕಲಾಪ ನಡೆದಿದೆ ಎಂದು ಬಿರ್ಲಾ ತಮ್ಮ ಸಮಾರೋಪ ಭಾಷಣದಲ್ಲಿ ತಿಳಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತೆ 2023, ಭಾರತೀಯ ನಾಗರಿಕ ಸುರಕ್ಷಾ (ದ್ವಿತೀಯ) ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ (ದ್ವಿತೀಯ) ಸಂಹಿತೆ ಸೇರಿದಂತೆ ಒಟ್ಟು 18 ಮಸೂದೆಗಳನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ ಎಂದು ಸ್ಪೀಕರ್ ಹೇಳಿದ್ದಾರೆ. ಲೋಕಸಭೆಯಲ್ಲಿ ಅಂಗೀಕರಿಸಲ್ಪಟ್ಟ ಮಸೂದೆಗಳಲ್ಲಿ ಕೇಂದ್ರ ಸರಕು ಮತ್ತು ಸೇವಾ ತೆರಿಗೆ(ಎರಡನೇ ತಿದ್ದುಪಡಿ) ಮಸೂದೆ, 2023 ಮತ್ತು ದೂರ ಸಂಪರ್ಕ ಮಸೂದೆ, 2023 ಕೂಡ ಸೇರಿವೆ. ಅಧಿವೇಶನದಲ್ಲಿ 55 ಸ್ಟಾರ್ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಲಾಗಿದೆ ಎಂದು ತಿಳಿಸಿದ್ದಾರೆ. ನಿಯಮ 377ರ ಅಡಿಯಲ್ಲಿ ಒಟ್ಟು 265 ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಡಿ.22, ಡಿ.27ರಂದು ವಿದ್ಯುತ್ ಜನಸಂಪರ್ಕ ಸಭೆ

ಮೈಸೂರು,ಡಿ.21– ವಿವಿ ಮೊಹಲ್ಲಾ ವಿಭಾಗದ ಅಧೀಕ್ಷಕ ಇಂಜಿನಿಯರ್, ಕಾರ್ಯನಿರ್ವಾಹಕ ಇಂಜಿನಿಯರ್, ಅಧ್ಯಕ್ಷತೆಯಲ್ಲಿ ಡಿ.22ರಂದು ಬೆಳಗ್ಗೆ 11ಕ್ಕೆ ಹೂಟಗಳ್ಳಿ ಉಪವಿಭಾಗ ಕಚೇರಿ ಮತ್ತು ಮಧ್ಯಾಹ್ನ 3.30ಕ್ಕೆ ವಿ.ವಿ ಮೊಹಲ್ಲಾ ಉಪವಿಭಾಗ ಕಚೇರಿಯಲ್ಲಿ ಹಾಗೂ ಡಿ.27ರಂದು ಬೆಳಗ್ಗೆ 11ಕ್ಕೆ ಕುವೆಂಪುನಗರ ಉಪವಿಭಾಗ ಕಚೇರಿ ಮತ್ತು ಮಧ್ಯಾಹ್ನ 3.30ಕ್ಕೆ ಆರ್.ಕೆ.ನಗರ ಉಪವಿಭಾಗ ಕಚೇರಿಯಲ್ಲಿ ಗ್ರಾಹಕರ ಕುಂದು ಕೊರತೆಗಳ ಬಗ್ಗೆ 2ನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ.

ನಿಧನ



ಜಗದಾಂಬ

ಮೈಸೂರು, ಡಿ.21– ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಅವರ ದೊಡ್ಡಮ್ಮ ಗರುಡಾಚಾರ್ ಬಡಾವಣೆಯ ನಿವಾಸಿ ಜಗದಾಂಬ (98) ಅವರು ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನಾಳೆ (ಡಿ.22) ಮಧ್ಯಾಹ್ನ 12.30ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಗರುಡಾಚಾರ್ ಬಡಾವಣೆಯ ಮಗಳ ಮನೆಯಲ್ಲಿ ಅಂತಿಮ ದರ್ಶನಕ್ಕೆ ಏರ್ಪಾಡು ಮಾಡಲಾಗಿದೆ.

ಸಿರಿಧಾನ್ಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು

ಮೈಸೂರಲ್ಲಿ ಡಿ.28ಕ್ಕೆ ಸಿರಿಧಾನ್ಯ ನಡಿಗೆ, ಸಿರಿಧಾನ್ಯ ಹಬ್ಬ

ಮೈಸೂರು, ಡಿ.21(ಎಸ್‌ಬಿಡಿ)–ಸಿರಿಧಾನ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಮೈಸೂರಲ್ಲಿ ಡಿ.28ರಂದು 'ಸಿರಿಧಾನ್ಯ ನಡಿಗೆ' ಹಾಗೂ 'ಸಿರಿಧಾನ್ಯ ಹಬ್ಬ' ಆಯೋಜಿಸಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್ ತಿಳಿಸಿದರು.



ಡಾ.ಚಂದ್ರಶೇಖರ್

ಮೈಸೂರಿನ ಕಾಡಾ ಕಚೇರಿ ಸಂಕೀರ್ಣದಲ್ಲಿರುವ ತಮ್ಮ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಕೇಂದ್ರ ಸರ್ಕಾರದ ಆಹಾರ ಮತ್ತು ಪೌಷ್ಟಿಕ ಭದ್ರತಾ ಯೋಜನೆಯಡಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಕೃಷಿ ಇಲಾಖೆ ಸಹಯೋಗದಲ್ಲಿ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸಿರಿಧಾನ್ಯದ ಬಳಕೆಯನ್ನು ಉತ್ತೇಜಿಸುವುದರ ಜೊತೆಗೆ ಅದರಿಂದಾಗುವ ಪ್ರಯೋಜನದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ ಎಂದರು.

ಅಂದು ಬೆಳಗ್ಗೆ 8 ಕ್ಕೆ ಅರಮನೆ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಆರಂಭಗೊಳ್ಳುವ 'ಸಿರಿಧಾನ್ಯ ನಡಿಗೆ', ಕೆ.ಆರ್.ವೃತ್ತ, ಡಿ.ದೇವರಾಜ ಅರಸು ರಸ್ತೆ ಮೂಲಕ ಸಾಗಿ ಜಿಲ್ಲಾಧಿಕಾರಿಗಳ ಹಳೇ ಕಚೇರಿ ಬಳಿ ಮುಕ್ತಾಯಗೊಳ್ಳಲಿದೆ. ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಅಧಿಕಾರಿಗಳು, ಸಂಘ ಸಂಸ್ಥೆಗಳ ಸದಸ್ಯರು ಸಿರಿಧಾನ್ಯಗಳ ಮಹತ್ವ ಸಾರುವ ಭಿತ್ತಿಪತ್ರಗಳ ಪ್ರದರ್ಶನ ಹಾಗೂ ಘೋಷಣೆಗಳೊಂದಿಗೆ ಹೆಜ್ಜೆ ಹಾಕಲಿದ್ದಾರೆ. ನಡಿಗೆ ಮುಕ್ತಾಯವಾದ ಬಳಿಕ ಎಲ್ಲರಿಗೂ ಸಿರಿ ಧಾನ್ಯಗಳಿಂದ ತಯಾರಿಸಿದ ಉಪಾಹಾರ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.



ಬಳಿಕ ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ವೇದಿಕೆಯಲ್ಲಿ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ಆಯೋಜಿಸಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪನವರು ಉದ್ಘಾಟನೆ ನೆರವೇರಿಸಲಿದ್ದಾರೆ. ಕಾರ್ಯಕ್ರಮಕ್ಕೆ ಎಲ್ಲಾ ತಾಲೂಕುಗಳಿಂದ ಆಸಕ್ತ ರೈತರನ್ನು ಕರೆತರಲು ವ್ಯವಸ್ಥೆ ಮಾಡಲಾಗಿದ್ದು, 500ಕ್ಕೂ ಹೆಚ್ಚು ರೈತರು ಭಾಗವಹಿಸುವ ನಿರೀಕ್ಷೆಯಿದೆ. ಸಿರಿಧಾನ್ಯಗಳನ್ನು ಬೆಳೆಯುವ ಸುಧಾರಿತ ಕ್ರಮಗಳು, ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಸಿರಿಧಾನ್ಯಗಳಿಂದ ತಯಾರಿಸಬಹುದಾದ ಖಾದ್ಯಗಳ ಬಗ್ಗೆ ತಜ್ಞರು ಉಪನ್ಯಾಸ ನೀಡಲಿದ್ದಾರೆ. ಪ್ರಗತಿಪರ ರೈತರು ಅನುಭವ ಹಂಚಿಕೊಳ್ಳಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಸಿರಿಧಾನ್ಯಗಳ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಲು ಇಚ್ಛಿಸುವ ಉದ್ದಿಮೆದಾರರಿಗೆ ತಮ್ಮ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಸುಮಾರು 20 ಮಳಿಗೆಗಳನ್ನು ನಿರ್ಮಿಸಲಾಗುವುದು. ಆಸಕ್ತ ಉದ್ದಿಮೆದಾರರು ಮುಂಚಿತವಾಗಿ ತಮ್ಮ ಹೆಸರನ್ನು ಸಹಾಯಕ ಕೃಷಿ ನಿರ್ದೇಶಕರ ಬಳಿ ನೋಂದಣಿ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ನಡಿಗೆ ಬಳಿಕ ಸಿರಿಧಾನ್ಯ ಉಪಾಹಾರದ ವ್ಯವಸ್ಥೆ

ರೈತ ದಿನಾಚರಣೆ: ಜಮೀನ್ದಾರಿ ಪದ್ಧತಿ ವಿರುದ್ಧ ಅವಿರತ ಹೋರಾಟ ನಡೆಸಿ, ರೈತಪರ ನೀತಿಗಳನ್ನು ಜಾರಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಜನ್ಮದಿನದ ಅಂಗವಾಗಿ ಡಿ.23ರಂದು 'ರೈತ ದಿನಾಚರಣೆ'ಯನ್ನು ತಾಲೂಕು ಮಟ್ಟದಲ್ಲಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಆಚರಿಸಲಾಗುತ್ತದೆ. ಜಿಲ್ಲಾ ಮಟ್ಟದ 'ರೈತ ದಿನಾಚರಣೆ'ಯನ್ನು ಡಿಸೆಂಬರ್ 28ರಂದು ನಡೆಯಲಿರುವ 'ಸಿರಿಧಾನ್ಯ ಹಬ್ಬ' ದೊಂದಿಗೆ ಆಚರಿಸಲಾಗುತ್ತದೆ ಎಂದರು.

ಶೇ.103ರಷ್ಟು ಬಿತ್ತನೆ: ಮುಂಗಾರು ಹಂಗಾಮಿನಲ್ಲಿ ಮೈಸೂರು ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.17ರಷ್ಟು ಮಳೆ ಕೊರತೆಯಾಗಿದೆ. ಆದರೆ, ಶೇ.0–19ರಷ್ಟು ಕೊರತೆ ಅಥವಾ ಹೆಚ್ಚು ಪ್ರಮಾಣವನ್ನು ಸಾಮಾನ್ಯ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಹಿಂಗಾರು ಮಳೆ ಜಿಲ್ಲೆಯಲ್ಲಿ ವಾಡಿಕೆಯಷ್ಟಾಗಿದೆ ಎನ್ನಬಹುದು. ಹಿಂಗಾರಿನಲ್ಲಿ 60,300 ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ ನಿರೀಕ್ಷೆಗೂ ಮೀರಿ 63 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅಂದರೆ ಶೇ.103ರಷ್ಟು ಬಿತ್ತನೆಯಾಗಿದೆ. ಅಕ್ಟೋಬರ್‌ನಲ್ಲಿ ಬಿದ್ದ ಮಳೆಗೆ ಅನುಗುಣವಾಗಿ ರಾಗಿ, ಹುರುಳಿ, ಮುಸುಕಿನ ಜೋಳ, ಅಲಸಂದೆ, ಅವರೆ ಬೆಳೆಯಲಾಗಿದೆ ಎಂದು ತಿಳಿಸಿದರು.

ರೈತರ ಆತ್ಮಹತ್ಯೆ; 35 ಪ್ರಕರಣ ವರದಿ

"ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಳೆದ ಏಪ್ರಿಲ್‌ನಿಂದ ಈವರೆಗೆ 35 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ಪಿರಿಯಾಪಟ್ಟಣದಲ್ಲಿ ಅತೀ ಹೆಚ್ಚು 18 ಪ್ರಕರಣಗಳಾಗಿವೆ. ಒಟ್ಟು 35 ಪ್ರಕರಣಗಳಲ್ಲಿ 27 ಅರ್ಹ ಪ್ರಕರಣಗಳಾಗಿದ್ದು, 5 ತಿರಸ್ಕೃತಗೊಂಡಿವೆ. ಮೂರು ಪ್ರಕರಣಗಳಲ್ಲಿ ಅಗತ್ಯ ದಾಖಲೆಗಳನ್ನು ಒದಗಿಸಲು ಅವಕಾಶ ನೀಡಲಾಗಿದೆ. ಇವರಲ್ಲಿ 23 ಮೃತ ರೈತರ ಕುಟುಂಬದವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗಿದೆ. ಇನ್ನು ನಾಲ್ವರಿಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು, ನೇರವಾಗಿ ಸಂಬಂಧಪಟ್ಟವರ ಖಾತೆಗೆ ಪರಿಹಾರ ಜಮೆ ಆಗಲಿದೆ.

–ಡಾ.ಬಿ.ಎಸ್.ಚಂದ್ರಶೇಖರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ

ರಸಗೊಬ್ಬರ ಕೊರತೆಯಿಲ್ಲ: ಜಿಲ್ಲೆಯಲ್ಲಿ ರಸಗೊಬ್ಬರಕ್ಕೆ ಯಾವುದೇ ರೀತಿಯ ಕೊರತೆಯಾಗಿಲ್ಲ. ಖಾಸಗಿ ಮಾರಾಟಗಾರರು, ಕೆಎಸ್‌ಎಸ್‌ಇ, ಮಾರ್ಕೆಟಿಂಗ್ ಫೆಡರೇಷನ್ ಸೇರಿ ಎಲ್ಲಾ ಸಂಸ್ಥೆಗಳಲ್ಲೂ ಅಗತ್ಯಕ್ಕಿಂತ ಹೆಚ್ಚು ರಸಗೊಬ್ಬರ ದಾಸ್ತಾನು ಇದೆ. ಈ ವರ್ಷದಲ್ಲಿ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕೀಟನಾಶಕಕ್ಕೆ ಯಾವುದೇ ರೀತಿಯಲ್ಲೂ ಕೊರತೆಯಾಗದಂತೆ ಹಾಗೂ ಪೂರೈಕೆಗೆ ಸಂಬಂಧಪಟ್ಟ ಯಾವುದೇ ದೂರುಗಳು ಬಾರದಂತೆ ಕ್ರಮ ವಹಿಸಲಾಗಿದೆ ಎಂದರು.


ಬಿಜೆಪಿ ಮುಖ್ಯಮಂತ್ರಿಗಳ ಅವಧಿಯಲ್ಲಿ ಮಂಜೂರಾಗಿದ್ದ ಕಿದ್ವಾಯಿ ಕ್ಯಾನ್ಸರ್ ಘಟಕಕ್ಕೆ ಇಂದು ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ

ಮೈಸೂರು, ಡಿ.21–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಡಿ.22) ಮಧ್ಯಾಹ್ನ 12.30ಕ್ಕೆ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆವರಣದಲ್ಲಿ ಮೈಸೂರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪೆರಿಫೆರಲ್ ಕ್ಯಾನ್ಸರ್ ಕೇಂದ್ರದ ಕಟ್ಟಡಕ್ಕೆ ಶಂಕುಸ್ಥಾಪನೆ ಮತ್ತು ಇದೇ ಆವರಣದಲ್ಲಿ 42 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮಹಿಳೆಯರ ವಿದ್ಯಾರ್ಥಿನಿಲಯ ಉದ್ಘಾಟನೆ ಮಾಡಲಿದ್ದಾರೆ.

ಈ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 2020ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಅನುಮೋದನೆ ನೀಡಿದ್ದರು. ನಂತರ ಮುಖ್ಯಮಂತ್ರಿಯಾಗಿ ಬಂದ ಬಸವರಾಜ ಬೊಮ್ಮಾಯಿ ಅವರು ಈ ಕಟ್ಟಡ ನಿರ್ಮಾಣಕ್ಕೆ 50 ಕೋಟಿ ರೂ. ಮಂಜೂರು ಮಾಡಿದ್ದರು.

ಇಲವಾಲ ಹೋಬಳಿ ದಡದಕಲ್ಲಹಳ್ಳಿಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸಂಶೋಧನಾ ಘಟಕ ನಿರ್ಮಾಣಕ್ಕಾಗಿ ದಡದಕಲ್ಲಹಳ್ಳಿ ಗ್ರಾಮದ ಸರ್ವೆ ನಂ.125ರಲ್ಲಿ 18 ಎಕರೆ ಗೋಮಾಳ ಜಾಗವನ್ನು 2022ರ ಅಕ್ಟೋಬರ್ 13ರಂದು ಅಂದಿನ ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ಅವರು ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿದ್ದರು. ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸುತ್ತಿರುವ ಮಹಿಳೆಯರ ವಿದ್ಯಾರ್ಥಿನಿಲಯವು ಕೇಂದ್ರ ಸರ್ಕಾರದ ಶೇ.60 ಹಾಗೂ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಶೇ.40ರಷ್ಟು ಅನುದಾನದಲ್ಲಿ ನಿರ್ಮಾಣವಾಗಿದೆ. ಮೈಸೂರಿನಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪೆರಿಫೆರಲ್ ಕ್ಯಾನ್ಸರ್ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಮಾಜಿ ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ಮೈಸೂರು ಜಿಲ್ಲೆಯ ಹಿಂದಿನ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕಿದ್ವಾಯಿ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ರಾಮಚಂದ್ರ, ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ ಅವರಿಗೆ ಶಾಸಕರೂ ಆದ ಮೈಸೂರು ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಕೃತಜ್ಞತೆ ಸಲ್ಲಿಸಿದ್ದಾರೆ.

20ನೇ ವರ್ಷದ ಸವಿನೆನಪು



ಶ್ರೀ ಎಂ. ಬಿ. ಕುಮಾರ್ (ಬುಲೆಟ್)

ದುಃಖತಪ್ತರು: ಪತ್ನಿ ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳಾದ ರವಿಕುಮಾರ್ ಮತ್ತು ಮಗಳು ರೂಪ, ಮಂಜು ಹಾಗೂ ಮೊಮ್ಮಕ್ಕಳಾದ ಹರ್ಷ, ಅಂಜಲಿ ಮತ್ತು (ಲೇಟ್ ಮಿಷಿನ್ ಬೆಟ್ಟೀಗೌಡ ನರಸಮ್ಮ ಕುಟುಂಬವರ್ಗದವರು) ಮತ್ತು ಮಂಚೇಗೌಡನ ಕೊಪ್ಪಲ್ ಗ್ರಾಮಸ್ಥರು

ಉಪರಾಷ್ಟ್ರಪತಿಗೆ ಅಪಮಾನ ಖಂಡಿಸಿ ಬಿಜೆಪಿ ಪ್ರತಿಭಟನೆ



ಮೈಸೂರು,ಡಿ.21(ಎಂಟಿವೈ)– ಸಂಸತ್ ಭವನದ ಮುಂದೆ ಪ್ರತಿಭಟನೆ ಮಾಡುವ ವೇಳೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹಾಗೂ ಟಿಎಂಸಿ ಸಂಸದರು ಅಪಮಾನಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿರುವ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ವೇಳೆ ಉಪರಾಷ್ಟ್ರಪತಿ ಅವರನ್ನು ಅಣಕಿಸುವ ಮೂಲಕ ಅಪಮಾನಿಸಿರುವ ರಾಹುಲ್ ಗಾಂಧಿ ಹಾಗೂ ಟಿಎಂಸಿ ಸಂಸದರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಇತ್ತೀಚೆಗೆ ಸಂಸತ್ತಿನ ಹೊರಭಾಗದ ಮೆಟ್ಟಿಲುಗಳ ಮೇಲೆ ಪ್ರತಿಪಕ್ಷದ ಸಂಸದರು ಪ್ರತಿಭಟನೆ ನಡೆಸುವ ಸಂದರ್ಭ ರಾಜ್ಯಸಭೆ ಸಭಾಪತಿಯೂ ಆದ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಅವಮಾನಿಸಿದ್ದಾರೆ. ಇದು ಹಿಂದುಳಿದ ವರ್ಗಕ್ಕೆ ಮಾಡಿದ ಅಗೌರವ. ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ಉಪ ರಾಷ್ಟ್ರಪತಿಯವರನ್ನು ಅಣಕಿಸಿದ್ದಾರೆ. ಇದು ಅಕ್ಷಮ್ಯ ಅಪರಾಧ. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಮುಖಂಡರಿಗೆ ಸಂವಿಧಾನದ ಬಗ್ಗೆ ನಂಬಿಕೆ, ಗೌರವವಿಲ್ಲ. ರಾಜ್ಯದ ಒಬ್ಬ ಮಂತ್ರಿ ತೆಲಂಗಾಣಕ್ಕೆ ಹೋಗಿ ಸ್ಪೀಕರ್ ಹುದ್ದೆಗೆ ಅವಮಾನ ಮಾಡಿದರು. ಹೀಗಿದ್ದರೂ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಹೀಗೆ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಇಲ್ಲಸಲ್ಲದ ಹೇಳಿಕೆ ನೀಡುವ ಮೂಲಕ ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿವೆ ಎಂದು ಕಿಡಿಕಾರಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಉಪರಾಷ್ಟ್ರಪತಿ ಅವರನ್ನು ಅಣುಕಿಸಿ ಅಪಮಾನ ಮಾಡಿರುವುದು ಖಂಡನೀಯ. ರಾಹುಲ್ ಗಾಂಧಿ ತಮ್ಮ ಕುಟುಂಬದ ಗೌರವ ಹಾಳು ಮಾಡುತ್ತಿರುವುದಲ್ಲದೆ ಸಂವಿಧಾನದ ಘನತೆಯನ್ನೂ ಕಳೆಯುತ್ತಿದ್ದಾರೆ. ಜನರು ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಸುನಂದಾ ಪಾಲನೇತ್ರ, ಮಹಿಳಾ ಘಟಕದ ಅಧ್ಯಕ್ಷೆ ಹೇಮಾ ನಂದೀಶ್, ಮಾಜಿ ಉಪ ಮೇಯರ್ ರೂಪಾ, ಮುಖಂಡರಾದ ಯಶಸ್ವಿನಿ ಸೋಮಶೇಖರ್, ಆರ್.ರಘು, ಹೇಮಂತ್ ಕುಮಾರ್‌ಗೌಡ, ಮಿರ್ಲೆ ಶ್ರೀನಿವಾಸ ಗೌಡ, ಹೆಚ್.ಜಿ.ಗಿರಿಧರ್, ಬಿ.ವಿ.ಮಂಜುನಾಥ್, ಎಂ.ಎಸ್.ಧನಂಜಯ, ಗೋಪಾಲ ರಾವ್ ಇನ್ನಿತರರು ಪಾಲ್ಗೊಂಡಿದ್ದರು.

ರೈತ ದಿನಾಚರಣೆ ಪ್ರಯುಕ್ತ ವಿವಿಧ ಕಾರ್ಯಕ್ರಮ

ಮೈಸೂರು: ಡಿ.28 ರಂದು ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ ಕಾರ್ಯಕ್ರಮವನ್ನು ಬೆಳಗ್ಗೆ 7.45ಕ್ಕೆ ಮೈಸೂರು ಅರಮನೆಯ ಕೋಟೆ ಅಂಜನೇಯಸ್ವಾಮಿ ದೇವಸ್ಥಾನದಿಂದ ಪ್ರಾರಂಭಗೊಂಡು ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ನಡಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11 ಗಂಟೆಗೆ ಸಿರಿಧಾನ್ಯ ಉತ್ಪಾದಕರು, ಮಾರಾಟಗಾರರ ಸಂವಾದ ಮತ್ತು ರೈತ ದಿನಾಚರಣೆ ಕಾರ್ಯಕ್ರಮವನ್ನು ದಸರಾ ವಸ್ತುಪ್ರದರ್ಶನ ಅವರಣದಲ್ಲಿರುವ ಪಿ.ಕಾಳಿಂಗರಾವ್ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೂರು ದಿನಗಳ ಕೃಷಿ ತರಬೇತಿ ಕಾರ್ಯಕ್ರಮ

ಮೈಸೂರು, ಡಿ.21– ಜಿಲ್ಲಾ ಕೃಷಿ ತರಬೇತಿ ಕೇಂದ್ರ ನಾಗನಹಳ್ಳಿ ಮೈಸೂರಿನಲ್ಲಿ ಡಿಸೆಂಬರ್ 27ರಿಂದ 29ರವರೆಗೆ ಮಾವಿನ ಬೆಳೆಯಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ಧತಿಗಳು, ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ ವಿಷಯದ ಬಗ್ಗೆ ರೈತರು, ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು, ರೈತ ಮಹಿಳೆಯರಿಗೆ ಊಟದ ವ್ಯವಸ್ಥೆಯನ್ನು ಒದಗಿಸಲಾಗುವುದು. ಆಸಕ್ತ ರೈತರು, ರೈತ ಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ಕೃಷಿ ಅಧಿಕಾರಿ ದೂರವಾಣಿ ಸಂಖ್ಯೆ: 8277933177ಗೆ ಕರೆಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ಮೈಸೂರು ಜಿಲ್ಲೆಯ 30 ರೈತರು, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ

ಬಿ.ರಾಮಕೃಷ್ಣ ಅಪರೂಪದ ರಾಜಕಾರಣಿ

• ಸಚಿವ ಎನ್.ಚಲುವರಾಯಸ್ವಾಮಿ ಶ್ಲಾಘನೆ • ಮಂಡ್ಯದಲ್ಲಿ ಅಭಿನಂದನಾ ಕಾರ್ಯಕ್ರಮ



ಮಂಡ್ಯ, ಡಿ.21– ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ಸರಳ ವ್ಯಕ್ತಿತ್ವ ಉಳ್ಳ ಅಪರೂಪದ ರಾಜಕಾರಣಿ ಯಾಗಿ ಇತರರಿಗೆ ಮಾದರಿಯಾಗಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಶ್ಲಾಘಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ನಡೆದ ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ಅವರ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಮಾನ್ಯ ಜೀವನ ನಡೆಸಲಿಕ್ಕೆ ಪ್ರಾರಂಭ ಮಾಡಿದ ಬಿ.ರಾಮಕೃಷ್ಣ ಇಂದು ರಾಜ್ಯದಲ್ಲಿ ರಾಜಕೀಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಛಾಪು ಮೂಡಿಸಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡ ಅಪರೂಪದ ರಾಜ ಕಾರಣಿಯಾಗಿದ್ದಾರೆ ಎಂದು ಬಣ್ಣಿಸಿದರು.

ರಾಮಕೃಷ್ಣ ಅವರಿಗೆ ಮನುಷ್ಯನಿಗೆ ಇರಬೇಕಾದ ವ್ಯಕ್ತಿತ್ವ ಇದೆ. ಮನುಷ್ಯ ಮತ್ತು ವ್ಯವಸ್ಥೆಗೆ ಹಾನಿಯಾಗುವ ಯಾವುದೇ ವ್ಯಕ್ತಿತ್ವ ಇವರಲ್ಲಿ ಇಲ್ಲ. ಸತ್ಯ, ಸುಳ್ಳು, ಒಳ್ಳೆದು, ಕೆಟ್ಟದ್ದು ಜೊತೆಗೆ ಇರುತ್ತದೆ. ಇವರು ಒಳ್ಳೆಯದನ್ನೇ ರೂಢಿಸಿಕೊಂಡು ಸತ್ಯವಾಗಿ ಬದುಕಿ ಇತರರಿಗೆ ಮಾದರಿಯಾಗಿದ್ದಾರೆ. ವ್ಯಕ್ತಿತ್ವದ ಜೊತೆಗೆ ಸ್ನೇಹಮಯವಾಗಿ ಬದುಕಿದ್ದಾರೆ. ನಾನು ರಾಜಕೀಯಕ್ಕೆ ಕಾಲಿಟ್ಟಾಗ ನನ್ನ ಜೊತೆ ರಾಜಕೀಯವಾಗಿ ಕೈಜೋಡಿಸಿ ಬೆಳದವರಲ್ಲಿ ಇವರು ಒಬ್ಬರು ಎಂದರು.

ಇವರು ಎಲ್ಲರಿಗೂ ಅದಷ್ಟು ಸಹಾಯ ಮಾಡಿದ್ದಾರೆ. ಕಷ್ಟ ಅಂತ ಬಂದು ತಮ್ಮ ಬಳಿ ಅಳಲು ತೋಡಿಕೊಂಡಾಗ ಯಾರನ್ನೂ ಬರಿಗೈಲಿ ಕಳುಹಿಸಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಕೂಡ ಏನಾದರು ಸೇವೆ ಮಾಡಬೇಕು ಎನ್ನುವ ನಿಟ್ಟಿನಲ್ಲಿ ತಮ್ಮ ಊರಿನಲ್ಲಿಯೇ ಕೌಟಿಲ್ಯ ಶಿಕ್ಷಣ ಸಂಸ್ಥೆ ಕಟ್ಟಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ಧಾರೆಯೆರೆದಿದ್ದಾರೆ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾ ನಂದನಾಥಸ್ವಾಮೀಜಿ ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಬಿ.ರಾಮಕೃಷ್ಣ ಅವರನ್ನು ಅಭಿನಂದಿಸ ಲಾಯಿತು. ಕೃಷಿಕರು ಹಾಗೂ ಲೇಖಕರನ್ನು ಸನ್ಮಾನಿಸಲಾಯಿತು. ಆದಿ ಚುಂಚನಗಿರಿ ಮಠದ ಪ್ರಧಾನ ಕಾರ್ಯ ದರ್ಶಿ ಶ್ರೀ ಪುರುಷೋತ್ತಮಾ ನಂದ ಸ್ವಾಮೀಜಿ, ಶಾಸಕ ಗಣಿಗ ರವಿ ಕುಮಾರ್, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮರಿತಿಬ್ಬೇಗೌಡ, ಮಾಜಿ ಶಾಸಕರಾದ ಎಂ.ಶ್ರೀನಿವಾಸ್, ಕೆ.ಟಿ.ಶ್ರೀಕಂಠೇ ಗೌಡ ಇತರೆ ಗಣ್ಯರು ಉಪಸ್ಥಿತರಿದ್ದರು.

ನಾಲೆಗಳಿಗೆ ನೀರು ಬಿಡುಗಡೆ ಇಂದಿನ ಸಭೆಯಲ್ಲಿ ನಿರ್ಧಾರ

ಮಂಡ್ಯ, ಡಿ.21–ಶುಕ್ರವಾರ ಕೆಆರ್‌ಎಸ್‌ನಲ್ಲಿ ನಡೆಯಲಿರುವ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಸಂಕ್ರಾಂತಿ ಹಬ್ಬಕ್ಕೆ ನಾಲೆಗಳಿಗೆ ನೀರು ಬಿಡಲು ತೀರ್ಮಾನಿಸಲಾಗುದು ಎಂದು ಜಿಲ್ಲಾ ಉಸ್ತು ವಾರಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶುಕ್ರವಾರ ನಡೆಯುವ ಸಭೆಯಲ್ಲಿ ಮೈಸೂರು, ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಸೇರಿದಂತೆ ಅಧಿಕಾರಿಗಳು ಭಾಗಿಯಾಗಲಿದ್ದಾರೆ. ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ ಎಂದರು. ಹಬ್ಬದ ಹಿನ್ನಲೆ ಹಾಗೂ ಜಾನು ವಾರುಗಳಿಗೆ ನೀರಿನ ಅವಶ್ಯಕತೆ ಇರುವುದರಿಂದ ಒಂದು ಕ್ಯುಸೆಕ್ ನೀರು ಕೇಳಿದ್ದಾರೆ. ಚರ್ಚಿಸಿ ತೀರ್ಮಾನ ಮಾಡುತ್ತೇವೆ. ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುಗಡೆ ಮಾಡುತ್ತಿಲ್ಲ. ಆದರೆ, ಸೀಪೇಜ್ ನೀರು ಹೋಗುತ್ತಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭೇಟಿ ಮಾಡಿ, ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದಾರೆ. ಬರ ಪ್ರಮುಖ ವಿಚಾರ ಅದರ ಬಗ್ಗೆಯೂ ಚರ್ಚೆ ಮಾಡಲಾಗಿದೆ. ಆದಷ್ಟು ಬೇಗ ಬರ ಪರಿಹಾರ ನೀಡುವಂತೆ ಕೇಳಿದ್ದೇವೆ. ಒಕ್ಕೂಟದ ವ್ಯವಸ್ಥೆಯಲ್ಲಿ ಇರೋ ಕಾರಣ ಅವರಿಂದ ನಮಗೆ ನಿರೀಕ್ಷೆ ಇದೆ. ಬರ ಪರಿಹಾರ ಎಷ್ಟು ಕೊಡ್ತಾರೆ ಎಂದು ನೋಡಬೇಕು. ನಮ್ಮ ಪರಿಸ್ಥಿತಿಯನ್ನು ವಿವರವಾಗಿ ಹೇಳಿದ್ದೇವೆ ಎಂದರು.

ಜೆಡಿಎಸ್–ಬಿಜೆಪಿ ಮೈತ್ರಿ ಬಗ್ಗೆ ಮಾತನಾಡಿದ ಸಚಿವರು, ಮೈತ್ರಿ ಮಾಡಿಕೊಳ್ಳುತ್ತಿರೋ ಜೆಡಿಎಸ್‌ಗೆ ಒಳ್ಳೆಯದಾಗಲಿ. ಅವರ ಮೇಲೆ ನಮಗೆ ಯಾವುದೇ ದ್ವೇಷ ಇಲ್ಲ. ಜೆಡಿಎಸ್ ನವರು ನಮ್ಮ ಹಳೆಯ ಸ್ನೇಹಿತರು. ಬಿಜೆಪಿ ಅವರು ಜೆಡಿಎಸ್‌ಗೆ ಅವಕಾಶ ಕೊಟ್ಟಿದ್ದಾರೆ ಅಂದರೆ ಖುಷಿಪಡುತ್ತೇವೆ. ಹಿಂದೆ ಜೆಡಿಎಸ್ ಬಿಜೆಪಿಯ ಯಡಿಯೂರಪ್ಪ ಅವರ ಜೊತೆ ಇದ್ದು ಬಂದಿದ್ದು ಗೊತ್ತಿದೆ. ಕಾಂಗ್ರೆಸ್‌ನ ಧರ್ಮಸಿಂಗ್ ಜೊತೆ ಇದ್ದು ಬಂದಿದ್ದು ಗೊತ್ತಿದೆ. ಮೈತ್ರಿ ಧರ್ಮನಾ ಬಹಳ ಚನ್ನಾಗಿ ಪಾಲಿಸುವುದು ಜೆಡಿಎಸ್ ಮಾತ್ರ. ಮೈತ್ರಿ ಧರ್ಮನ ಜೆಡಿಎಸ್ ಕರೆಕ್ಟ್ ಆಗಿ ನಡೆಸುತ್ತಾರೆ. ಜೆಡಿಎಸ್ ಮತ್ತು ಕುಮಾರಸ್ವಾಮಿ ಮಾತ್ರ ಮೈತ್ರಿ ಧರ್ಮಪಾಲಕರು ಎಂದು ವ್ಯಂಗ್ಯವಾಡಿದರು.

ಇನ್ನು ಜೆಡಿಎಸ್‌ನಿಂದ ಮಂಡ್ಯ ಕ್ಷೇತ್ರಕ್ಕೆ ನಾನು ಅಭ್ಯರ್ಥಿ ಯಾದರೆ ನನ್ನ ವಿರುದ್ಧ ಚಲುವರಾಯಸ್ವಾಮಿ ಸ್ಪರ್ಧಿಸಲಿ ಎಂದು ಆಹ್ವಾನ ನೀಡಿದ್ದ ಮಾಜಿ ಶಾಸಕ ಸುರೇಶ್‌ಗೌಡ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಅವರ ವಿರುದ್ಧ ಗೆಲ್ಲೋಕೆ ಆಗುತ್ತಾ? ಎಲ್ಲಾದರೂ ಉಂಟೇ? ಸುರೇಶ್‌ಗೌಡ ಅಭ್ಯರ್ಥಿಯಾದರೆ ಅವರ ವಿರುದ್ಧ ಅಭ್ಯರ್ಥಿ ಹುಡುಕುವುದಕ್ಕೆ ನಮಗೆ ಭಾರಿ ಸಮಸ್ಯೆ ಆಗುತ್ತದೆ. ಬಹುಶಃ ಇವತ್ತು ಜೆಡಿಎಸ್‌ಗೆ ಬಹಳ ಪ್ರಬಲವಾದ ಅಭ್ಯರ್ಥಿಯೇ ಸುರೇಶ್‌ಗೌಡ. ಅವರೇ ಅಭ್ಯರ್ಥಿಯಾದರೆ ನಾವು ಏನು ಮಾಡೋದು ಆತಂಕ ನಮ್ಮಲ್ಲಿ ಸೃಷ್ಟಿಯಾಗಿದೆ ಎಂದು ಸುರೇಶ್‌ಗೌಡ ಕಾಲೆಳೆದರು.



ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮದಲ್ಲಿ ಸುಮಾರು 3 ಕೋಟಿ ರೂ. ವೆಚ್ಚದ ಜಲಜೀವನ್ ಮಿಷನ್ ಕಾಮಗಾರಿಗೆ ಶಾಸಕ ರಮೇಶ ಬಂಡಿಸಿದ್ದೇಗೌಡ ಭೂಮಿಪೂಜೆ ನೆರವೇರಿಸಿದರು. ಜಲಜೀವನ್ ಮಿಷನ್ ಇಂಜಿನಿಯರ್ ಪ್ರಸನ್ನ, ಗ್ರಾಪಂ ಅಧ್ಯಕ್ಷ ಬಿ.ವಿ.ಸುರೇಶ್, ಪಿಡಿಓ ಪರಮೇಶ್, ಗ್ರಾಪಂ ಸದಸ್ಯರು ಇದ್ದರು.

ಹೆದ್ದಾರಿ ಕಾಮಗಾರಿ ತಡೆದು ಗ್ರಾಮಸ್ಥರ ಪ್ರತಿಭಟನೆ

ಕೆ.ಆರ್.ಪೇಟೆ, ಡಿ.21– ಹೆದ್ದಾರಿ ನಿರ್ಮಾಣಕ್ಕೆ ಭೂಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ತಾಲೂಕಿನ ಕುರ್ನೇನಹಳ್ಳಿ ಗ್ರಾಮಸ್ಥರು ಗುರುವಾರ ಕಾಮಗಾರಿ ತಡೆದೊಡ್ಡಿ ಪ್ರತಿಭಟನೆ ನಡೆಸಿದರು.

ಕೆಶಿಫ್ ಯೋಜನೆಯಡಿ ನಿರ್ಮಿಸುತ್ತಿರುವ ಜಲಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿಗೆ ಬಡ ರೈತರಿಂದ ಭೂಮಿ ಸ್ವಾಧೀನ ಪಡಿಸಿಕೊಂಡಿದ್ದು ಸೂಕ್ತ ಪರಿಹಾರ ನೀಡಿಲ್ಲ. ಕುರ್ನೇನಹಳ್ಳಿ ಗ್ರಾಮದ ಸೋಮು ಅವರಿಗೆ ಸೇರಿದ 11.08ಗುಂಟೆ ಹಾಗೂ ಕೃಷ್ಣಯ್ಯ ಅವರಿಗೆ ಸೇರಿದ 2 ಗುಂಟೆ ಜಮೀನಿನಲ್ಲಿ ಇವರ ಗಮನಕ್ಕೆ ಬಾರದೆ ರಾತ್ರೋರಾತ್ರಿ ರಸ್ತೆ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ. ಮೊದಲು ಸೂಕ್ತ ಪರಿಹಾರ ನೀಡಿ, ನಂತರ ಕಾಮಗಾರಿ ಆರಂಭಿಸಲಿ ಎಂದು ಕೆಶಿಫ್ ಅಧಿಕಾರಿಗಳ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕೆಶಿಫ್ ಅಧಿಕಾರಿಗಳು ಈ ಬಡರೈತರಿಂದ ಜಮೀನು ಖರೀದಿಸದೇ ಮೋಸದಿಂದ ಅವರ ಜಮೀನಿನಲ್ಲಿ ರಸ್ತೆ ನಿರ್ಮಿಸುತ್ತಿದ್ದಾರೆ. ಇವರಿಗೆ ಗೊತ್ತಾಗದಂತೆ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ರೈತರಿಗೆ ಮೋಸ ಮಾಡಲು ಯತ್ನಿಸುತ್ತಿರುವ ಅಧಿಕಾರಿಗಳ ವರ್ತನೆ ಸರಿಯಲ್ಲ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಯುವ ಮುಖಂಡ ಅನಿಲ್‌ಗೌಡ, ರೈತರಾದ ಕೃಷ್ಣಯ್ಯ, ಸೋಮು, ನಾರಾಯಣಗೌಡ, ಚಂದ್ರೇಗೌಡ, ಅನಿಲ್, ದೀಪು, ವಾಸುದೇವ್, ಸುನೀಲ್, ರುಕ್ಮಿಣಿ ರಕ್ಷಿತ್, ಸಾಗರ್, ದರ್ಶನ್ ಮತ್ತಿತರರು ಇದ್ದರು.

ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ: ನಿವೃತ್ತ ಶಿಕ್ಷಕ ಸಾವು

ಮಳವಳ್ಳಿ, ಡಿ.21–ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ ಹೊಡೆದು ನಿವೃತ್ತ ಶಿಕ್ಷಕ ಮೃತಪಟ್ಟಿರುವ ಘಟನೆ ಪಟ್ಟಣದ ಅನಂತ್‌ರಾಮ್ ಸರ್ಕಲ್‌ನಲ್ಲಿ ಗುರುವಾರ ಬೆಳ್ಳಂಬೆಳಗ್ಗೆ ನಡೆದಿದೆ. ಪಟ್ಟಣದ ಪೇಟೆ ಬೀದಿಯ ನಿವಾಸಿಯಾದ ನಿವೃತ್ತ ಶಿಕ್ಷಕ ವೀರೇಗೌಡ (65) ಮೃತಪಟ್ಟಿದ್ದು, ವೀರೇಗೌಡ ಬೈಕ್‌ನಲ್ಲಿ ಹೋಗುತ್ತಿದ್ದಾಗ ಬೆಂಗಳೂರು–ಕೊಳ್ಳೇಗಾಲ ಮಾರ್ಗವಾಗಿ ಬಂದ ಖಾಸಗಿ ಬಸ್ ಅನಂತರಾಮ್ ಸರ್ಕಲ್‌ನಲ್ಲಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಇವರನ್ನು ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಈ ಸಂಬಂಧ ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಮೈಗೂಡಿಸಿಕೊಳ್ಳಿ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಟಿ.ಮಂಜು ಸಲಹೆ



ಕೆ.ಆರ್.ಪೇಟೆ, ಡಿ.21– ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಮೈಗೂಡಿಸಿಕೊಂಡು, ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿದರೆ ಉತ್ತಮ ಸಾಧನೆ ಮಾಡಬಹುದು ಎಂದು ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯಪಟ್ಟರು.

ಪಟ್ಟಣದ ರಾಮದಾಸ್ ಹೋಟೆಲ್‌ನ ಸುಲೋಚನಾ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ವತಿಯಿಂದ ನಡೆದ ಲಿಂಗಾಯತ ಸಮಾಜದ ಪ್ರತಿಭಾವಂತ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರು ಹೇಳಿರುವಂತೆ ವಿದ್ಯಾರ್ಥಿ ಗಳಲ್ಲಿ ಸುಪ್ತ ಪ್ರತಿಭೆ ಅಡಗಿರುತ್ತದೆ. ಅದನ್ನು ಹೊರ ತರುವ ಕೆಲಸವನ್ನು ಶಿಕ್ಷಕರು ಹಾಗೂ ಪೋಷಕರು ಮಾಡಿದರೆ ಮಕ್ಕಳನ್ನು ವಿದ್ಯಾವಂತರಾಗಿ ಹಾಗೂ ಪ್ರತಿಭಾ ವಂತರಾಗಿ ನೋಡಲು ಸಾಧ್ಯವಾಗುತ್ತದೆ. ವಿದ್ಯಾರ್ಥಿ ಗಳು ಜೀವನದಲ್ಲಿ ಶಿಸ್ತು, ಸಂಯಮ ಹಾಗೂ ಉತ್ತಮ ನಡವಳಿಕೆ ಅಳವಡಿಸಿಕೊಳ್ಳಬೇಕು. ಪೋಷಕರು ತಮ್ಮ ಮಕ್ಕಳಿಗೆ ಅವರ ಅನುಕೂಲಕ್ಕೆ ತಕ್ಕಂತೆ ವ್ಯಾಸಾಂಗ ಮಾಡಲು ಅವಕಾಶ ನೀಡಬೇಕು ಎಂದರು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ವಿ.ಎಸ್.ಧನಂಜಯ್‌ಕುಮಾರ್ ಮಾತ ನಾಡಿ, ತಾಲೂಕಿನಲ್ಲಿ ನಮ್ಮ ಸಮುದಾಯದ ಬಗ್ಗೆ ಮಾಜಿ ಸ್ಪೀಕರ್ ಕೃಷ್ಣ ಅವರನ್ನು ಹೊರತುಪಡಿಸಿದರೇ ಶಾಸಕ ಹೆಚ್.ಟಿ.ಮಂಜು ಅಪಾರ ಗೌರವ ಹೊಂದಿದ್ದಾರೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಬಸವೇಶ್ವರ ಭವನ ಹಾಗೂ ನಮ್ಮ ಸಮುದಾಯದ ಹಾಸ್ಟೆಲ್ ಕಟ್ಟಡಕ್ಕೆ ಹಣ ಮಂಜೂರು ಮಾಡಿದ್ದರು. ಆದರೆ ಅದು ಕಾರಣಾಂತರಗಳಿಂದ ಸ್ಥಗಿತಗೊಂಡಿದೆ. ನಿಮ್ಮ ಅವಧಿಯಲ್ಲಿ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರೆ ನಮ್ಮ ಸಮುದಾಯ ಯಾವಾಗಲೂ ನಿಮ್ಮ ಬೆನ್ನೆಲುಬಾಗಿ ನಿಲ್ಲುತ್ತದೆ ಎಂದು ಶಾಸಕರಲ್ಲಿ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರ ಗವಿಮಠದ ಪೀಠಾಧಿಪತಿ ಶ್ರೀಸ್ವತಂತ್ರ ಚೆನ್ನವೀರಯ್ಯ ಸ್ವಾಮೀಜಿ ಹಾಗೂ ಪುರ ಗ್ರಾಮದ ಶ್ರೀಮಲೆಮಹದೇಶ್ವರ ಗುರುಗಳಾದ ಶ್ರೀಬಸಪ್ಪಸ್ವಾಮಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಜಾನಕೀರಾಂ, ತಾಲೂಕು ಬಿಜೆಪಿ ಪ್ರಧಾನ ಕಾರ್ಯ ದರ್ಶಿ ಪ್ರಕಾಶ್, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ನಾಗೇಶ್, ಎಲ್‌ಐಸಿ ಶಿವಪ್ಪ, ಮಹಾಸಭಾ ಟೌನ್ ಅಧ್ಯಕ್ಷ ರಾಜೇಶ್, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ರುದ್ರಪ್ಪ, ತಾಲೂಕು ವೀರಶೈವ ಮಹಾ ಸಭಾ ಪ್ರಧಾನ ಕಾರ್ಯದರ್ಶಿ ವೀರಪ್ಪ, ಕುಮಾರ್, ಉಪಾಧ್ಯಕ್ಷೆ ಜಯನಂದಿನಿ, ಮಾದೇಶ್, ಶಿವಮೂರ್ತಿ, ನಂಜುಂಡಪ್ಪ, ಈರಾಜಮ್ಮ, ಪುಷ್ಪ , ಜ್ಯೋತಿ, ಮಹೇಶ್, ಕುಮಾರ್, ಸಮುದಾಯದ ಹಿರಿಯರು, ಪದಾಧಿ ಕಾರಿಗಳು ಸೇರಿದಂತೆ ನೂರಾರು ಮಂದಿ ಇದ್ದರು.

ಇಂದು ಮೈಸೂರಲ್ಲಿ ಕಿದ್ವಾಯಿ ಘಟಕಕ್ಕೆ ಸಿಎಂ ಶಂಕುಸ್ಥಾಪನೆ

• ಇದೇ ವೇಳೆ ಮೆಡಿಕಲ್ ಕಾಲೇಜು ಬಾಲಕಿಯರ ಹಾಸ್ಟೆಲ್ ಉದ್ಘಾಟನೆ • 18 ತಿಂಗಳಲ್ಲಿ ಕ್ಯಾನ್ಸರ್ ಘಟಕ ಕಟ್ಟಡ ಕಾಮಗಾರಿ ಪೂರ್ಣ • ಶಾಸಕ ಕೆ.ಹರೀಶ್‌ಗೌಡ ಮಾಹಿತಿ



ಮೈಸೂರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಫೆರಿಫೆರರಲ್ ಕ್ಯಾನ್ಸರ್ ಕೇಂದ್ರ ಕಟ್ಟಡದ ನೀಲನಕ್ಷೆಯನ್ನು ಶಾಸಕ ಕೆ.ಹರೀಶ್‌ಗೌಡ ಪ್ರದರ್ಶಿಸಿದರು. ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಬೆಂಗಳೂರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ವಿ.ಲೋಕೇಶ್ ಮತ್ತಿತರರಿದ್ದರು.

ಮೈಸೂರು, ಡಿ.21(ಎಂಕೆ)– ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಮೈಸೂರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಫೆರಿಫೆರಲ್ ಕ್ಯಾನ್ಸರ್ ಕೇಂದ್ರದ ಕಟ್ಟಡ ಕಾಮಗಾರಿಯ ಶಂಕು ಸ್ಥಾಪನೆಯನ್ನು ನಾಳೆ(ಡಿ.22) ಮುಖ್ಯ ಮಂತ್ರಿ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಅಂದು ಮಧ್ಯಾಹ್ನ 12.30ಕ್ಕೆ ಶಂಕು ಸ್ಥಾಪನಾ ಸಮಾರಂಭ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಹಾಗೂ ಸ್ಥಳೀಯ ಶಾಸಕರು, ಸಂಸದರು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಬಳಿಕ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಸೇರಿದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡದ ಉದ್ಘಾಟನಾ ಸಮಾರಂಭವೂ ನೆರವೇರಲಿದೆ ಎಂದು ಮಾಹಿತಿ ನೀಡಿದರು.

ಮೈಸೂರಿನಲ್ಲಿ ಕಿದ್ವಾಯಿ ಆಸ್ಪತ್ರೆ ಕೇಂದ್ರ ಸ್ಥಾಪನೆಯಾಗುತ್ತಿರುವುದು ತುಂಬಾ ಖುಷಿಪಡುವ ವಿಚಾರವಾಗಿದೆ. ಬೆಂಗಳೂರು ಕಿದ್ವಾಯಿ ಆಸ್ಪತ್ರೆಗೆ ಮೈಸೂರು ಭಾಗದಿಂದ ಪ್ರತಿ ವರ್ಷ ಸುಮಾರು 10 ಸಾವಿರ ರೋಗಿಗಳು ಬರುತ್ತಿದ್ದಾರೆ. ಹಾಗೆಯೇ ಖಾಸಗಿ ಆಸ್ಪತ್ರೆಗಳಿಗೂ ಸುಮಾರು 8 ಸಾವಿರ ಜನರು ಭೇಟಿ ನೀಡುತ್ತಿದ್ದಾರೆ. ಹಾಗಾಗಿ ಮೈಸೂರಿನಲ್ಲಿ ಕಿದ್ವಾಯಿ ಕ್ಯಾನ್ಸರ್ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಸಾಕಷ್ಟು ಪ್ರಯತ್ನ ಗಳನ್ನು ನಡೆಸಲಾಗಿತ್ತು. ಅದರಂತೆ ರಾಜ್ಯ ಸರ್ಕಾರದಿಂದ 50 ಕೋಟಿ ರೂ. ನೀಡಲಾಗಿದ್ದು, ಆರೋಗ್ಯ ಇಲಾಖೆಯ ಪಿಡಬ್ಲ್ಯೂಡಿ ಇಂಜಿನಿಯರ್‌ಗಳಿಗೆ ಕಟ್ಟಡ ನಿರ್ಮಾಣ ಜವಾಬ್ದಾರಿಯನ್ನು ವಹಿಸ ಲಾಗಿದೆ. ದಿನೇಶ್ ಕಾರ್ಲೆ ಎಂಬ ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದ್ದು, ಕಟ್ಟಡ ನಿರ್ಮಾಣಕ್ಕೆ 18 ತಿಂಗಳ ಕಾಲಾವಕಾಶ ನೀಡಲಾಗಿದೆ ಎಂದರು.

ಬೆಂಗಳೂರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ವಿ.ಲೋಕೇಶ್ ಮಾತನಾಡಿ, ಮೈಸೂರಿನಲ್ಲಿ ಕ್ಯಾನ್ಸರ್ ಸಂಸ್ಥೆ ಸ್ಥಾಪನೆ ಮಾಡಬೇಕು ಎಂಬುದು ಹಲವರ ಅಭಿಲಾಷೆಯಾಗಿತ್ತು. ತುಂಬಾ ವರ್ಷಗಳಿಂದ ಈ ಪ್ರಯತ್ನ ನಡೆದು, ಕೆಲಸ ಆರಂಭವಾಗುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಆರಂಭದಲ್ಲಿ 100 ಹಾಸಿಗೆಯುಳ್ಳ ಆಸ್ಪತ್ರೆಯನ್ನು ಸ್ಥಾಪಿಸ ಲಾಗುತ್ತಿದೆ. ಇಲ್ಲಿ ರೇಡಿಯೋಥೆರಪಿ, ಕಿಮೋಥೆರಪಿ, ಆಂಕೋ ಸರ್ಜರಿ ಸೇರಿ ದಂತೆ ಕ್ಯಾನ್ಸರ್ ರೋಗದ ಚಿಕಿತ್ಸೆಗೆ ಅವಶ್ಯ ವಿರುವ ಎಲ್ಲಾ ಬಗೆಯ ಸೌಕರ್ಯಗಳನ್ನು ಪೂರೈಸಲಾಗುವುದು. ಹಾಗೂ ತುರ್ತು ಸೇವೆ, ಲ್ಯಾಬ್ ಕೂಡ ಇರಲಿದೆ ಎಂದರು.

ಕಟ್ಟಡವನ್ನು ರೋಗಿಗಳಿಗೆ ಇಕ್ಕಟ್ಟಾಗದಂತೆ ಹಾಗೂ ರೋಗಿಗಳು ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಹೋಗಿ ಚಿಕಿತ್ಸೆ ಪಡೆಯಲು ಸಹಕಾರಿಯಾಗುವಂತೆ ವಿನ್ಯಾಸಗೊಳಿಸಲಾಗಿದೆ. ನೆಲ ಹಾಗೂ ಮೊದಲ ಮಹಡಿಯುಳ್ಳ ಕಟ್ಟಡ ಇದಾಗಿರ ಲಿದ್ದು, ಮುಂದಿನ ದಿನಗಳಲ್ಲಿ ಕಟ್ಟಡ ವಿಸ್ತರಣೆ(ಬಹುಮಹಡಿ)ಮಾಡಲು ಅನುಕೂಲವಾಗುವಂತೆ ನಿರ್ಮಾಣ ಮಾಡಲಾಗುವುದು. ಎಂಆರ್‌ಐ, ಸಿಟಿ ಸ್ಕ್ಯಾನ್, ಐಸಿಯು, ವಾರ್ಡ್‌ಗಳು ಪ್ರತ್ಯೇಕವಾಗಿ ರಲಿವೆ. ಕ್ಯಾನ್ಸರ್ ಚಿಕಿತ್ಸೆಗೆ ಬೇಕಾದ ಎಲ್ಲಾ ವೈದ್ಯಕೀಯ ಉಪಕರಣಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು ಎಂದು ಮಾಹಿತಿ ನೀಡಿದರು.

10 ಸಾವಿರ ಮಂದಿಗೆ ಕ್ಯಾನ್ಸ್: ಮೈಸೂರು ಭಾಗದಲ್ಲಿ ಪ್ರತಿವರ್ಷ ಹೊಸದಾಗಿ ಸುಮಾರು 10 ಸಾವಿರ ಮಂದಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಸುಮಾರು 29 ಸಾವಿರ ಹಳೇ ಕ್ಯಾನ್ಸರ್ ರೋಗಿಗಳಿದ್ದಾರೆ. ಒಟ್ಟು ಸುಮಾರು 40 ಸಾವಿರ ಕ್ಯಾನ್ಸರ್ ರೋಗಿಗಳು ಈ ಭಾಗದಲ್ಲಿದ್ದು, ಕಿದ್ವಾಯಿ ಕ್ಯಾನ್ಸರ್ ಕೇಂದ್ರ ಸ್ಥಾಪನೆಯಿಂದ ಸಾಕಷ್ಟು ಅನುಕೂಲವಾಗಲಿದೆ. ಕ್ಯಾನ್ಸರ್ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಚಿಕಿತ್ಸೆಗೆ ಬೇಕಾದ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ ಎಂದರು.

ವೈದ್ಯರ ಕೊರತೆಯಾಗುವುದಿಲ್ಲ: ಕಟ್ಟಡ ನಿರ್ಮಾಣವಾಗುತ್ತಿದ್ದಂತೆ ನುರಿತ ವೈದ್ಯರ ನೇಮಕಕ್ಕೆ ಸರ್ಕಾರಕ್ಕೆ ಮನವಿ ಸಲ್ಲಿಸಿ, ಅನುಮತಿ ಪಡೆದು ನೇಮಕ ಮಾಡಲಾಗು ವುದು. ಮೈಸೂರಿನಲ್ಲಿ ವೈದ್ಯರ ಕೊರತೆ ಯಾಗುವುದಿಲ್ಲ. ಅಲ್ಲದೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವುದರಿಂದ ವೈದ್ಯರ ಕೊರತೆಯಾಗದಂತೆ ನಿರ್ವಹಣೆ ಮಾಡಲಾಗುವುದು. ಅಲ್ಲದೆ ಬೆಂಗಳೂರು ಕಿದ್ವಾಯಿ ಆಸ್ಪತ್ರೆಯಿಂದಲೂ ಪೂರ್ಣ ಪ್ರಮಾಣದ ಸಹಕಾರ ಇರಲಿದೆ. ವೈದ್ಯಕೀಯ ಸಲಕರಣೆಗಳು ಸರ್ಕಾರದ ಅನುದಾನದ ಜೊತೆಗೆ ಸಿಎಸ್‌ಆರ್ ಫಂಡ್ ಬರುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಕ್ಯಾನ್ಸರ್ ಕಾಯಿಲೆಗೆ ಆರಂಭಿಕ ಹಂತದಲ್ಲಿಯೇ ಚಿಕಿತ್ಸೆ ಪಡೆದರೆ ಶೇ.80 ರಷ್ಟು, 2 ಮತ್ತು 3ನೇ ಹಂತದಲ್ಲಿದ್ದಾಗ ಶೇ.50–60 ರಷ್ಟು, ನಾಲ್ಕನೇ ಹಂತದಲ್ಲಿದಾಗ ಬರುವವರು ಶೇ.10–25 ರಷ್ಟು ಗುಣಮುಖರಾಗುತ್ತಾರೆ. ಹಾಗೆಯೇ ಕ್ಯಾನ್ಸರ್ ಕಾಯಿಲೆ ಕುರಿತು ವ್ಯಾಪಕವಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಶಿಬಿರಗಳನ್ನು ನಡೆಸಿ, ಕ್ಯಾನ್ಸರ್ ತಪಾಸಣೆ ಮಾಡಲಾಗುವುದು. 10–15 ವರ್ಷಕ್ಕೆ ಹೋಲಿಸಿಕೊಂಡರೆ ಸಾಕಷ್ಟು ಸುಧಾರಣೆಯಾಗಿದೆ ಎಂದು ಮಾಹಿತಿ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ. ದಾಕ್ಷಾಯಿಣಿ, ಹಿರಿಯ ವೈದ್ಯರಾದ ಹೆಚ್.ಎನ್. ದಿನೇಶ್, ಡಾ.ಶೇಖರ್ ಮತ್ತಿತ್ತರರಿದ್ದರು.

ಚಾಮರಾಜ ಕ್ಷೇತ್ರಕ್ಕೆ 300 ಕೋಟಿ ರೂ.ಅನುದಾನ...!

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಐದಾರು ತಿಂಗಳಷ್ಟೇ ಆಗಿದ್ದು, ಚಾಮರಾಜ ವಿಧಾನ ಸಭಾ ಕ್ಷೇತ್ರಕ್ಕೆ ಈಗಾಗಲೇ ಸುಮಾರು 300 ಕೋಟಿ ರೂ. ಅನುದಾನ ನೀಡಲಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮಹಾರಾಣಿ ಮಹಿಳಾ ವಿದ್ಯಾರ್ಥಿನಿಲಯಕ್ಕೆ 100 ಕೋಟಿ ರೂ., ಕಿದ್ವಾಯಿ ಕೇಂದ್ರಕ್ಕೆ 50 ಕೋಟಿ ರೂ., ಮಹಾರಾಣಿ ವಿಜ್ಞಾನ ಕಾಲೇಜು ನವೀಕರಣಕ್ಕೆ ಸುಮಾರು 70 ಕೋಟಿ ರೂ., ಕೆ.ಆರ್.ಆಸ್ಪತ್ರೆ ನವೀಕರಣಕ್ಕೆ ಹಾಗೂ ಇನ್ನಿತರೆ ಸೇರಿ ಸುಮಾರು 50 ಕೋಟಿ ರೂ., ಪಿಡಬ್ಲ್ಯೂಡಿ ಇಲಾಖೆಯಿಂದ 40 ಕೋಟಿ ರೂ ಹಾಗೂ ಎಸ್‌ಇಪಿಟಿಎಸ್‌ಪಿಯಿಂದ ಸುಮಾರು 50 ಕೋಟಿ ರೂ. ಅನುದಾನ ಕಲ್ಪಿಸಲಾಗಿದೆ. ಅನುದಾನಕ್ಕೆ ಯಾವುದೇ ತೊಂದರೆಯಾಗುತ್ತಿಲ್ಲ. ಅಭಿವೃದ್ಧಿ ವಿಚಾರದಲ್ಲಿ ಮುಖ್ಯಮಂತ್ರಿಗಳು ನೂರಕ್ಕೆ ನೂರರಷ್ಟು ಅನುದಾನ ಕೊಡಲಿದ್ದು, ಇದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಒಂದೂವರೆ ವರ್ಷದೊಳಗೆ ಅಂತಿಮ: ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾಡ್ಸ್‌ಡೌನ್ ಬಿಲ್ಡಿಂಗ್‌ಗೆ ಸಂಬಂಧಪಟ್ಟಂತೆ ಈಗಾಗಲೇ ಎರಡ್ಮೂರು ಬಾರಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿದೆ. ಮೈಸೂರು ನಗರದ ಬಗ್ಗೆ ನನಗಿಂತಲೂ ಮುಖ್ಯಮಂತ್ರಿಗಳಿಗೆ ತಿಳಿದಿದೆ. ಹೆಚ್ಚೆಂದರೆ ಒಂದೂವರೆ ವರ್ಷದಲ್ಲಿ ಎರಡೂ ಕಟ್ಟಡಗಳ ಕುರಿತ ಸಮಸ್ಯೆ ಬಗೆಹರಿಸಲಿದ್ದೇವೆ ಎಂದು ಭರವಸೆ ನೀಡಿದರು.

ಕಾರ್ಯಕರ್ತರಿಗೆ ಅವಕಾಶ: ನಿಗಮ ಮಂಡಳಿಗಳಿಗೆ ಅಧ್ಯಕ್ಷರ ಆಯ್ಕೆ ಸಂಬಂಧ ಹಿರಿಯ ಶಾಸಕರು ಹಾಗೂ ಹಿರಿಯ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಲಾಗುವುದು. ಈ ಸಂಬಂಧ ಈಗಾಗಲೇ ಪಟ್ಟಿ ತಯಾರಾಗಿದ್ದು, ಸದ್ಯದಲ್ಲಿಯೇ ತಿಳಿಸಲಾಗುತ್ತದೆ. ವೈಯಕ್ತಿಕವಾಗಿ ನಾನು ಕ್ಷೇತ್ರದ ಅಭಿವೃದ್ಧಿ ಮಾಡುವ ಶಾಸಕನಾಗಿರಲಷ್ಟೇ ಬಯಸುತ್ತೇನೆ ಹೊರತು ನನಗ್ಯಾವ ನಿಗಮ ಮಂಡಳಿ ಅಧ್ಯಕ್ಷ ಸ್ಥಾನವೂ ಬೇಡ ಎಂದರು.

ಮೂರನೇ ಪುಟದಿಂದ

ಸಸ್ಪೆಂಡ್ ಆದವರ ಸಂಖ್ಯೆ ಬರೋಬ್ಬರಿ 146

ಇದಕ್ಕೂ ಮುನ್ನ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು, ಸದನದಲ್ಲಿ ಪ್ರತಿಭಟನೆ ನಡೆಸದಂತೆ ಈ ಮೂವರು ಸಂಸದರಿಗೆ ಎಚ್ಚರಿಕೆ ನೀಡಿದ್ದರು.

ಇಂದು ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆ, ಹೆಚ್ಚಿನ ಸಂಖ್ಯೆಯ ಸಂಸದರನ್ನು ಅಮಾನತುಗೊಳಿಸಿದ್ದನ್ನು ವಿರೋಧಿಸಿ ಪ್ರತಿಪಕ್ಷ ಸಂಸದರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು ಮತ್ತು ಸಂಸತ್ ಭದ್ರತಾ ಲೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಇದುವರೆಗೆ ಲೋಕಸಭೆಯಿಂದ 100 ಸಂಸದರನ್ನು ಹಾಗೂ ರಾಜ್ಯಸಭೆಯಿಂದ 46 ಸಂಸದರನ್ನು ಅಮಾನತುಗೊಳಿಸಲಾಗಿದೆ.

ಆರು ಮಂದಿಗೆ ಕೊರೊನಾ ಸೋಂಕು

ಆತಂಕಪಡುವ ಅಗತ್ಯವಿಲ್ಲ. ಆದಾಗ್ಯೂ ಸಾಮುದಾಯಿಕವಾಗಿ ಜಾಗೃತಿ ಮೂಡಿಸುವುದರ ಜೊತೆಗೆ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಕಳೆದೆರಡು ದಿನಗಳಲ್ಲಿ ಸೋಂಕು ದೃಢಪಟ್ಟಿರುವ ಆರು ಜನರಲ್ಲಿ ಇಬ್ಬರು ಮಂಡ್ಯ ಜಿಲ್ಲೆ ವಿಳಾಸವುಳ್ಳವರಾಗಿದ್ದು, ನಾಲ್ವರು ಮೈಸೂರು ಜಿಲ್ಲೆಯವರಾಗಿದ್ದಾರೆ. ಎಲ್ಲರೂ ಆಸ್ಪತ್ರೆಯಲ್ಲಿದ್ದು, ಬೇರೆ ಬೇರೆ ರೋಗಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಸದ್ಯಕ್ಕೆ ಹೆಚ್ಚು ಕೇಸ್‌ಗಳಿಲ್ಲದ ಕಾರಣ ಸ್ಕ್ರೀನಿಂಗ್ ಮಾಡುತ್ತಿಲ್ಲ. ರೋಗ ಲಕ್ಷಣಗಳಿದ್ದು, ಆಸ್ಪತ್ರೆಗೆ ದಾಖಲಾಗಿದ್ದರೆ ಸಾರಿ ಪ್ರಕರಣಗಳೆಂದು ಪರೀಕ್ಷೆ ನಡೆಸಲಾಗುತ್ತಿದೆ. ಜೊತೆಗೆ ಪ್ರತಿ 20 ಐಎಲ್‌ಐ ಕೇಸ್‌ಗಳಲ್ಲಿ ಒಬ್ಬರಿಗೆ ಕೋವಿಡ್ ಟೆಸ್ಟಿಂಗ್ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇಂದೂ ಕೂಡ ಸಭೆ ನಡೆದಿದ್ದು, ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಹರಿಣಗಳ ನಾಡಲ್ಲಿ ಏಕದಿನ ಸರಣಿ ಗೆದ್ದ ಭಾರತ

• 2-1 ಅಂತರದಲ್ಲಿ ಸರಣಿ ಕೈ ವಶ • ಅರ್ಶದೀಪ್ ಸಿಂಗ್ ಸರಣಿ ಶ್ರೇಷ್ಠ



ಪಾರ್ಲ್, ಡಿ.21– ಸಂಜು ಸ್ಯಾಮ್ಸನ್ ಅವರ ಚೊಚ್ಚಲ ಶತಕದ ನೆರವಿನಿಂದ ಭಾರತ ದಕ್ಷಿಣ ಆಫ್ರಿಕಾ ವಿರುದ್ಧ 78 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯನ್ನು 2–1ರಿಂದ ತನ್ನದಾಗಿಸಿಕೊಂಡಿದೆ.

ಇಲ್ಲಿನ ಬೋಲ್ಯಾಂಡ್ ಪಾರ್ಕ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 296 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರಜತ್ ಪಾಟೀದಾರ್ ಹಾಗೂ ಸಾಯಿ ಸುದರ್ಶನ್ ಮೊದಲ ವಿಕೆಟ್ 34 ರನ್ ಜೊತೆಯಾಟವಾಡಿದರು. ಈ ವೇಳೆ 16 ಎಸೆತಗಳಲ್ಲಿ 22 ರನ್ ಗಳಿಸಿದ್ದ ಪಾಟೀದಾರ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ 10 ರನ್ ಗಳಿಸಿ ಸಾಯಿ ಸುದರ್ಶನ್ ಸಹ ನಿರ್ಗಮಿಸಿದರು. ನಂತರ ಬಂದ ನಾಯಕ ಕೆ.ಎಲ್. ರಾಹುಲ್ ಕೂಡ 21 ರನ್ ಗಳಿಸಿ ಬಹುಬೇಗ ಔಟಾದರು. ಈ ವೇಳೆ ಒಂದಾದ ಸಂಜು ಸ್ಯಾಮ್ಸನ್ ಹಾಗೂ ತಿಲಕ್ ವರ್ಮಾ 4ನೇ ವಿಕೆಟ್‌ಗೆ 116 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಬಿರುಸಿನ ಬ್ಯಾಟಿಂಗ್ ಮಾಡಿದ ಸ್ಯಾಮ್ಸನ್ 114 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ 108 ರನ್ ಗಳಿಸಿ ಔಟಾದರೇ, ತಿಲಕ್ ವರ್ಮಾ 52 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ವಾಷಿಂಗ್ ಟನ್ 14, ರಿಂಕು ಸಿಂಗ್ 38 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಬ್ಯೂರಾನ್ ಹೆಂಡ್ರಿಕ್ಸ್ 3, ನಾಂದ್ರೆ ಬರ್ಗರ್ 2, ವಿಯಾನ್ ಮುಲ್ಡರ್, ಕೇಶವ್ ಮಹಾರಾಜ್ ಹಾಗೂ ಲಿಜಾಡ್ ವಿಲಿಯಮ್ಸ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಭಾರತ ನೀಡಿದ 297 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 45.5 ಓವರ್‌ಗಳಲ್ಲಿ 218ರನ್‌ಗೆ ಆಲೌಟಾದರು. ತಂಡದಪರ ಇನ್ನಿಂಗ್ಸ್ ಆರಂಭಿಸಿದ ರೀಜಾ ಹೆಂಡ್ರಿಕ್ಸ್ ಹಾಗೂ ಟೋನಿ ಡಿ ಜೋರ್ಜಿ ಮೊದಲ ವಿಕೆಟ್‌ಗೆ 59 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ ರೀಜಾ ಹೆಂಡ್ರಿಕ್ಸ್ 19 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ 2 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಟೋನಿ ಡಿ ಜೋರ್ಜಿ 87 ಎಸೆತಗಳಲ್ಲಿ 3 ಸಿಕ್ಸರ್, 6 ಬೌಂಡರಿ ಒಳಗೊಂಡ 81 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಐಡೆನ್ ಮಾರ್ಕ್ರಮ್ 36, ಹೆನ್ರಿಚ್ ಕ್ಲಾಸೆನ್ 21, ಡೇವಿಡ್ ಮಿಲ್ಲರ್ 10, ಕೇಶವ್ ಮಹಾರಾಜ್ 14, ಬ್ಯೂರಾನ್ ಹೆಂಡ್ರಿಕ್ಸ್ 18ರನ್ ಗಳಿಸಿದರು. ಭಾರತದ ಪರ ಅರ್ಶದೀಪ್ ಸಿಂಗ್ 4, ಆವೇಶ್ ಖಾನ್, ವಾಷಿಂಗ್‌ಟನ್ ಸುಂದರ್ ತಲಾ 2, ಮುಖೇಶ್ ಕುಮಾರ್, ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸಂಜು ಸ್ಯಾಮ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜರಾದರೇ, ಅರ್ಶದೀಪ್ ಸಿಂಗ್ ಸರಣಿ ಶೇಷ್ಠ ಪ್ರಶಸ್ತಿ ಪಡೆದರು.

ಆತ್ಮೀಯ ಅಭಿನಂದನೆ...



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರತಿಯೊಂದು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಸಹಕರಿಸುತ್ತಾ ಬಂದಿರುವ ಕಾಂಗ್ರೆಸ್ ಮುಖಂಡರೂ ಆದ ಕುಂಬಾರಕೊಪ್ಪಲು ಗ್ರಾಮದ ಯುವ ಮುಖಂಡರಾದ ಚೇತನ್ ವಿಷಕಂಠೇಗೌಡ ಅವರನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೈಸೂರು ನಗರ ವಲಯದ ವತಿಯಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಜಯರಾಮ ಅವರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಕ್ಷೇತ್ರ ಯೋಜನಾಧಿಕಾರಿ ಶಕುಂತಲಾ, ಸಂಘಟನೆಯ ಶುಭಮಂಗಳ, ಸವಿತಾಶೆಟ್ಟಿ, ಯಶೋಧ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರೊಂದಿಗೆ ಸಂಸದ ಪ್ರತಾಪ್ ಸಿಂಹ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದರು. ಈ ವೇಳೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹಾಗೂ ಕೋಲಾರ ಸಂಸದ ಮುನಿಸ್ವಾಮಿ ಉಪಸ್ಥಿತರಿದ್ದರು.

ನಾಳೆ ನೈಸರ್ಗಿಕ ಕೃಷಿ, ಮಣ್ಣು ಸಂರಕ್ಷಣೆ ಕುರಿತು ಸಾಧಕರೊಂದಿಗೆ ಮಾತುಕತೆ



ಮೈಸೂರು, ಡಿ.21(ಜಿಎ)–ಪರಿಸರ ಬಳಗ, ಸಹಜ ಸಮೃದ್ಧ, ಉಳುಮೆ ಪ್ರತಿಷ್ಠಾನ ಸೇರಿದಂತೆ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಡಿ.23 ರ ಬೆಳಗ್ಗೆ 10 ರಿಂದ ಮಧ್ಯಾಹ್ನ 3.30 ರವರೆಗೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ನೈಸರ್ಗಿಕ ಕೃಷಿ ಮತ್ತು ಮಣ್ಣು ಸಂರಕ್ಷಣೆ ಕುರಿತು ಸಾಧಕರೊಂದಿಗೆ ಮಾತುಕತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ. ರಾಮಕೃಷ್ಣಪ್ಪ ಅವರು ಮಣ್ಣು ಮತ್ತು ಪರಿಸರ, ಬದುಕು ಮಣ್ಣಿನೊಂದಿಗೆ ವಿಷಯ ಕುರಿತು ಡಾ.ಎ.ಪಿ. ಚಂದ್ರಶೇಖರ್, ಕೃಷಿಯಲ್ಲಿ ಜೀವ ವಿಷಯ ಕುರಿತು ಶಿವನಂಜಯ್ಯ ಬಾಳೆಕಾಯಿಯವರು ಮಾತನಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲ ರೈತ ಮುಖಂಡರು, ಕೃಷಿಯಲ್ಲಿ ಆಸಕ್ತಿ ಇರುವವರು, ಕೃಷಿಕರನ್ನು ಆಹ್ವಾನಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಜಯ್‌ಕುಮಾರ್, ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ್, ಗಂಟಯ್ಯ ಹಾಗೂ ಭಾಗ್ಯ ಶಂಕರ್ ಉಪಸ್ಥಿತರಿದ್ದರು.

ಬ್ಯಾಂಕ್ ಖಾತೆ ಬ್ಲಾಕ್ ಆಗಿದೆ ಎಂದು ಮೆಸೇಜ್ ಕಳಿಸಿ 1.75 ಲಕ್ಷ ವಂಚನೆ

ಕುಶಾಲನಗರ, ಡಿ.21–ಬ್ಯಾಂಕ್ ಖಾತೆ ಬ್ಲಾಕ್ ಆಗಿದೆ ಎಂದು ಮೆಸೇಜ್ ರವಾನಿಸಿ, ಕೆವೈಸಿ ಪಡೆದು ವೃದ್ಧರಿಗೆ ಆನ್‌ಲೈನ್ ಮೂಲಕ 1.75 ಲಕ್ಷ ರೂ. ವಂಚಿಸಲಾಗಿದೆ.

ಕುಶಾಲನಗರ ತಾಲೂಕು ತೊರೆನೆರೂರು ಗ್ರಾಮದ ರೈತ ಟಿ.ವಿ.ಶಂಕರ ಮೂರ್ತಿ(70) ವಂಚನೆಗೊಳಗಾದವರಾಗಿದ್ದು, ನಿಮ್ಮ ಬ್ಯಾಂಕ್ ಅಕೌಂಟ್ ಬ್ಲಾಕ್ ಮಾಡಲಾಗಿದೆ ಎಂದು 7320926287 ಸಂಖ್ಯೆಯಿಂದ ಮೆಸೇಜ್ ಬಂದಿದ್ದು, ಹೆಚ್ಚಿನ ವಿವರಗಳಿಗಾಗಿ 9631268328 ಸಂಖ್ಯೆಯನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ. ಇದನ್ನು ನಂಬಿದ ಶಂಕರಮೂರ್ತಿಯವರು ಕರೆ ಮಾಡಿದಾಗ ಮಾತನಾಡಿದ ವಂಚಕ ತಾನು ಬೆಂಗಳೂರಿನ ಕೆನರಾ ಬ್ಯಾಂಕ್ ವಿಜಯನಗರ ಶಾಖೆಯ ಅಧಿಕಾರಿ ಅಕ್ಷತ್ ಭುವನ್ ಎಂದು ಪರಿಚಯಿಸಿಕೊಂಡು ಅವರ ಕೆವೈಸಿ ಪಡೆದಿದ್ದು, ಮೊಬೈಲ್‌ಗೆ ರವಾನೆಯಾಗಿದ್ದ ಓಟಿಪಿಯನ್ನೂ ಕೂಡ ಪಡೆದಿದ್ದಾನೆ. ಕೆಲವೇ ನಿಮಿಷಗಳಲ್ಲಿ ಅವರ ಖಾತೆಯಲ್ಲಿದ್ದ 1.75 ಲಕ್ಷ ರೂ. ಬೇರೊಂದು ಖಾತೆಗೆ ವರ್ಗಾವಣೆ ಆಗಿರುವ ಬಗ್ಗೆ ಮೊಬೈಲ್‌ಗೆ ಮೆಸೇಜ್ ಬಂದಿದೆ. ಈ ಸಂಬಂಧ ಶಂಕರಮೂರ್ತಿ ಕುಶಾಲನಗರ ಗ್ರಾಮಾಂತರ ಠಾಣೆಗೆ ದೂರು ಸಲ್ಲಿಸಿದ್ದಾರೆ.



ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡರ ಹುಟ್ಟುಹಬ್ಬದ ಪ್ರಯುಕ್ತ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಶುಭ ಕೋರಿದರು. ಈ ವೇಳೆ ಎಚ್.ಡಿ.ಕೋಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಆನಂದ್, ಕನ್ನಡ ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರಕಾಶ್, ಮುಖಂಡರಾದ ಕಾಂಜಿ ಗೌಡ, ಪ್ರಸನ್ನ, ಮಾದೇವ, ಇನ್ನಿತರರು ಉಪಸ್ಥಿತರಿದ್ದರು.

ಕೋವಿಡ್ ಹರಡದಂತೆ ತಡೆಯಲು, ಸೋಂಕಿತರಿಗೆ ಚಿಕಿತ್ಸೆ ನೀಡಲು

ತಾಲೂಕು ಆಸ್ಪತ್ರೆಗಳಲ್ಲಿ 5 ಬೆಡ್, 2 ವೆಂಟಿಲೇಟರ್ ವ್ಯವಸ್ಥೆಗೆ ಸೂಚನೆ



ಮೈಸೂರು,ಡಿ.21(ಪಿಎಂ)–ಕೋವಿಡ್ ಹೊಸ ತಳಿ ಜೆಎನ್ 1 ಹರಡದಂತೆ ತಡೆಗಟ್ಟಲು ಮತ್ತು ಸೋಂಕಿತರಿಗೆ ಸೂಕ್ತ ಚಿಕಿತ್ಸೆ ನೀಡಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ 5 ಬೆಡ್‌ಗಳು ಮತ್ತು ಎರಡು ಆಕ್ಸಿಜನ್ ವೆಂಟಿಲೇಟರ್‌ಗಳನ್ನು ಸಿದ್ಧವಾಗಿ ಇಟ್ಟುಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರಿನ ಬಾಬು ಜಗಜೀವನ್ ರಾಂ ಭವನದಲ್ಲಿ ಕೋವಿಡ್ ಹೊಸ ತಳಿ ಸೋಂಕಿನ ನಿರ್ವಹಣೆ, ಮುನ್ನೆಚ್ಚರಿಕೆ ಕ್ರಮಗಳ ಕುರಿತು ಗುರುವಾರ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೋವಿಡ್ ಜೆಎನ್ 1 ಹೊಸ ತಳಿ ಹರಡುತ್ತಿದ್ದು, ಜನರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕು. 60 ವರ್ಷ ಮೇಲ್ಪಟ್ಟವರು, ಹೃದಯ ಸಂಬಂಧಿ ಕಾಯಿಲೆ ಇರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕಿದ್ದು, ಈ ಸಂಬಂಧ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.

ಕೋವಿಡ್ ಲಕ್ಷಣ ಇರುವವರು ಟೆಸ್ಟ್ ಮಾಡಿಸಬೇಕೆಂಬ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಕೇರಳ ಮತ್ತು ತಮಿಳುನಾಡು ಚೆಕ್ ಪೋಸ್ಟ್‌ಗಳಲ್ಲಿ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಕೋವಿಡ್ ಲಕ್ಷಣಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ಫಲಕ ಅಳವಡಿಸಲು ಅಧಿಕಾರಿಗಳು ಕ್ರಮ ವಹಿಸಬೇಕೆಂದು ನಿರ್ದೇಶನ ನೀಡಿದರು.

ಕೋವಿಡ್ ಹೆಚ್ಚಾದಾಗ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಣಕು ಪ್ರದರ್ಶನ ಮಾಡಬೇಕು. ಮುಂದಿನ ಒಂದು ವಾರದ ನಂತರ ದಿನಕ್ಕೆ ಕನಿಷ್ಠ ಸಾವಿರ ಕೋವಿಡ್ ಟೆಸ್ಟ್ ಮಾಡಲು ಯೋಜನೆ ರೂಪಿಸಿಕೊಳ್ಳಬೇಕು. ಲಿಕ್ವಿಡ್ ಮೆಡಿಕಲ್ ಆಕ್ಸಿಜನ್, ಜಂಬೋ ಸಿಲಿಂಡರ್‌ಗಳ ಕೊರತೆಯಾಗದಂತೆ ನಿಗಾ ವಹಿಸಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಂತ್ರಣ ಕುರಿತು ಜಾಗೃತಿ ಮೂಡಿಸುವ ಫಲಕಗಳನ್ನು ಪ್ರದರ್ಶಿಸಲಾಗಿದೆ ಎಂದು ಮಾಹಿತಿ ನೀಡಿದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಂಗೀತ ವಿವಿಯಲ್ಲಿ ಸಮರಕಲೆ ತರಬೇತಿಗೆ ಚಾಲನೆ

•ಸಮರ ಕಲೆಯಿಂದ ಸಮಾಜದ ಮನ್ನಣೆ ಜೊತೆಗೆ ಉದ್ಯೋಗಾವಕಾಶವೂ ಲಭ್ಯ •ಸಂಗೀತ ನಿರ್ದೇಶಕ ಡಾ. ಹಂಸಲೇಖ ಅಭಿಮತ

ಮೈಸೂರು,ಡಿ.21(ಎಂಟಿವೈ)– ದೇಸಿ ಕಲೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಸಂಗೀತ ವಿಶ್ವವಿದ್ಯಾಲಯದಲ್ಲಿ ಸಮರ ಕಲೆಗಳ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್ ಆರಂಭಿಸಿರುವುದು ಶ್ಲಾಘನೀಯ ಎಂದು ಸಂಗೀತ ನಿರ್ದೇಶಕ ಡಾ. ಹಂಸಲೇಖ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಗುರುವಾರ ಸಮರ ಕಲೆಗಳ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ಕೋರ್ಸ್ ಆರಂಭದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಮರಕಲೆ ತರಬೇತಿ ಉದ್ಘಾಟಿಸಿ ಮಾತಾಡಿದ ಅವರು, ರಾಜ್ಯದಲ್ಲಿ ಸಮರ ಕಲೆ ಉಳಿವಿಗಾಗಿ ಸಾಹಸ ಕಲಾವಿದ ಹಾಸನ ರಘು ಶ್ರಮಿಸುತ್ತಿದ್ದಾರೆ. ಆ ಕಾರಣದಿಂದಲೇ ಇಂದು ಸಮರ ಕಲೆಗಳನ್ನು ವಿಶ್ವವಿದ್ಯಾಲಯಗಳು ಗುರುತಿಸಲು ಸಾಧ್ಯವಾಗಿದೆ. ದೇಸಿ ಕಲೆಗಳನ್ನು ಉಳಿಸಿ, ಬೆಳೆಸುವುದರೊಂದಿಗೆ ಮುಖ್ಯವಾಹಿನಿಗೆ ತರುವ ಅಗತ್ಯವಿದೆ ಎಂದರು.

ಸಮರ ಕಲೆ ಜೀವನೋತ್ಸಾಹ ಬೆಳೆಸಿಕೊಳ್ಳಲು ಸಹಕಾರಿಯಾಗಿದ್ದು, ಇದರಿಂದ ಆರೋಗ್ಯ ವೃದ್ಧಿಸುತ್ತವೆ. ಸಮರ ಕಲೆ ಕಲಿತವರಿಗೆ ಸಮಾಜದಲ್ಲಿ ಮನ್ನಣೆಯೊಂದಿಗೆ ಉದ್ಯೋಗಾವಕಾಶ ದೊರೆಯಲಿದೆ. ಶಾಲೆಗಳಲ್ಲಿ ಸಮರ ಕಲೆಗಳನ್ನು ಕಲಿಸಲಾಗುತ್ತಿದ್ದು, ಅಂತಹ ಶಾಲೆಗಳಿಗೆ ಸಮರ ಕಲೆಯಲ್ಲಿ ತರಬೇತಿ ಪಡೆದ ಶಿಕ್ಷಕರ ಅವಶ್ಯಕತೆ ಇದೆ. ಸಂಗೀತ ವಿವಿಯಲ್ಲಿ ಸಮರ ಕಲೆಯಲ್ಲಿ ಸರ್ಟಿಫಿಕೇಟ್ ಅಥವಾ ಡಿಪ್ಲೊಮಾ ಕೋರ್ಸ್ ಪಡೆದವರು ಮುಂದಿನ ದಿನಗಳಲ್ಲಿ ಶಾಲೆಗಳಲ್ಲಿ ಸಮರ ಕಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸುವ ಅವಕಾಶ ದೊರೆಯುತ್ತದೆ ಎಂದರು.



ಇದೇ ವೇಳೆ ಸಾಹಸ ಕಲಾವಿದ ಹಾಸನ ರಘು ಮಾತನಾಡಿ, ವಿಶ್ವ ವಿದ್ಯಾಲಯಗಳಲ್ಲಿ ಯಾವುದೇ ಸರ್ಟಿಫಿಕೇಟ್ ಕೋರ್ಸ್ ಅಥವಾ ಡಿಪ್ಲೊಮಾ ಕೋರ್ಸ್‌ಗೆ ಸೇರಲು ನಿರ್ದಿಷ್ಟವಾದ ವಿದ್ಯಾಭ್ಯಾಸ ಇರಬೇಕು. ಆದರೆ, ನಮ್ಮ ಮನವಿಯ ಮೇರೆಗೆ ಸಮರ ಕಲೆಯನ್ನು ಕಲಿತವರಿಗೆ ಯಾವುದೇ ವಿದ್ಯಾಭ್ಯಾಸ ಇಲ್ಲದೆ ಇದ್ದರೂ ಅವರ ಅನುಭವದ ಆಧಾರದ ಮೇಲೆ ಸರ್ಟಿಫಿಕೇಟ್ ಕೋರ್ಸ್ ನೀಡಲು ಸಂಗೀತ ವಿವಿ ಮುಂದಾಗಿರುವುದು ಸಂತಸ ತಂದಿದೆ. ಕನ್ನಡ ಸಂಸ್ಕೃತಿ ಇಲಾಖೆ ನೀಡುವ ಮಾಸಾಶನ ಪಡೆಯಲು ಕಲಾವಿದರಿಗೆ ಸರ್ಟಿಫಿಕೇಟ್ ಅವಶ್ಯಕತೆ ಇದ್ದು, ಸಂಗೀತ ವಿವಿ ನೀಡುವ ಸರ್ಟಿಫಿಕೇಟ್ ಕಲಾವಿದರಿಗೆ ನೆರವಾಗಲಿದೆ. ವಿದೇಶಗಳ ವಿವಿಗಳು ಸಮರ ಕಲೆಗಳಿಗೆ ಸರ್ಟಿಫಿಕೇಟ್ ನೀಡುತ್ತಿವೆ. ಆದರೆ, ನಮ್ಮ ದೇಶದ ವಿಶ್ವ ವಿದ್ಯಾಲಯಗಳು ಈ ಬಗ್ಗೆ ಇನ್ನು ಗಮನ ನೀಡಿಲ್ಲ ಸಂಗೀತ ವಿಶ್ವವಿದ್ಯಾಲಯ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿರುವುದು ಸಂತಸ ತಂದಿದೆ. ಸಾಕಷ್ಟು ಸಮರ ಕಲೆಯ ಶಿಕ್ಷಕರು ಸಿನಿಮಾ ಹಾಗೂ ಶಾಲೆಗಳಲ್ಲಿ ಸಮರ ಕಲೆಯ ತರಬೇತಿ ನೀಡುತ್ತಿದ್ದಾರೆ. ಅವರಿಗೆ ಒಂದು ಸರ್ಟಿಫಿಕೇಟ್ ದೊರೆತರೆ ಮತ್ತಷ್ಟು ಅನುಕೂಲವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಬಿ. ಸುರೇಶ್ ಮಾತನಾಡಿದರು. ಇದೇ ವೇಳೆ ಬಸವರಾಜ್ ಕುದುರಿ ಮತ್ತು ತಂಡ ಮಲ್ಲಗಂಬ ಪ್ರದರ್ಶಿಸಿತು. ಕರ್ನಾಟಕ ಸ್ಪೋರ್ಟ್ಸ್ ಸಿಲಂಬಮ್ ಅಸೋಸಿಯೇಷನ್ ತಂಡದಿಂದ ದೊಣ್ಣೆ ವರಸೆ, ಕ್ಯಾತಮಾರನಹಳ್ಳಿ ದೊಡ್ಡ ಗರಡಿಯ ಪೈಲ್ವಾನರಿಂದ ಕುಸ್ತಿ, ಓಶೊಕಾಯ್ ಮಾರ್ಷಲ್ ಆರ್ಟ್ಸ್ ಕಾಲೇಜು ತಂಡದಿಂದ ಸಮರಕಲೆ ಪ್ರದರ್ಶಿಸಲಾಯಿತು. ವೇದಿಕೆಯಲ್ಲಿ ಲೇಖಕ ಪ್ರೊ.ಕೆ ವೈ.ನಾರಾಯಣಸ್ವಾಮಿ, ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ. ಬೆಟ್ಟಕೋಟೆ, ಕುಲಸಚಿವ ಎಂ.ಆರ್.ರಾಜೇಶ್, ಪರೀಕ್ಷಾಂಗ ಕುಲಸಚಿವ ಪ್ರೊ.ಮಹದೇವನ್, ಭಾರತೀಯ ಶೈಲಿ ಕರ್ನಾಟಕ ಕುಸ್ತಿ ಸಂಘದ ಅಧ್ಯಕ್ಷ ಕೆ.ಎನ್.ವಿಜಯಕುಮಾರ್, ಪೈಲ್ವಾನ್ ಚಿನ್ನ, ಕರ್ನಾಟಕ ಸಾಹಸ ಕಲಾ ಅಕಾಡೆಮಿ ಅಧ್ಯಕ್ಷ ಎಂ.ಅಲ್ತಾಫ್ ಪಾಷಾ, ಪ್ರಧಾನ ಕಾರ್ಯದರ್ಶಿ ಶಿವಮೊಗ್ಗ ವಿನೋದ್ ಹಾಗೂ ಇತರರು ಇದ್ದರು.

> ಪಾದದಿಂದ ಮೆದುಳಿನವರೆಗೆ ರಕ್ತ ಸಂಚಾರ ಸರಾಗವಾಗಿ ಪೂರೈಕೆಯಾಗಬೇಕಾದರೆ ಭುಜ ಪ್ರಮುಖ ಜಂಕ್ಷನ್‌ನಂತೆ ಕಾರ್ಯನಿರ್ವಹಿಸುತ್ತದೆ. ಭುಜ ಹೆಚ್ಚು ಚಟುವಟಿಕೆಯಿಂದ ಇದ್ದರೆ ಮೆದುಳಿಗೆ ರಕ್ತ ಸರಾಗವಾಗಿ ಪೂರೈಕೆಯಾಗುತ್ತದೆ. ಸಮರ ಕಲೆಗಳಲ್ಲಿ ಭುಜ ಹಾಗೂ ತೋಳು ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತದೆ. ಪ್ರತಿಯೊಬ್ಬರೂ ಸಮರ ಕಲೆಯನ್ನು ಕಲಿತು ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕು.
>
> - ಡಾ. ಹಂಸಲೇಖ, ಸಂಗೀತ ನಿರ್ದೇಶಕ

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ರದ್ದುಪಡಿಸುವಂತೆ ಆಗ್ರಹ



ಮೈಸೂರು,ಡಿ.21(ಎಂಟಿವೈ)–ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಮರಣ ಶಾಸನವಾಗಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು ರದ್ದು ಮಾಡುವಂತೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಅರಮನೆಯ ಮುಂಭಾಗದಲ್ಲಿರುವ ಡಾ.ರಾಜ್‌ಕುಮಾರ್ ಉದ್ಯಾನದ ಬಳಿ ಗುರುವಾರ ಪ್ರತಿಭಟನೆ ನಡೆಸಿ ಕನ್ನಡ ವೇದಿಕೆ ಕಾರ್ಯಕರ್ತರು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಹೋರಾಟದಲ್ಲಿ ಈವರೆಗೂ ರಾಜ್ಯಕ್ಕೆ ನ್ಯಾಯ ಸಿಕ್ಕಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಎರಡು ರಾಜ್ಯಗಳ ಕಾವೇರಿ ಸಮಸ್ಯೆ ನಿಭಾಯಿಸಲು ಕಾವೇರಿ ನೀರಾವರಿ ಸಮಿತಿ ರಚನೆ ಮಾಡಿ, ಕರ್ನಾಟಕಕ್ಕೆ ಸುಣ್ಣ ತಮಿಳುನಾಡಿಗೆ ಬೆಣ್ಣೆ ಎಂಬ ತಂತ್ರ ಅನುಸರಿಸಲಾಯಿತು. ನಂತರದ ದಿನಗಳಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಇದನ್ನು ಮಾರ್ಪಾಡು ಮಾಡಿ ಕಾವೇರಿ ನೀರು ನಿರ್ವಹಣಾ ಮಂಡಳಿ ಎಂದು ಮರು ನಾಮಕರಣ ಮಾಡಿದವು. ಇದರಿಂದ ರಾಜ್ಯಕ್ಕೆ ಸ್ವಲ್ಪ ಮಟ್ಟಿಗೆ ನೆಮ್ಮದಿ ಸಿಗಬಹುದೆಂದು ನಿರೀಕ್ಷೆ ಇತ್ತು. ಆದರೆ, ಅದು ಹುಸಿಯಾಗಿದೆ. ಈಗಲೂ ಕೇಂದ್ರ ಸರ್ಕಾರವು ಯಾವುದೇ ಸಮಿತಿ ರಚನೆ ಮಾಡಿದರೂ ಅದು ತಮಿಳುನಾಡಿನ ಪರವಾಗಿ ಇರುತ್ತದೆಯೇ ಹೊರತು ರಾಜ್ಯದ ಪರವಾಗಿ ಇರಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ತಮಿಳುನಾಡಿನಲ್ಲಿ ಸಾಕಷ್ಟು ಮಳೆಯಾಗಿದೆ. ಆದರೂ, ತಮಿಳುನಾಡಿಗೆ ನೀರು ಬಿಡಿ ಎಂದು ಆದೇಶ ನೀಡಿರುವುದು ಎಷ್ಟರ ಮಟ್ಟಿಗೆ ಸರಿ?. ಕಾವೇರಿ ನೀರು ತಮಿಳುನಾಡಿನಲ್ಲಿ ಹೆಚ್ಚುವರಿಯಾಗಿ ಹರಿದು ಸಮುದ್ರ ಸೇರಿದರೂ ರಾಜ್ಯಕ್ಕೆ ನೀರು ಸಿಗಬಾರದು ಎಂಬ ದುರುದ್ದೇಶ ಇದರಲ್ಲಿ ಅಡಗಿಲ್ಲವೇ? ಎಂದು ಪ್ರಶ್ನಿಸಿದರು.

ರಾಜ್ಯದ ಪ್ರಸ್ತುತ ನೀರಿನ ಪರಿಸ್ಥಿತಿ ನೋಡಿದರೆ ಮುಂದಿನ ದಿನಗಳಲ್ಲಿ ಜನ, ಜಾನುವಾರುಗಳಿಗೆ ನೀರಿಲ್ಲದ ಸ್ಥಿತಿ ನಿರ್ಮಾಣವಾಗಲಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾವೇರಿ ನಿರ್ವಹಣಾ ಮಂಡಳಿ ತಮಿಳುನಾಡಿಗೆ ನೀರು ಬಿಡಿ ಎಂದು ಆದೇಶ ಮಾಡಿರುವುದು ಸರಿಯಲ್ಲ. ನಿದ್ರಾವಸ್ಥೆಯಲ್ಲಿರುವ ರಾಜ್ಯದ ಸಂಸದರು ಸದನದಲ್ಲಿ ಈ ಕುರಿತು ಪ್ರಶ್ನಿಸಿ ಎದೆಗಾರಿಕೆ ತೋರಬೇಕು. ಕಾವೇರಿ ನಿರ್ವಹಣಾ ಮಂಡಳಿಯನ್ನು ರದ್ದು ಮಾಡುವಂತೆ ಮುಖ್ಯಮಂತ್ರಿಯವರು ಪ್ರಧಾನಿ ಬಳಿ ಒತ್ತಾಯಿಸಬೇಕು. ನ್ಯಾಯಬದ್ಧವಾಗಿ ತೀರ್ಮಾನ ಮಾಡುವಂತಹ ಸಮಿತಿ ರಚನೆ ಮಾಡುವಂತೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್ ಬಾಬು, ಗೋಪಿ, ಅರವಿಂದ್, ಕಾವೇರಮ್ಮ, ಮಾಲಿನಿ, ಪುಷ್ಪಲತಾ, ಹರೀಶ್ ಇತರರು ಇದ್ದರು.



ಇತ್ತೀಚೆಗೆ ಬೆಳಗಾವಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಬೆಲವತ್ತ ಶಿವಕುಮಾರ್ ಅವರು ತಮಗೆ ನಿಗಮ–ಮಂಡಳಿಯಲ್ಲಿ ಸ್ಥಾನ ಕಲ್ಪಿಸುವಂತೆ ಮನವಿ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಸಾಕಮ್ಮ ಇನ್ನಿತರರಿದ್ದರು.

ನಾಳೆ ತಿರು ಕಲ್ಯಾಣೋತ್ಸವ

ಮೈಸೂರು, ಡಿ.21–ಮೈಸೂರಿನ ಎನ್.ಆರ್.ಮೊಹಲ್ಲಾದ ಅಂಬಾ ಭವಾನಿ ದೇವಸ್ಥಾನದಲ್ಲಿ ಡಿ.23ರಂದು ವೈಕುಂಠ ಏಕಾದಶಿ ಪ್ರಯುಕ್ತ ಶ್ರೀ ಶ್ರೀನಿವಾಸ ಸ್ವಾಮಿಗೆ ತಿರು ಕಲ್ಯಾಣೋತ್ಸವವನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 10 ಗಂಟೆಗೆ ಕಲ್ಯಾಣೋತ್ಸವ ಹಾಗೂ ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಜರುಗಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ಕೋರಿದೆ.

ಬೈಕ್‌ಗೆ ಬೊಲೆರೋ ಡಿಕ್ಕಿ: ಮಗ ಸಾವು, ತಾಯಿಗೆ ಗಾಯ

ಬೆಟ್ಟದಪುರ, ಡಿ.21–ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಪಿರಿಯಾಪಟ್ಟಣ ತಾಲೂಕು ಕಿತ್ತೂರು–ಬೆಟ್ಟದಪುರ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ಪಿರಿಯಾಪಟ್ಟಣ ತಾಲೂಕು ವಡ್ಡರಹಳ್ಳಿ ಗ್ರಾಮದ ಹೆಚ್.ಮಹದೇವ(42) ಅಪಘಾತದಲ್ಲಿ ಸಾವನ್ನಪ್ಪಿದ್ದು, ಹಿಂಬದಿ ಸವಾರರಾಗಿದ್ದ ಇವರ ತಾಯಿ ಮಹದೇವಮ್ಮ(62) ಗಾಯಗೊಂಡಿದ್ದಾರೆ.

ಮಹದೇವ ಅವರು ಡಿ.20ರಂದು ಕಿತ್ತೂರಿಗೆ ಹೋಗಿದ್ದು, ಹೀರೋ ಹೋಂಡಾ ಫ್ಯಾಷನ್ ಪ್ರೊ ಬೈಕ್‌ನಲ್ಲಿ (ಕೆಎ 45 ಜೆ 7956) ಮಧ್ಯಾಹ್ನ 12.30ರ ಸಮಯದಲ್ಲಿ ಗ್ರಾಮಕ್ಕೆ ಹಿಂತಿರುತ್ತಿದ್ದ ವೇಳೆ ಎದುರಿನಿಂದ ಬಂದ ಪಿರಿಯಾಪಟ್ಟಣ ಟೌನ್‌ನ ರಜಾಕ್ ಎಂಬಾತ ಚಾಲನೆ ಮಾಡುತ್ತಿದ್ದ ಮಹೇಂದ್ರ ಬೊಲೆರೊ ಗೂಡ್ಸ್ ವಾಹನ (ಕೆಎ 45 ಎ 3099) ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮಹದೇವ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಗೊಂಡಿದ್ದ ಅವರ ತಾಯಿ ಮಹದೇವಮ್ಮ ಅವರನ್ನು ಅವರು ಕೆ.ಆರ್.ನಗರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆಯಿಂದ ಸಂಕೇತಿ ಬರಹಗಾರರ ರಾಜ್ಯ ಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನ



ಮೈಸೂರು, ಡಿ.21(ಜಿಎ)–ವಿಶ್ವ ಸಂಕೇತಿ ಭಾರತಿ ಟ್ರಸ್ಟ್ ವತಿಯಿಂದ ಡಿ.23 ಮತ್ತು 24 ರಂದು ನಗರದ ಜಯನಗರ ಎರಡನೇ ರಸ್ತೆಯಲ್ಲಿನ ನಾಚಾರಮ್ಮ ಭವನದಲ್ಲಿ ಸಂಕೇತಿ ಬರಹಗಾರರ ರಾಜ್ಯ ಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನ ಏರ್ಪಡಿಸಲಾಗಿದೆ ಟ್ರಸ್ಟ್ ಅಧ್ಯಕ್ಷ ಎಂ.ಬಿ. ಭಾನುಪ್ರಕಾಶ್ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಕೌಶಿಕ ಸಂಕೇತಿ ಸಂಘ, ಬೆಟ್ಟದಪುರ ಸಂಕೇತಿ ಸಂಘ ಮೊದಲಾದವುಗಳ ಆಶ್ರಯದಲ್ಲಿ ಈ ಸಮ್ಮೇಳನ ನಡೆಯಲಿದ್ದು, ಸಮ್ಮೇಳನವನ್ನು ಮಧ್ಯಾಹ್ನ 3ಕ್ಕೆ ಪದ್ಮಭೂಷಣ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಉದ್ಘಾಟಿಸಲಿದ್ದಾರೆ. ಹಿರಿಯ ವಿದ್ವಾಂಸರಾದ ಡಾ.ಕೆ. ಅನಂತರಾಮು ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಆಗಮಿಸುತ್ತಾರೆ ಎಂದರು.


ಸಮಾರೋಪ ಸಮಾರಂಭವನ್ನು ಡಿ. 24 ರ ಮಧ್ಯಾಹ್ನ 12.45ಕ್ಕೆ ಆಯೋಜಿಸಿದ್ದು, ಡಾ.ಬಿ.ಎಸ್. ಪ್ರಣತಾರ್ಥಿ ಹರನ್ ಸಮಾರೋಪ ನುಡಿ ಆಡಲಿದ್ದಾರೆ. ಎರಡು ದಿನಗಳ ಸಮ್ಮೇಳನದಲ್ಲಿ ವಿವಿಧ ವಿಚಾರಗೋಷ್ಠಿ ಮತ್ತು ಕೃತಿ ಲೋಕಾರ್ಪಣೆಯಾಗಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಆರ್.ಎನ್. ಪದ್ಮನಾಭ್, ಸರೋಜ, ಶಾಸಕ ಟಿ.ಎಸ್. ಶ್ರೀವತ್ಸ, ನಾಗರಾಜ್, ಸಂಸ್ಕೃತಿ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಮೈಸೂರಲ್ಲಿ ಶ್ರೀರಾಮ ಜನ್ಮಭೂಮಿಯ ಪವಿತ್ರ ಮಂತ್ರಾಕ್ಷತೆ ವಿತರಣೆ

•ಮಂತ್ರಾಕ್ಷತೆ ಸ್ವೀಕರಿಸಿದ 15 ತಂಡಗಳು •ಜ.1ರಿಂದ 15ರವರೆಗೆ ಮೈಸೂರು ನಗರದಲ್ಲಿ ಮನೆ ಮನೆಗೆ ವಿತರಣೆ

ಮೈಸೂರು,ಡಿ.21(ಪಿಎಂ)– ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ವತಿಯಿಂದ ವಿವಿಧ ಹಿಂದೂಪರ ಸಂಘಟನೆಗಳ ಸಹಯೋಗದಲ್ಲಿ ಗುರುವಾರ ಅಯೋಧ್ಯಾ ಶ್ರೀರಾಮ ಜನ್ಮಭೂಮಿಯಿಂದ ಬಂದಿರುವ ಪವಿತ್ರ ಮಂತ್ರಾಕ್ಷತೆಯ ವಿತರಣೆ ಕಾರ್ಯಕ್ರಮ ನಡೆಯಿತು.

ಮೈಸೂರು ಅರಮನೆ ಉತ್ತರ ದ್ವಾರದ ಶ್ರೀಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮೈಸೂರು ನಗರದ 15 ತಂಡಗಳಿಗೆ ಮಂತ್ರಾಕ್ಷತೆ ಮತ್ತು ಶ್ರೀರಾಮನ ಫೋಟೋಗಳನ್ನು ವಿತರಣೆ ಮಾಡಲಾಯಿತು. ಮೈಸೂರು ನಗರದ ಎಲ್ಲಾ ಪ್ರದೇಶಗಳೂ ಒಳಗೊಂಡಂತೆ 15 ತಂಡಗಳನ್ನು ರಚಿಸಿಕೊಂಡಿದ್ದು, ಈ ಎಲ್ಲಾ ತಂಡಗಳಿಗೆ ಇಂದು ಪವಿತ್ರ ಮಂತ್ರಾಕ್ಷತೆ ಹಾಗೂ ಶ್ರೀರಾಮನ ಫೋಟೋಗಳನ್ನು ವಿತರಣೆ ಮಾಡಲಾಯಿತು.



ಮೈಸೂರು ಅರಮನೆ ಉತ್ತರ ದ್ವಾರದ ಶ್ರೀಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 15 ತಂಡಗಳಿಗೆ ಅಯೋಧ್ಯಾ ಶ್ರೀರಾಮ ಜನ್ಮಭೂಮಿಯ ಪವಿತ್ರ ಮಂತ್ರಾಕ್ಷತೆ ವಿತರಣೆ ಮಾಡಲಾಯಿತು.

ವಿದ್ಯಾರಣ್ಯಪುರಂ, ಜೆಪಿ ನಗರ, ಜಯಪುರ, ಕುವೆಂಪುನಗರ, ಗಣೇಶನಗರ, ಸರಸ್ವತಿಪುರಂ, ವಿಜಯನಗರ, ಇಲವಾಲ, ಗೋಕುಲಂ, ತಿಲಕ್‌ನಗರ, ರಾಜೇಂದ್ರ ನಗರ, ಕ್ಯಾತಮಾರನಹಳ್ಳಿ, ಸಿದ್ಧಾರ್ಥ ನಗರ, ವರುಣ, ಲಕ್ಷ್ಮೀಪುರಂ ತಂಡಗಳಿಗೆ ಮಂತ್ರಾಕ್ಷತೆ ಮತ್ತು ರಾಮನ ಫೋಟೋಗಳನ್ನು ವಿತರಣೆ ಮಾಡಲಾಯಿತು. ಸದರಿ ತಂಡಗಳು ತಮ್ಮ ಪ್ರದೇಶದ ಪ್ರಮುಖ ದೇವಸ್ಥಾನದಲ್ಲಿ ಮಂತ್ರಾಕ್ಷತೆ ಶೇಖರಣೆ ಮಾಡಿಟ್ಟುಕೊಳ್ಳಲಿದ್ದು, ಜ.1ರಿಂದ 15ರವರೆಗೆ ತಮ್ಮ ವ್ಯಾಪ್ತಿಯ ಪ್ರದೇಶಗಳಲ್ಲಿ ಮನೆ ಮನೆಗೆ ವಿತರಣೆಯ ಅಭಿಯಾನ ನಡೆಸಲಿವೆ.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ವಿಶ್ವ ಹಿಂದೂ ಪರಿಷದ್ (ವಿಹೆಚ್‌ಪಿ) ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಜಗನ್ನಾಥಶಾಸ್ತ್ರಿ, 2024ರ ಜ.22ರಂದು ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಯಲ್ಲಿ ಶ್ರೀರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಆಗುತ್ತಿದ್ದು, ಇದಕ್ಕೆ ಪೂರ್ವಭಾವಿಯಾಗಿ ಟ್ರಸ್ಟ್ ವತಿಯಿಂದ ಭಾರತದ ಮೂಲೆ ಮೂಲೆಯಲ್ಲಿ ಪ್ರತಿ ಹಿಂದೂಗಳ ಮನೆಗೆ ಅಯೋಧ್ಯೆಯ ಪರಮ ಪವಿತ್ರ ಮಂತ್ರಾಕ್ಷತೆಯೊಂದಿಗೆ ಶ್ರೀರಾಮನ ಫೋಟೋ ವಿತರಿಸುವ ಅಭಿಯಾನ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಅದರಂತೆ ಮೈಸೂರು ನಗರದ 15 ಪ್ರದೇಶಗಳಿಗೆ ಇಂದು ಮಂತ್ರಾಕ್ಷತೆ ಹಾಗೂ ಶ್ರೀರಾಮನ ಫೋಟೋಗಳನ್ನು ತಲುಪಿಸಲಾಗುತ್ತಿದೆ. ಜ.1ರಿಂದ 15ರವರೆಗೂ ಸಂಪರ್ಕ ಅಭಿಯಾನ ನಡೆಯಲಿದ್ದು, ಈ ಅವಧಿಯಲ್ಲಿ ನಮ್ಮ ಕಾರ್ಯಕರ್ತರು ಪ್ರತಿ ಹಿಂದೂಗಳ ಮನೆಗೆ ಭೇಟಿ ನೀಡಿ ಈ ಪವಿತ್ರ ವಸ್ತುಗಳನ್ನು ತಲುಪಿಸಲಿದ್ದಾರೆ. ಜೊತೆಗೆ ಜ.22ರಂದು ಅಯೋಧ್ಯೆಯಲ್ಲಿ ಶ್ರೀರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಆಗುವಾಗ ಮೈಸೂರು ಸೇರಿದಂತೆ ದೇಶದ ಎಲ್ಲಾ ಊರುಗಳಲ್ಲಿರುವ ದೇವಾಲಯಗಳಲ್ಲಿ ವಿಶೇಷ ಪೂಜೆ ಆಯೋಜಿಸಿ, ಅಂದು ಸಂಜೆ ಇಡೀ ಭಾರತದಾದ್ಯಂತ ಪ್ರತಿಯೊಬ್ಬ ಹಿಂದೂವಿನ ಮನೆಯ ಮುಂದೆ ಕನಿಷ್ಠ ಐದು ದೀಪಗಳನ್ನು ಹಚ್ಚಬೇಕೆಂದು ಸಂದೇಶ ನೀಡಲಿದ್ದಾರೆ. ಭಾರತದ ಇತಿಹಾಸದಲ್ಲಿ ಅಂದು ಕೋಟಿ ಕೋಟಿ ದೀಪೋತ್ಸವ ನೆರವೇರಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಧರ್ಮ ಜಾಗರಣ ವೇದಿಕೆ ಮೈಸೂರು ವಿಭಾಗದ ಸಂಯೋಜಕ ರಾಧಾಕೃಷ್ಣ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಬಿಜೆಪಿ ಮುಖಂಡರಾದ ಹೆಚ್.ಜಿ.ಗಿರಿಧರ್, ಜೋಗಿ ಮಂಜು, ಶ್ರೀರಾಮ ಮಂದಿರ ಅಭಿಯಾನದ ಮೈಸೂರಿನ ಸಂಚಾಲಕ ಮಧುಶಂಕರ್, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಎಸ್.ಎಲ್. ಆನಂದ್, ಸಂಯೋಜಕ ನಾಗರಾಜು, ಆರ್‌ಎಸ್‌ಎಸ್ ಮೈಸೂರು ನಗರ ಕಾರ್ಯದರ್ಶಿ ವಿ.ಪ್ರಶಾಂತ್, ಮುಖಂಡ ವಿಕ್ರಂ ಅಯ್ಯಂಗಾರ್ ಮತ್ತಿತರರು ಹಾಜರಿದ್ದರು.



ಕುಂಡ್ಯೋಳಂಡ ಹಾಕಿ ಕಪ್ ಲಾಂಛನ ಬಿಡುಗಡೆ

ಮಡಿಕೇರಿ, ಡಿ.21– ಈ ಬಾರಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಆತಿಥ್ಯವನ್ನು ಕುಂಡ್ಯೋಳಂಡ ಕುಟುಂಬ ವಹಿಸಿಕೊಂಡಿದ್ದು, ಪಂದ್ಯಾವಳಿಯ 'ಕುಂಡ್ಯೋಳಂಡ ಹಾಕಿ ಕಪ್ 2024' ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಬಿಡುಗಡೆಗೊಳಿಸಿದರು.

ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಲೋಗೋ ಅನಾವರಣಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೊಡವರ ಹಾಕಿ ಕ್ರೀಡಾ ಪ್ರೇಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಬೋಪಣ್ಣ, ಕುಂಡ್ಯೋಳಂಡ ಕುಟುಂಬದ ಪ್ರಮುಖರು ಉಪಸ್ಥಿತರಿದ್ದರು.

ನಾಳೆ ಕಕ್ಕುಂದಕಾಡುವಿನಲ್ಲಿ ವೈಕುಂಠ ಏಕಾದಶಿ

ನಾಪೋಕ್ಲು, ಡಿ.21– ಸಮೀಪದ ಕಕ್ಕುಂದಕಾಡು ಲಕ್ಷ್ಮೀವೆಂಕಟೇಶ್ವರ ದೇವಸ್ಥಾನದಲ್ಲಿ ಡಿ.23ರಂದು ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ದರ್ಶನ ಹಾಗೂ ಪೂಜೆ ನಡೆಯಲಿದೆ. ಹೆಚ್ಚಿನ ಭಕ್ತರು ಪೂಜಾ ಕಾರ್ಯದಲ್ಲಿ ಭಾಗವಹಿಸಿ, ತೀರ್ಥ ಪ್ರಸಾದ ಸ್ವೀಕರಿಸಿ ದೇವರ ದರ್ಶನ ಪಡೆಯಬೇಕು ಎಂದು ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರಾಯುಕ್ತ ವಿಜಯ ವಿರುದ್ಧ ಅಸಮಾಧಾನ ಸ್ಫೋಟ

ನಗರಸಭೆ ಸಾಮಾನ್ಯ ಸಭೆಯಲ್ಲಿ ಸದಸ್ಯರ ಒಗ್ಗಟ್ಟು ಪ್ರದರ್ಶನ

ಮಡಿಕೇರಿ, ಡಿ.21– ಮಡಿಕೇರಿ ನಗರಸಭೆ ಸಾಮಾನ್ಯ ಸಭೆಯಲ್ಲಿ ಪೌರಾಯುಕ್ತ ವಿಜಯ ವಿರುದ್ಧ ಸದಸ್ಯರ ಅಸಮಾಧಾನ ಸ್ಫೋಟಗೊಂಡಿತು. ನಗರಸಭೆ ಆಡಳಿತ ಸಂಪೂರ್ಣವಾಗಿ ವಿಫಲಗೊಂಡಿದ್ದು, ಸಾರ್ವಜನಿಕರಿಗೆ ನ್ಯಾಯ ದೊರಕಿಸಲು ಸಾಧ್ಯವಾಗುತ್ತಿಲ್ಲವೆಂದು ಅಸಹಾಯಕತೆ ವ್ಯಕ್ತಪಡಿಸಿದ ಸದಸ್ಯರು, ವ್ಯವಸ್ಥೆಯ ಸುಧಾರಣೆಗೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರಿಗೆ ಪಕ್ಷಾತೀತವಾಗಿ ಬೆಂಬಲ ಸೂಚಿಸುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದರು.

ನಗರಸಭೆ ಸಭಾಂಗಣದಲ್ಲಿ ಅಧ್ಯಕ್ಷೆ ಅನಿತಾ ಪೂವಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ಅಧಿಕಾರಿಗಳು ತೋರುತ್ತಿರುವ ಅಸಹಕಾರ ಮನೋಭಾವದ ಕುರಿತು ಸದಸ್ಯರು ವಾಗ್ದಾಳಿ ನಡೆಸಿದರು.

ವಿರೋಧ ಪಕ್ಷ ಎಸ್‌ಡಿಪಿಐನ ಸದಸ್ಯರಾದ ಅಮಿನ್ ಮೊಹ್ಸಿನ್ ಹಾಗೂ ಎಂ.ಕೆ.ಮನ್ಸೂರ್ ಆಲಿ ಮಾತನಾಡಿ, ಮಾರುಕಟ್ಟೆ ಬಳಿ 8 ತಾತ್ಕಾಲಿಕ ಮಳಿಗೆಗಳ ನಿರ್ಮಾಣಕ್ಕೆ ರಿ–ಟೆಂಡರ್ ಪ್ರಕ್ರಿಯೆ ನಡೆಸದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ.ಸತೀಶ್ ಮಾತನಾಡಿ, ಪೌರಾಯುಕ್ತರು ಆಸಕ್ತಿ ವಹಿಸಿ ರಿ–ಟೆಂಡರ್ ಮಾಡಬೇಕಾಗಿತ್ತು. ಆದರೆ, ನಗರಸಭೆ ಕಚೇರಿಯಲ್ಲಿ ಅಧಿಕಾರಿಗಳೇ ಇರುವುದಿಲ್ಲ. ರಜೆ



ಅಥವಾ ಕೋರ್ಟ್ ಎಂದು ಕಾರಣ ನೀಡುತ್ತಾರೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದನೆ ದೊರೆಯುತ್ತಿಲ್ಲವೆಂದು ಆರೋಪಿಸಿದರು.

ಆಡಳಿತ ಪಕ್ಷ ಬಿಜೆಪಿ ಸದಸ್ಯ ಉಮೇಶ್ ಸುಬ್ರಮಣಿ ಮಾತನಾಡಿ, ಬೇಕಂತಲೇ ಸಾರ್ವಜನಿಕರಿಗೆ ನಗರಸಭೆಯಲ್ಲಿ ಕಿರುಕುಳವಾಗುತ್ತಿದೆ. ಇದಕ್ಕೆ ಸದಸ್ಯರಾದ ನಾವು ಹಾಗೂ ಅಧಿಕಾರಿಗಳೇ ಹೊಣೆ. ಹಣವಿದ್ದರೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಆರಂಭದಲ್ಲಿ ಉತ್ಸಾಹದಿಂದ ಕೆಲಸ ಮಾಡಿದ ಪೌರಾಯುಕ್ತರು ಇತ್ತೀಚಿನ ದಿನಗಳಲ್ಲಿ ನಿರಾಸಕ್ತಿ ತೋರುತ್ತಿದ್ದಾರೆ. ಜನರಿಗೆ ಸೌಲಭ್ಯಗಳು ಸುಲಭವಾಗಿ ಸಿಗಬೇಕೆಂದು ಸರ್ಕಾರ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡುತ್ತಿದೆ. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಮಸ್ಯೆ ಮತ್ತು ಗೊಂದಲಗಳು ಹೆಚ್ಚಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಸದಸ್ಯ ಅರುಣ್ ಶೆಟ್ಟಿ ಮಾತನಾಡಿ, ಯಾವುದೇ ಕೆಲಸ ಹೇಳಿದರೂ ಪೌರಾಯುಕ್ತರು ನೌಕರರ ಕೊರತೆ ಇದೆ ಎಂದು ಕಾರಣ ನೀಡುತ್ತಿದ್ದಾರೆ. ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿಯಲು ಇವರೇ ಕಾರಣವೆಂದು ಆರೋಪಿಸಿದರು. ಇಲ್ಲಿ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದರು.

ಕೆ.ಎಂ.ಅಪ್ಪಣ್ಣ ಮಾತನಾಡಿ, ನಗರಸಭೆಗೆ ಬರುವ ಸಾರ್ವಜನಿಕರು ಅರ್ಜಿಗಳು ವಿಲೇವಾರಿಯಾಗದೆ ಇದ್ದಾಗ ನಮ್ಮ ಸಹಾಯ ಕೋರುತ್ತಾರೆ. ಆದರೆ, ಅಧಿಕಾರಿಗಳು ಅಸಹಕಾರ ತೋರುತ್ತಿರುವುದರಿಂದ ನಮ್ಮ ಮಾತಿಗೂ ಬೆಲೆ ಇಲ್ಲದಾಗಿದೆ. ಈ ಎಲ್ಲಾ ಬೆಳವಣಿಗೆಗಳಿಂದ ನಗರಸಭೆಗೆ ಬರಲು ನಮಗೆ ಮನಸ್ಸಿಲ್ಲದಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕಾಂಗ್ರೆಸ್ ಸದಸ್ಯ ಬಿ.ವೈ.ರಾಜೇಶ್ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಅನುಷ್ಠಾನಗೊಂಡಿಲ್ಲ. ಈ ಸಭೆಯಿಂದ ಕಾಲಹರಣವೇ ಹೊರತು ಯಾವುದೇ ಪ್ರಯೋಜನವಿಲ್ಲ. ಆಡಳಿತ ವ್ಯವಸ್ಥೆ ಅಧಿಕಾರಿಗಳ ಮೇಲೆ ಹಿಡಿತ ಕಳೆದುಕೊಂಡಿದೆ. ಕಳೆದ 25 ವರ್ಷಗಳಿಂದ ಈ ರೀತಿಯ ನಗರಸಭೆಯನ್ನು ನಾನು ನೋಡಿಲ್ಲ. ವ್ಯವಸ್ಥೆ ಸುಧಾರಿಸದಿದ್ದಲ್ಲಿ ಜನ ನಗರಸಭೆಗೆ ಕಲ್ಲು ಹೊಡೆಯುವ ದಿನ ದೂರವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸದಸ್ಯರಾದ ಅಮಿನ್ ಮೊಹ್ಸಿನ್, ಮನ್ಸೂರ್, ಕೆ.ಎಸ್.ರಮೇಶ್, ಮಹೇಶ್ ಜೈನಿ ಮಾತನಾಡಿದರು. ಉಪಾಧ್ಯಕ್ಷೆ ಸವಿತಾ ರಾಕೇಶ್ ಸಭೆಯಲ್ಲಿ ಉಪಸ್ಥಿತರಿದ್ದರು.

ಮರಣ ದಂಡನೆ ನೀಡಿ

ಸದಸ್ಯರೆಲ್ಲರೂ ತಮ್ಮ ಅಭಿಪ್ರಾಯ ಮಂಡಿಸಿದ ನಂತರ ಪೌರಾಯುಕ್ತ ವಿಜಯ ಮಾತನಾಡಿ, ನೀವುಗಳು ಹೇಳಿರುವುದನ್ನು ಒಪ್ಪುವೆ, ಆರಂಭದಲ್ಲಿ ಉತ್ಸಾಹದಿಂದ ಕೆಲಸ ಮಾಡಿದ್ದೇನೆ. ಆದರೆ, ಇತ್ತೀಚೆಗೆ ಇಂಜಿನಿಯರ್‌ಗಳು, ಲೆಕ್ಕಾಧಿಕಾರಿ ಸೇರಿದಂತೆ ಅಧಿಕಾರಿಗಳ ಕೊರತೆ ಹೆಚ್ಚಾಗಿದೆ. ಈಗ ನನ್ನ ಬಲ ಕುಗ್ಗಿದೆ. ಸದಸ್ಯರಿಗೆ ಗೌರವ ನೀಡಬೇಡಿ ಎಂದು ನಾನು ಯಾವುದೇ ಅಧಿಕಾರಿಗಳಿಗೆ ಹೇಳಿಲ್ಲ. ಬೇಕಾದರೆ ನೀವುಗಳೇ ಅಧಿಕಾರಿಗಳನ್ನು ಖುದ್ದು ಕೇಳಿ ನೋಡಿ, ನಾನು ಸಭೆಯಿಂದ ಹೊರಗೆ ಇರುತ್ತೇನೆ. ನಾನು ಹೇಳಿದ್ದೇನೆ ಎಂದು ಸಾಬೀತಾದರೆ ಯಾವುದೇ ಶಿಕ್ಷೆ ಅನುಭವಿಸಲು ಸಿದ್ಧ. ಬೇಕಿದ್ದರೆ ಮರಣ ದಂಡನೆಯನ್ನೂ ನೀಡಿ ಎಂದರು. ಪೌರಾಯುಕ್ತರ ಈ ಮಾತಿಗೆ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಕರಾಟೆಯಲ್ಲಿ ಮೂವರಿಗೆ ಪದಕ



ಗೋಣಿಕೊಪ್ಪ, ಡಿ.21– ವಿ.ಎಸ್.ಯೋಧ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಮೈಸೂರು ಸೆಂಟ್ ಫಿಲೋಮಿನಾಸ್ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಮುಕ್ತ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಗೋಣಿಕೊಪ್ಪ ಕಾಪ್ಸ್ ಶಾಲೆಯ ಮೂವರು ವಿದ್ಯಾರ್ಥಿಗಳು ಪದಕ ಗಳಿಸಿದ್ದಾರೆ.

ತಶನ್ ನಂಜಪ್ಪ ಕಟಾ ವಿಭಾಗದಲ್ಲಿ 3ನೇ ಹಾಗೂ ಕುಮಿಟೆ ವಿಭಾಗದಲ್ಲಿ 2ನೇ ಸ್ಥಾನ, ತ್ರಿಷಾ ದೇಚಮ್ಮ ಕುಮಿಟೆಯಲ್ಲಿ ಪ್ರಥಮ, ಕಟಾದಲ್ಲಿ ತೃತೀಯ ಹಾಗೂ ತನಿಕಾ ನೀಲಮ್ಮ ಕಟಾ ವಿಭಾಗದಲ್ಲಿ ಪ್ರಥಮ, ಕುಮಿಟೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ವಿಜೇತರಿಗೆ ಕರಾಟೆಪಟು ಜಮ್ಮಡ ಜೋಯಪ್ಪ ತರಬೇತಿ ನೀಡಿದ್ದರು.

15 ವರ್ಷ ಪೂರೈಸಿದ ಮಲಯಾಳಿ ಸಮಾಜದ ಸಂಘ

ವಿರಾಜಪೇಟೆ, ಡಿ.21– ಶ್ರೀ ಮುತ್ತಪ್ಪನ್ ಮಲಯಾಳಿ ಸಮಾಜ ಓಣಂ ಹಬ್ಬ ಆಚರಣೆಗೆ ಮಾತ್ರ ಸೀಮಿತವಾಗದೆ, ಜನಾಂಗದವರ ಏಳಿಗೆ ಮತ್ತು ಜನಪರ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಮಲಯಾಳಿ ಸಮಾಜದ ಸಂಘ 15 ವರ್ಷ ಪೂರೈಸಿದೆ ಎಂದು ಸಂಘದ ಅಧ್ಯಕ್ಷ ಪಿ.ಜಿ.ಸುಮೇಶ್ ಹೇಳಿದರು.



ನಗರದ ಮೀನುಪೇಟೆಯ ಚೈತನ್ಯ ಮಠಪುರ ಮುತ್ತಪ್ಪನ್ ದೇವಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ ಸಂಘದ ಮಹಾಸಭೆ ಹಾಗೂ ಹೆಗ್ಗಳ ಗ್ರಾಮದ ಸ್ನೇಹ ಭವನದ ವೃದ್ಧೆಯರಿಗೆ ಗಾಲಿ ಕುರ್ಚಿ, ವಾಟರ್ ಫಿಲ್ಟರ್ ಹಾಗೂ ವೃದ್ಧಾಶ್ರಮದ ವಾಸಿಗಳಿಗೆ ಅಗತ್ಯ ಪರಿಕರಗಳ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಮೊದಲು ಸಂಘ ಪುತ್ತಪನ್ ಓಣಂ ಆಚರಣ ಸಮಿತಿ ಎಂಬ ಹೆಸರಿತ್ತು. ಆದರೆ, ಈಗ ಸರ್ವ ಸದಸ್ಯರ ಒಪ್ಪಿಗೆ ಪಡೆದು ಮುತ್ತಪ್ಪನ್ ಮಲಯಾಳಿ ಸಮಾಜ ಎಂದು ಕಾರ್ಯನಿರ್ವಹಿಸುತ್ತಿದೆ. ಸಂಘದಲ್ಲಿ ಮರಣನಿಧಿ ಸ್ಥಾಪನೆಗಾಗಿ ನೂತನ ಬೈಲ ತಿದ್ದುಪಡಿ ಮಾಡಿ ಮರಣನಿಧಿ ನೀಡಲಾಗುತ್ತಿದ್ದು, ಜನಾಂಗದವರು ಸಂಘದ ಏಳಿಗೆಗೆ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ವಾರ್ಷಿಕ ಲೆಕ್ಕಪತ್ರ ಮಂಡಿಸಿದ ಮುತ್ತಪ್ಪನ್ ಮಲಯಾಳಿ ಸಮಾಜದ ಕಾರ್ಯದರ್ಶಿ ಸಿ.ಆರ್.ಬಾಬು ಮಾತನಾಡಿ, ಜ.21ರಂದು ಚೈತನ್ಯ ಮಠಪುರ ಮುತ್ತಪ್ಪನ್ ದೇವಾಲಯದ 7ನೇ ವರ್ಷದ ಪ್ರತಿಷ್ಠಾಪನೆ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ ಹಾಗೂ ಮುತ್ತಪ್ಪನ್ ವೆಳ್ಳಾಟಂ ನಂತರ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಸಿ.ಆರ್.ಸಜೀವನ್, ಗೌರವಾಧ್ಯಕ್ಷ ಪದ್ಮನಾಭ, ಕೋಶಾಧಿಕಾರಿ ಟಿ.ಆರ್. ಗಣೇಶ್, ಸಹಕಾರ್ಯದರ್ಶಿ ರಂಜೀತ್, ಸಲಹೆಗಾರ ಪಿ.ಜೆ.ವಿಶ್ವನಾಥ್, ಸಮಾಜದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಕೊಡಗು ಪೊಲೀಸ್ ಶ್ವಾನದಳದ 'ಲಿಯೊ' ಸಾವು

ಮಡಿಕೇರಿ, ಡಿ.21– ಕೊಡಗು ಜಿಲ್ಲಾ ಪೊಲೀಸ್ ಶ್ವಾನದಳದಲ್ಲಿ ಕಳೆದ 11 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸುತ್ತಿದ್ದ 'ಲಿಯೊ' ಮೃತಪಟ್ಟಿದೆ. ಕೆಲ ದಿನಗಳಿಂದ ಅನಾರೋಗ್ಯ ಪೀಡಿತವಾಗಿದ್ದ ಜರ್ಮನ್ ಶೆಫರ್ಡ್ ತಳಿಯ ಲಿಯೊ ಶ್ವಾನ ಒಟ್ಟು 380 ಅಪರಾಧ ಪತ್ತೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿ ತನ್ನ ಕ್ಷಮತೆ ಪ್ರದರ್ಶಿಸಿತ್ತು. ಕೊಡಗು ಜಿಲ್ಲೆಯಲ್ಲಿ 2018 ಮತ್ತು 2019ರಲ್ಲಿ ಸಂಭವಿಸಿದ ಭೀಕರ ಭೂಕುಸಿತ ಸಂದರ್ಭ ಮಣ್ಣಿನಡಿ ಸಿಲುಕಿದ್ದ 4 ಮೃತ ದೇಹಗಳನ್ನು ಪತ್ತೆ ಹಚ್ಚುವಲ್ಲೂ ಯಶಸ್ವಿಯಾಗಿತ್ತು. ಜಿಲ್ಲಾ ಶ್ವಾನದಳ ಸಿಬ್ಬಂದಿ ಮನಮೋಹನ್ ಗರಡಿಯಲ್ಲಿ ಪಳಗಿದ್ದ ಲಿಯೊ ಶ್ವಾನ ತನ್ನ ಕರ್ತವ್ಯ ಪರತೆಗೆ ಪೊಲೀಸ್ ಇಲಾಖೆಯಿಂದ ನೀಡಲ್ಪಡುವ ಒಟ್ಟು ಐದು ಪದಕಗಳನ್ನು ತನ್ನದಾಗಿಸಿಕೊಂಡಿತ್ತು.



ಅಂತ್ಯಕ್ರಿಯೆ: ಜಿಲ್ಲಾ ಶ್ವಾನ ದಳದ ಸದಸ್ಯ ಲಿಯೊ ನಿಧನಕ್ಕೆ ಕೊಡಗು ಜಿಲ್ಲಾ ಪೊಲೀಸ್ ಸಿಬ್ಬಂದಿ ಕಂಬನಿ ಮಿಡಿದಿದ್ದಾರೆ. ಮಡಿಕೇರಿಯ ಡಿಎಆರ್ ಪೊಲೀಸ್ ಕಚೇರಿ ಆವರಣದಲ್ಲಿ ಲಿಯೊಗೆ ಸಕಲ ಪೊಲೀಸ್ ಗೌರವ ಸೂಚಿಸಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಲಿಯೊಗೆ ಪುಷ್ಪಗುಚ್ಛ ಅರ್ಪಿಸಿ ಗೌರವ ಸೂಚಿಸಿದರು. ಬಳಿಕ ಅಲ್ಲೇ ಅಂತ್ಯಕ್ರಿಯೆ ನೆರವೇರಿಸಲಾಯಿತು.

ವಿದ್ಯುತ್ ಕಂಬಕ್ಕೆ ವ್ಯಾನ್ ಡಿಕ್ಕಿ

ನಾಪೋಕ್ಲು, ಡಿ.21– ಸಮೀಪದ ಹೊದ್ದೂರು ಗ್ರಾಮದ ಬೋಳಿಬಾಣೆಯಲ್ಲಿ ಗುರುವಾರ ನಿಯಂತ್ರಣ ತಪ್ಪಿ ಮಾರುತಿ ವ್ಯಾನ್ ವಿದ್ಯುತ್ ಕಂಬಕ್ಕೆ ಡಿಕ್ಕಿ ಸಂಭವಿಸಿದ್ದು, ಚಾಲಕ ಹಾಗೂ ಮಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಲ್ಲಮಾವಟ್ಟಿಯ ಪೇರೂರು ಗ್ರಾಮದ ಚಂಗೇಟಿರ ರವೀಂದ್ರ ಹಾಗೂ ಇವರ ಮಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಇವರು ಸಂಜೆ ವ್ಯಾನ್‌ನಲ್ಲಿ ಮೂರ್ನಾಡು ಕಡೆಯಿಂದ ನಾಪೋಕ್ಲು ಕಡೆಗೆ ಬರುತ್ತಿದ್ದಾಗ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ.



ನಾಪೋಕ್ಲುವಿನ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವತಿಯಿಂದ ಹಳೇ ತಾಲೂಕಿನ ಅಂಗನವಾಡಿ ಕೇಂದ್ರದ ಆವರಣವನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸಲಾಯಿತು. ಘಟಕದ ಸಂಯೋಜಕಿ ಬಾಳೆಯಡ ದಿವ್ಯ, ಉಮಾಲಕ್ಷ್ಮೀ, ಚಂದ್ರಕಲಾ, ದಿಲೀಶ್, ಶಂಕರ, ಶರವಣ ಇದ್ದರು.



ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಮಟ್ಟದ ಸಮಾವೇಶ

ಆಂಧ್ರ, ತೆಲಂಗಾಣ ಮಾದರಿ ಒಳ ಮೀಸಲಾತಿ ಜಾರಿ

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಭರವಸೆ



ಚಾಮರಾಜನಗರ, ಡಿ.21– ಆಂಧ್ರ, ತೆಲಂಗಾಣ ಮಾದರಿ ಮಾದಿಗರಿಗೆ ಒಳ ಮೀಸಲಾತಿ ಜಾರಿ ಮಾಡಿಸುತ್ತೇನೆ ಎಂದು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಭರವಸೆ ನೀಡಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮಾದಿಗರು ಧ್ವನಿ ಇಲ್ಲದವರು, ಹೋರಾಟ ಮಾಡಿ ಗೊತ್ತಿಲ್ಲ. ಅವರು ಏನು ಕೇಳುತ್ತಿಲ್ಲ. ಚುನಾವಣೆ ಬಂದಾಗ ಸಾಲಿನಲ್ಲಿ ನಿಂತು ಓಟು ಹಾಕುತ್ತಾರೆ ಎಂದು ತಿಳಿದುಕೊಂಡಿದ್ದಾರೆ. ಹೀಗಾಗಿ ನಮ್ಮ ಸಮಾಜ ಜಾಗೃತರಾಗಬೇಕಿದೆ. ಇದಕ್ಕಾಗಿ ಕೇಂದ್ರ ಸಚಿವನಾಗಿದ್ದರೂ, ಸಮುದಾಯದ ಸಂಘಟನೆ ಹಾಗೂ ಒಳ ಮೀಸಲಾತಿಗಾಗಿ ಹೋರಾಟ ಮಾಡಲು ಸಮಾಜದ ಮನೆ ಮನೆಗೆ ಬರುತ್ತಿದ್ದೇನೆ ಎಂದರು.

ಒಳ ಮೀಸಲಾತಿ ಜಾರಿಗೊಳಿಸಲು ಯಾವುದೇ ಪಕ್ಷಗಳು ಮನಸ್ಸು ಮಾಡಲಿಲ್ಲ. ಕಾರಣ ಸಮುದಾಯದಿಂದ ಆಯ್ಕೆಯಾದ ಶಾಸಕರು ಮಾದಿಗರಿಗೆ ಒಳ ಮೀಸಲಾತಿ ನೀಡಬೇಕೆಂದು ಅಧಿವೇಶನದಲ್ಲಿ ಒತ್ತಾಯಿಸಲಿಲ್ಲ. ಸ್ಪೀಕರ್ ಅನುಮತಿ ನೀಡಲಿಲ್ಲ ಎಂದು ಅಸಮಾಧಾನ ಹೊರಹಾಕಿದ ಅವರು, ಎನ್.ರಾಚಯ್ಯ ಅವರ ಬಗ್ಗೆ ಅಪಾರ ಗೌರವ ಇದೆ. ನಾನು ಅವರ ಬಗ್ಗೆ ಮಾತನಾಡುತ್ತಿಲ್ಲ. ಈ ಭಾಗದ ಮಾದಿಗರಷ್ಟೇ ಅಲ್ಲ. ನಮ್ಮ ಭಾಗದ ಚಿತ್ರದುರ್ಗ, ಕೊಪ್ಪಳದಲ್ಲಿರುವ ಮಾದಿಗರನ್ನು ಕರೆದು ಜಮೀನು ಕೊಡಿಸಿದ್ದಾರೆ ಎಂದು ಗುಣಗಾನ ಮಾಡಿದರು.

ಆಂಧ್ರ ಹಾಗೂ ತೆಲಂಗಾಣದಲ್ಲಿ 38 ವರ್ಷಗಳ ಹಿಂದೆಯೇ ಒಳ ಮೀಸಲಾತಿ ಹೋರಾಟ ಆರಂಭವಾಯಿತು. ತೆಲಂಗಾಣದಲ್ಲಿ ಮಾದಿಗರ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡ ಹಿನ್ನೆಲೆಯಲ್ಲಿ ಅಂದಿನ ಆಂಧ್ರ ಸರ್ಕಾರ ಮೀಸಲಾತಿಗೆ ಒಪ್ಪಿಗೆ ನೀಡಿ ಜಾರಿಗೊಳಿಸಿತು. ಬಳಿಕ 5 ವರ್ಷಗಳ ಕಾಲ ಕರ್ನಾಟಕದಲ್ಲಿ ಹೋರಾಡಿದ ಮಾದಿಗರಿಗೆ ನ್ಯಾಯ ಸಿಗಲಿಲ್ಲ. 2004 ವರೆಗೆ ಒಳ ಮೀಸಲಾತಿ ದೊರೆಯಲಿಲ್ಲ. ಎಸ್.ಎಂ.ಕೃಷ್ಣ ಸಿಎಂ ಆಗಿದ್ದ ವೇಳೆ ಆಯೋಗ ರಚಿಸಿದರು ಎಂದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರ ಪರಿಶ್ರಮದಿಂದ ಒಳ ಮೀಸಲಾತಿ ಹೋರಾಟಕ್ಕೆ ಶಕ್ತಿ ಬಂದಿದೆ. ಸಮುದಾಯದ ಹಿತಕ್ಕಾಗಿ ಅವರು ದುಡಿಯುತ್ತಿದ್ದಾರೆ. ಇವರ ಜೊತೆಗೆ ಮಾಜಿ ಸಚಿವ ಗೋವಿಂದ ಕಾರಜೋಳ ಕೈ ಜೋಡಿಸಿದ್ದಾರೆ ಎಂದರು.

ಒಳ ಮೀಸಲಾತಿ ಬಗ್ಗೆ ಸಮುದಾಯದ ಮುಖಂಡರು ಸಮುದಾಯದವರಿಗೆ ಮನವರಿಕೆ ಮಾಡಿಕೊಡಬೇಕು. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿದ್ದು, ಒಳ ಮೀಸಲಾತಿಗಾಗಿ ಕಳೆದ 30 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದೇವೆ. 60 ವರ್ಷಕ್ಕೂ ಹೆಚ್ಚು ಕಾಲ ದೇಶದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸಮುದಾಯಕ್ಕೆ ಒಳ ಮೀಸಲಾತಿ ಜಾರಿಗೆ ಮನಸ್ಸು ಮಾಡಲಿಲ್ಲ. ಆದರೆ ಯಡಿಯೂರಪ್ಪ ಸಿಎಂ ಆಗಿದ್ದ ವೇಳೆ ಸಮುದಾಯದ ಅಭಿವೃದ್ಧಿಗೆ 11 ಸಾವಿರ ಕೋಟಿ ಅನುದಾನ ನೀಡಿ, ಸದಾಶಿವ ಆಯೋಗ ರಚನೆ ಮಾಡಿದರು. ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು. ನಂತರ ಬಂದ ಸಿದ್ದರಾಮಯ್ಯ ಸರ್ಕಾರ ಈ ಬಗ್ಗೆ ಯಾವುದೇ ಚಕಾರ ಎತ್ತಲಿಲ್ಲ. ನಂತರ ಕೇಂದ್ರದಲ್ಲಿ ಎ.ನಾರಾಯಣಸ್ವಾಮಿ ಸಚಿವರಾಗಿ ಒಳ ಮೀಸಲಾತಿ ಜಾರಿಗೆ ಹೆಚ್ಚಿನ ಒತ್ತಡ ತಂದರು. ಹೀಗಾಗಿ ಮಾದಿಗರಿಗೆ ಒಳ ಮೀಸಲಾತಿ ಜಾರಿಯಾಗುವುದರಲ್ಲಿ ಯಾವುದೇ ಸಂಶಯ ಬೇಡ ಎಂದರು.

ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ರಾಜಶೇಖರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ವೆಂಕಟೇಶ್, ನಾಗೇಂದ್ರ, ವಕೀಲ ರಾಜೇಂದ್ರ, ನಗರಸಭಾ ಸದಸ್ಯ ಮಹದೇವಯ್ಯ, ನಿವೃತ್ತ ಬ್ಯಾಂಕ್ ಅಧಿಕಾರಿ ಬಸವರಾಜು, ದೀಪಕ್, ದೊಡ್ಡಯ್ಯ, ಸಿದ್ದಯ್ಯ, ಧರ್ಮಣ್ಣ, ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಎಂ.ಶಿವಕುಮಾರ್, ರಾಜು, ಸುಂದರ್, ಬಾಬು ಜಗಜೀವನ ರಾಂ ಟ್ರಸ್ಟ್ ಅಧ್ಯಕ್ಷ ಶಿವು, ಆರ್.ಎಸ್.ಶಿವಣ್ಣ, ಹೆಚ್.ಲಿಂಗರಾಜು, ಹೆಚ್.ಮೂರ್ತಿ, ರಂಗಸ್ವಾಮಿ ಹಾಜರಿದ್ದರು.

'ಕೈ' ಖರ್ಗೆಯವರನ್ನು ಮುಖ್ಯಮಂತ್ರಿ ಮಾಡಲಿಲ್ಲ

ಚಾಮರಾಜನಗರ: ಕಾಂಗ್ರೆಸ್ ನಾಯಕರು ಅವಕಾಶವಿದ್ದಾಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ರಾಜ್ಯದ ಮುಖ್ಯಮಂತ್ರಿ ಮಾಡಲಿಲ್ಲ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಆರೋಪಿಸಿದರು.

'ಇಂಡಿಯಾ' ಸಭೆಯಲ್ಲಿ ಪ್ರಧಾನಿ ಅಭ್ಯರ್ಥಿಯಾಗಿ ಖರ್ಗೆ ಹೆಸರು ಪ್ರಸ್ತಾಪವಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಖರ್ಗೆ ಅವರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡುವ ಎಲ್ಲಾ ಅವಕಾಶಗಳಿದ್ದವು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎಷ್ಟು ಸ್ಥಾನ ಗೆಲ್ಲುತ್ತೇವೆ ಎಂಬ ಗ್ಯಾರಂಟಿ ಇಲ್ಲ. ಯಾವ ಸಂದರ್ಭದಲ್ಲಿ ಅಭ್ಯರ್ಥಿಯನ್ನಾಗಿ ಮಾಡುತ್ತಿದ್ದೀರಾ ಎಂದು ಖರ್ಗೆಯವರೇ ಕೇಳಿದ್ದಾರೆ. ಈ ಬಗ್ಗೆ ಕಾಂಗ್ರೆಸ್‌ನವರೇ ಚರ್ಚಿಸಲಿ ಎಂದರು. ದಲಿತ ನಾಯಕನನ್ನು ಹರಕೆಯ ಕುರಿ ಮಾಡಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಖರ್ಗೆಯವರು ದಲಿತ ಮುಖಂಡರು ಎಂದು ನಾವು ಒಪ್ಪಿಕೊಳ್ಳುತ್ತೇವೆ. ಹರಕೆಯ ಕುರಿ ಮಾತನ್ನು ನಾನು ಹೇಳುತ್ತಿಲ್ಲ. ರಾಜ್ಯದ ಅನೇಕ ನಾಯಕರು, ಕಾಂಗ್ರೆಸ್ ಮುಖಂಡರೇ ಹೇಳುತ್ತಿದ್ದಾರೆ. ಇಂಡಿಯಾ ಸಭೆಯಲ್ಲಿ ಮಮತಾ ಬ್ಯಾನರ್ಜಿಯವರು ಖರ್ಗೆಯವರ ಹೆಸರು ಘೋಷಿಸಿದಾಗ ಏನು ನಡೆಯಿತು? ಯಾವ್ಯಾವ ನಾಯಕರು ಹೇಗೆ ನಡೆದುಕೊಂಡರು. ಯಾವ ರೀತಿ ಪ್ರತಿಕ್ರಿಯಿಸಿದರು ಎಂದು ನಾನು ಹೇಳುವುದಿಲ್ಲ.ಮಾಧ್ಯಮದವರೇ ಹೇಳಿದರೆ ಚೆನ್ನಾಗಿರುತ್ತದೆ ಎಂದು ಉತ್ತರಿಸಿದರು.

ಉಪ ರಾಷ್ಟ್ರಪತಿ ಧನಕರ್ ಅವರನ್ನು ವ್ಯಂಗ್ಯವಾಗಿ ಅನುಕರಣೆ ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಉಪರಾಷ್ಟ್ರಪತಿ ಅವರನ್ನು ಮಿಮಿಕ್ರಿ ಮಾಡಿದ್ದನ್ನು ಜನರು ನೋಡಿದ್ದಾರೆ. ಅಲ್ಲಿದ್ದ ಸಂಸದರು ಯಾವ ರೀತಿ ವರ್ತಿಸಿದ್ದಾರೆ ಎಂಬುದನ್ನೂ ಜನರು ನೋಡಿದ್ದಾರೆ. ಲೋಕಸಭಾ ಸದಸ್ಯರು, ಇತರರ ಬಗ್ಗೆ ಮಾತನಾಡುವುದು ಬೇರೆ. ಆದರೆ, ರಾಷ್ಟ್ರಪತಿ, ಉಪರಾಷ್ಟ್ರಪತಿ ಅವರನ್ನು ಸಂಬೋಧಿಸುವಾಗ, ಅವರ ಬಗ್ಗೆ ಮಾತನಾಡುವಾಗ ಯಾವ ರೀತಿ ನಡೆದುಕೊಳ್ಳಬೇಕು ಎಂಬ ಪರಿಜ್ಞಾನ ಕಾಂಗ್ರೆಸ್‌ಗೆ ಇರಬೇಕಿತ್ತು ಎಂದರು.

ಭಕ್ತರ ದಾಸೋಹಕ್ಕೆ ಅಗತ್ಯವಾದ ಪರಿಕರ ಹಸ್ತಾಂತರ



ಕೊಳ್ಳೇಗಾಲ, ಡಿ.21– ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ಶ್ರೀಬೆಲವತ್ತ ಮಹದೇಶ್ವರ ದೇಗುಲಕ್ಕೆ ಸಮಾಜ ಸೇವಕ ಜಿ.ಸಿ.ಕಿರಣ್ ಭಕ್ತರ ದಾಸೋಹಕ್ಕೆ ಅಗತ್ಯವಾದ ಪರಿಕರಗಳನ್ನು ಗ್ರಾಮಸ್ಥರ ಸಮ್ಮುಖದಲ್ಲಿ ಅರ್ಚಕ ರುದ್ರಸ್ವಾಮಿ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಐತಿಹಾಸಿಕ ಹಿನ್ನೆಲೆಯುಳ್ಳ ಮಹದೇಶ್ವರರ ದರ್ಶನ ಲಭಿಸಿದ್ದು ಸಂತಸ ತಂದಿದೆ. ದೇವಾಲಯಕ್ಕೆ ಆಗಮಿಸುವ ಭಕ್ತರ ದಾಸೋಹದ ಅನುಕೂಲಕ್ಕಾಗಿ ಪಾತ್ರೆ ಪರಿಕರಗಳನ್ನು ನೀಡಲಾಗಿದೆ. ಈ ದೇವಾಲಯ ಜೀರ್ಣೋದ್ಧಾರಗೊಂಡ ಬಳಿಕ ಸುಂದರವಾಗಿ ಕಂಗೊಳಿಸುತ್ತಿದೆ. ದೇವಾಲಯ ಮತ್ತಷ್ಟು ಅಭಿವೃದ್ಧಿಯತ್ತ ಸಾಗಲಿ. ಮುಂದಿನ ದಿನಗಳಲ್ಲಿ ನನ್ನ ಕೈಲಾದ ಸೇವೆ ಮಾಡುತ್ತೇನೆ ಎಂದರು.

ಇದೇ ವೇಳೆ ಜಿ.ಸಿ.ಕಿರಣ್ ಅವರನ್ನು ಗ್ರಾಮದ ಪುಟ್ಟಸ್ವಾಮಿ, ಯುವ ಮುಖಂಡ ವಿಜಯ್ ಸನ್ಮಾನಿಸಿದರು.

ಮಂಡಲ ಪೂಜೆ: ಇದೇ ವೇಳೆ ದೇವಾಲಯದಲ್ಲಿ ವಿದ್ವಾನ್ ಚಂದ್ರಶೇಖರಮೂರ್ತಿ ಅವರ ನೇತೃತ್ವದಲ್ಲಿ ಮಂಡಲ ಪೂಜೆ ವಿಧಿ ವಿಧಾನಗಳೊಂದಿಗೆ ನೆರವೇರಿತು. ಈ ವೇಳೆ ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಗ್ರಾಮದ ಮುಖಂಡರಾದ ಪುಟ್ಟಸ್ವಾಮಿ, ಯುವ ಮುಖಂಡ ವಿ.ಜಿ.ಮಂಜು, ಜಡೇಯಪ್ಪ, ಮಾಧು, ರವಿಗೌಡ, ರಂಗರಾಮ, ಪಾಪಣ್ಣ ಮಹೇಶ್, ಮಾದೇಶ, ಮಣಿ, ಶಿವಯ್ಯ, ಮಹದೇವ, ಕೇಶವಮೂರ್ತಿ, ಅಂಬಾದಾಸ್, ಮಹೇಂದ್ರ, ಮಹೇಶ, ಸಿದ್ದಲಿಂಗಸ್ವಾಮಿ, ಪ್ರಕಾಶ, ಜಯಣ್ಣ, ರೇವಣ್ಣ, ವೀರಣ್ಣ ಸೇರಿದಂತೆ ಇನ್ನಿತರರಿದ್ದರು.

ವೈದ್ಯರ ಮೇಲೆ ಹಲ್ಲೆ: ಪ್ರಕರಣ ದಾಖಲು

ಚಾಮರಾಜನಗರ, ಡಿ.21– ವೈದ್ಯರ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ತಾಲೂಕು ಯುವ ಕಾಂಗ್ರೆಸ್ ಗ್ರಾಮಾಂತರ ಘಟಕದ ಅಧ್ಯಕ್ಷ ಮಹದೇವಸ್ವಾಮಿ ವಿರುದ್ಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳವಾರ ತಡರಾತ್ರಿ ರಾಚಯ್ಯ ಜೋಡಿ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆ ತುರ್ತು ಚಿಕಿತ್ಸಾ ವಿಭಾಗದ ಎದುರು ಕುಡಿದ ಮತ್ತಿನಲ್ಲಿ ಮಹದೇವಸ್ವಾಮಿ ಅವರು ಸಿಮ್ಸ್ ಸ್ಥಾನಿಕ (ರೆಸಿಡೆಂಟ್) ವೈದ್ಯ ಡಾ.ಲಕ್ಷ್ಮಿಕಾಂತ್ ಹಾಗೂ ಎಂಬಿಬಿಎಸ್ ವಿದ್ಯಾರ್ಥಿ ಲಕ್ಷ್ಮಿಪುತ್ರ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಮಕ್ಕಳ ತಜ್ಞೆ ಡಾ.ಸ್ನೇಹ ಅವರನ್ನು ನಿಂದಿಸಿದ್ದಾರೆ ಎಂದು ದೂರಲಾಗಿದೆ.

ಈ ಸಂಬಂಧ ಡಾ.ಲಕ್ಷ್ಮಿಕಾಂತ ಅವರು ಬುಧವಾರ ಮಧ್ಯಾಹ್ನವೇ ದೂರು ನೀಡಿದ್ದು, ರಾತ್ರಿ ತಡವಾಗಿ ಎಫ್‌ಐಆರ್ ದಾಖಲಾಗಿದ್ದು, ಇದೀಗ ಮಹದೇವಸ್ವಾಮಿ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬುಧವಾರ ಇಡೀ ದಿನ ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸುವ ಯತ್ನವನ್ನು ಸಿಮ್ಸ್‌ನ ಕೆಲವು ವೈದ್ಯರು ಹಾಗೂ ಮುಖಂಡರು ಮಾಡಿದ್ದರು. ಆದರೆ, ಸ್ಥಾನಿಕ ವೈದ್ಯರು ಹಾಗೂ ವಿದ್ಯಾರ್ಥಿಗಳು ಪಟ್ಟು ಬಿಡದೇ ಇದ್ದಿದ್ದರಿಂದ, ಎಫ್‌ಐಆರ್ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಹುಲ್‌ಗಾಂಧಿ ನಡೆ ಖಂಡಿಸಿ ಬಿಜೆಪಿ ಪ್ರತಿಭಟನೆ

ಚಾಮರಾಜನಗರ, ಡಿ.21– ಸಂಸತ್‌ನಲ್ಲಿ ಅಸಭ್ಯ ವರ್ತನೆ ತೋರಿದ ಸಂಸದರನ್ನು ಅಮಾನತುಗೊಳಿಸಿದ ವಿಚಾರದಲ್ಲಿ ವಿಪಕ್ಷಗಳ ನಾಯಕರು ಹಾಗೂ ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ನಡೆ ಖಂಡಿಸಿ ನಗರದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ನಗರದ ಚಾಮರಾಜೇಶ್ವರ ಉದ್ಯಾನವನ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಹುಲ್ ಗಾಂಧಿ ಭಾವಚಿತ್ರ ಹಿಡಿದು ಕಾಂಗ್ರೆಸ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಭುವನೇಶ್ವರಿ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಪ್ರಣಯ್ ಮಾತನಾಡಿ, ಇತ್ತೀಚೆಗೆ ನಡೆದ 4 ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಮತದಾರರು ಬಿಜೆಪಿ ಪರ ಒಲವು ತೋರಿರುವುದರಿಂದ ಹತಾಶೆಗೊಂಡಿರುವ ವಿಪಕ್ಷ ನಾಯಕರು ಬಿಜೆಪಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ರೂಪಿಸಿರುವ ಷಡ್ಯಂತ್ರ ಎಂದರು.

ಸಂಸತ್ತಿನೊಳಗೆ ಅಪರಿಚಿತರು ಪ್ರವೇಶಿಸಿ ಹೊಗೆ ಬಾಂಬ್ ಸ್ಫೋಟಿಸಿರುವುದನ್ನೇ ನೆಪ ಮಾಡಿಕೊಂಡು ಚರ್ಚೆಗೂ ಅವಕಾಶ ಕೊಡದೇ ಉಪ ಸಭಾಪತಿಗಳಿಗೆ ಅಗೌರವ ತೋರಿ ನಿಯಮ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದರು.

ಅವಮಾನತುಗೊಂಡು ಹೊರಗೆ ಬಂದ ನಂತರ ವಿಪಕ್ಷದ ಸಂಸತ್ ಸದಸ್ಯರು ಉಪ ಸಭಾಪತಿ ಜಗದೀಪ್ ಧನಕರ್ ಅವರನ್ನು ಟಿಎಂಸಿ ಸಂಸದ ಕಲ್ಯಾಣ್ ಚಟರ್ಜಿ ಅವರು ಅಣಕಿಸಿದ್ದನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ನಗುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡೆ ತೀವ್ರ ಖಂಡನೀಯ. ಇದು ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನಕ್ಕೆ ಮಾಡಿದ ಅವಮಾನ ಎಂದರು. ಸಂಸತ್‌ನಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಪರಿಜ್ಞಾನ ನಿಮಗೆ ಇಲ್ಲ. ಇಂತಹ ವರ್ತನೆಗಳನ್ನು ದೇಶದ ಜನ ಕ್ಷಮಿಸುವುದಿಲ್ಲ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜನರು ನಿಮಗೆ ತಕ್ಕ ಪಾಠ ಕಲಿಸಲಿದ್ದಾರೆ. ಸಂಸದ ಕಲ್ಯಾಣ್ ಚಟರ್ಜಿ ಅವರನ್ನು ಸಂಸತ್‌ನಿಂದ ಉಚ್ಚಾಟಿಸಬೇಕು. ರಾಹುಲ್‌ಗಾಂಧಿ ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವಿರಾಟ್ ಶಿವು, ಸೂರ್ಯಕುಮಾರ್, ಆನಂದ್, ಭಗೀರಥ, ಮುಖಂಡರಾದ ನೂರೊಂದು ಶೆಟ್ಟಿ, ಶಾಂತಮೂರ್ತಿ, ಬಾಲಸುಬ್ರಹ್ಮಣ್ಯಂ, ಬಸವಣ್ಣ ಪ್ರಕಾಶ್, ಶಿವಣ್ಣ ಬುಲೆಟ್ ಚಂದ್ರು ಮಹದೇವಸ್ವಾಮಿ, ಮಂಜುನಾಥ್, ಮಹೇಶ್, ಪರಶಿವಮೂರ್ತಿ, ರಾಘವೇಂದ್ರ ಇತರರಿದ್ದರು.

ಮೂರನೇ ಪುಟದಿಂದ

ಪ್ರಧಾನಿ ಭೇಟಿಯಾದ ಗೌಡರ ಪರಿವಾರ

ಕಿವಿಮಾತುಗಳನ್ನು ಕುಮಾರಸ್ವಾಮಿ ಅವರಿಗೆ ನೀಡಿದ್ದಲ್ಲದೆ, ಆ ಪಕ್ಷ ಮತ್ತು ಸರ್ಕಾರದ ವಿರುದ್ಧ ಹೋರಾಟ ನಡೆಸಿ. ನಿಮ್ಮ ಹಿಂದೆ ನಾವು ಮತ್ತು ಪಕ್ಷ ಇರಲಿದೆ ಎಂದು ಅಭಯ ನೀಡಿದ್ದಾರೆ. ಜೆಡಿಎಸ್ ಕರ್ನಾಟಕದಲ್ಲಿ 4 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿರುವುದರಿಂದ ಮಹತ್ವದ ಚರ್ಚೆ ಯಾಗಿಲ್ಲ. ಆದರೆ, ಕ್ಷೇತ್ರ ಮತ್ತು ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಅವರು ಪ್ರಧಾನಿಗೆ ಮಾಹಿತಿ ನೀಡಿದ್ದಾರೆ. ಈ ಸಂದರ್ಭದಲ್ಲಿ ದೇವೇಗೌಡರು ಚುನಾವಣೆಗೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಿದ್ದನ್ನು ಹೊರತುಪಡಿಸಿದರೆ, ಉಳಿದೆಲ್ಲಾ ವಿಚಾರಗಳ ಬಗ್ಗೆ ಕುಮಾರಸ್ವಾಮಿ ಹಾಗೂ ಪ್ರಧಾನಿ ಅವರೇ ಹೆಚ್ಚು ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ. ಪ್ರಧಾನಿಯವರ ಭೇಟಿಯ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಕುಮಾರ ಸ್ವಾಮಿ, ರಾಜ್ಯ ರಾಜಕೀಯ ಪರಿಸ್ಥಿತಿಯ ಜತೆಗೆ ಕೊಬ್ಬರಿ ಖರೀದಿ, ಕಾಡುಗೊಲ್ಲ ಜಾತಿಗೆ ಮೀಸಲಾತಿ ಸೌಲಭ್ಯ ಹಾಗೂ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಮಾಜಿ ಪ್ರಧಾನಿಗಳು ಮೋದಿ ಅವರ ಜತೆ ಚರ್ಚೆ ನಡೆಸಿದರು. ನಮ್ಮ ಕುಟುಂಬದ ವತಿಯಿಂದ ಲೋಕಸಭಾ ಚುನಾವಣಾ ಕಣಕ್ಕೆ ಯಾರೂ ಇಳಿಯಬಾರದು ಎಂಬ ನಿಲುವು ತೆಗೆದುಕೊಂಡಿದ್ದೇವೆ. ನಾನಂತು ರಾಜ್ಯ ರಾಜಕೀಯದಲ್ಲೇ ಇರುತ್ತೇನೆ. ನನ್ನ ಪುತ್ರ ನಿಖಿಲ್ ಕುಮಾರಸ್ವಾಮಿ ಎರಡು ಬಾರಿ ಸೋತಿದ್ದಾರೆ. ಮತ್ತೆ ಸ್ಪರ್ಧಿಸಲು ಅವರಿಗೆ ಆಸಕ್ತಿ ಇಲ್ಲ. ಆದರೆ, ಮಂಡ್ಯದ ಮುಖಂಡರು ಹಾಗೂ ಕಾರ್ಯಕರ್ತರು ಒತ್ತಡ ಹೇರುತ್ತಿದ್ದಾರೆ ಎಂದರು.

ನಾವು ಎಲ್ಲಿ ಗೆಲ್ಲುತ್ತೇವೆ ಎಂಬ ರಿಪೋರ್ಟ್ ಇದೆ: ನಾವು ಎಷ್ಟು ಗೆಲ್ಲುತ್ತೇವೆ ಎನ್ನುವ ಕಡೆಯಷ್ಟೇ ನಾವು ಕೇಳುತ್ತೇವೆ. ನಾವು ಎಲ್ಲಿ ಗೆಲ್ಲುತ್ತೇವೆ ಎಂಬ ಬಗ್ಗೆ ನಮ್ಮ ಬಳಿ ರಿಪೋರ್ಟ್ ಇದೆ. ಆ ರಿಪೋರ್ಟ್ ಪ್ರಕಾರ ನಾವು ಕೆಲಸ ಮಾಡುತ್ತೇವೆ. ಇಲ್ಲಿ ಸೀಟ್ ಹಂಚಿಕೆ ಒಂದೇ ಪ್ರಮುಖ ಅಲ್ಲ, ನಾವು ಪರಸ್ಪರ ವಿಶ್ವಾಸ, ನಂಬಿಕೆಯಿಂದ ಕೆಲಸ ಮಾಡುತ್ತೇವೆ. ಮೂರನೇ ಅವಧಿಗೆ ನರೇಂದ್ರ ಮೋದಿ ಅವರು ಪ್ರಧಾನಿಯಾಗಲು ನಾವೆಲ್ಲಾ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದರು. ಲೋಕಸಭೆ ಚುನಾವಣೆಯ ನಂತರ ರಾಜ್ಯ ಕಾಂಗ್ರೆಸ್ ಸರ್ಕಾರ ಉರುಳುತ್ತಾ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕದ ರಾಜಕೀಯದಲ್ಲಿ ಶಿಂಧೆಯೂ ಇದ್ದಾರೆ, ಅಜಿತ್ ಪವಾರ್ ಸಹ ಇದ್ದಾರೆ. ಯಾರು ಮೊದಲು ಮುಂದೆ ಬರುತ್ತಾರೋ ಕಾದು ನೋಡಬೇಕು. ಸದ್ಯದ ಪರಿಸ್ಥಿತಿಯಲ್ಲಿ ಏನು ಬೇಕಾದರೂ ಆಗಬಹುದು ಎಂದು ಮಾರ್ಮಿಕವಾಗಿ ಉತ್ತರ ಕೊಟ್ಟರು.

ಮೈಸೂರಿನ ಸೂರಪ್ಪನ ವಿಚಾರಣೆ

ವ್ಯವಹಾರ ನಡೆದಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಗೂಗಲ್ ಪೇ, ಫೋನ್ ಪೇ, ಚೆಕ್ ಸೇರಿದಂತೆ ಆನ್ ಲೈನ್ ಮೂಲಕ ಮನೋರಂಜನ್ ಹಾಗೂ ಸೂರಪ್ಪ ಹಣ ಕೊಟ್ಟು ಪಡೆದಿದ್ದಾರೆ ಎನ್ನಲಾಗಿದೆ. ಮನೋರಂಜನ್ ಬಿಇ ವ್ಯಾಸಂಗ ಅಪೂರ್ಣಗೊಳಿಸಿದ್ದು, ಆದರೆ ಸೂರಪ್ಪ ಪಿಯುಸಿ ಕೂಡ ಓದಿರಲಿಲ್ಲ. ಆದರೆ ಸ್ನೇಹಿತನಾಗಿಯೂ ಯಾವತ್ತೂ ಗುರುತಿಸಿಕೊಳ್ಳದ ಸೂರಪ್ಪ, ಮನೋರಂಜನ್‌ಗೆ ಯಾವ ರೀತಿ ಪರಿಚಯವಾಗಿತ್ತು, ಯಾವ ಪ್ರಮಾಣದಲ್ಲಿ ಹಣಕಾಸು ವ್ಯವಹಾರ ನಡೆದಿತ್ತು ಎಂಬ ಬಹಳಷ್ಟು ಪ್ರಶ್ನೆಗಳು ಕುತೂಹಲಕ್ಕೆಡೆ ಮಾಡಿದೆ.

ಮನೋರಂಜನ್ ಮನೆಯಲ್ಲಿ ದೊರೆತಿರುವ ಹಲವು ಸಾಕ್ಷ್ಯಾಧಾರದ ಮೇಲೆ ಇಬ್ಬರು ದೆಹಲಿ ಪೊಲೀಸ್ ಅಧಿಕಾರಿಗಳು ಸಲೂನ್ ಒಳಗೇ ಸೂರಪ್ಪನನ್ನು ವಿಚಾರಣೆ ಮಾಡಿದ್ದಾರೆ. ಯಾವ ಕಾರಣಕ್ಕೆ ಮನೋರಂಜನ್ ಹಾಗೂ ನಿನ್ನ ನಡುವೆ ಲಕ್ಷಾಂತರ ರೂಪಾಯಿ ಹಣದ ವ್ಯವಹಾರ ನಡೆದಿದೆ. ಮನೋರಂಜನ್ ನಿನಗೆ ಹೇಗೆ ಪರಿಚಯ. ಮನೋರಂಜನ್ ಬಿಟ್ಟು ಬೇರೆ ಯಾರ ಜೊತೆ ನಿನಗೆ ಸಂಪರ್ಕವಿದೆ, ಮತ್ತೆ ಯಾರಿಗೆಲ್ಲಾ ಹಣ ಕೊಟ್ಟು ಪಡೆದಿದ್ದೀಯಾ, ಮನೋರಂಜನ್ ಜೊತೆ ನೀನು ಕೂಡ ದೆಹಲಿಗೆ ಹೋಗಿದ್ದೀಯಾ ಎಂಬಿವೆ ಪ್ರಶ್ನೆಗಳನ್ನು ಸೂರಪ್ಪಗೆ ಕೇಳಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಆರಂಭವಾದ ವಿಚಾರಣೆ ರಾತ್ರಿ ತನಕ ನಿರಂತರವಾಗಿ ನಡೆಯಿತು.

ದೆಹಲಿಯ ನಾಲ್ವರು ಪೊಲೀಸ್ ಅಧಿಕಾರಿಗಳ ತಂಡ ಒಂದೆಡೆ ಮನೋರಂಜನ್ ಮನೆಯಲ್ಲಿ ತಲಾಶ್ ಮಾಡುತ್ತಿದ್ದರೆ, ಇಬ್ಬರು ಪೊಲೀಸ್ ಅಧಿಕಾರಿಗಳು ಕಳೆದ ಎರಡು ದಿನದಿಂದ ಇದೇ ಸಲೂನ್‌ನಲ್ಲಿ ಸೂರಪ್ಪನನ್ನು ವಿಚಾರಣೆ ಮಾಡುತ್ತಿದ್ದರು. ಆದರೆ ಎರಡು ದಿನದಿಂದ ರಹಸ್ಯವಾಗಿ ನಡೆಯುತ್ತಿದ್ದ ವಿಚಾರಣೆ ಬಹಿರಂಗಗೊಂಡಿರಲಿಲ್ಲ.

'ಮೈಸೂರು ಮಿತ್ರ'ನ ನಿನ್ನೆಯ ಸಂಚಿಕೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳು ಬೇರೆ ಸಾಕ್ಷ್ಯಗಳನ್ನು ಕಲೆ ಹಾಕುವ ನಿಟ್ಟಿನಲ್ಲಿ ರಹಸ್ಯ ತನಿಖೆ ನಡೆಸುತ್ತಿದ್ದಾರೆ ಎಂದು ವರದಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಮನೋರಂಜನ್ ಜೊತೆ ಸಂಪರ್ಕದಲ್ಲಿದ್ದ ಬಾಗಲಕೋಟೆಯ ಟೆಕ್ಕಿ ಸಾಯಿಕೃಷ್ಣನನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದು ನಿನ್ನೆ ದೆಹಲಿಗೆ ಕರೆದೊಯ್ದಿದ್ದರು. ಈಗ ಮನೋರಂಜನ್ ಜೊತೆ ಹಣಕಾಸು ವ್ಯವಹಾರ ನಡೆಸಿರುವ ಸೂರಪ್ಪನನ್ನು ವಿಚಾರಣೆ ಮಾಡುತ್ತಿದ್ದಾರೆ.

ಪ್ರಧಾನಿ ಮೋದಿ ಭೇಟಿಯಾದ ವಿಜಯೇಂದ್ರ

ಬಾಲಕೃಷ್ಣ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು. ಇದರ ಬೆನ್ನಲ್ಲೇ ವಿಜಯೇಂದ್ರ ಅವರು ಪ್ರಧಾನಿಯನ್ನು ಭೇಟಿ ಮಾಡಿದ್ದು, ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಪ್ರಧಾನಿ ಮೋದಿ ಭೇಟಿ ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ ಫೋಟೋ ಹಂಚಿಕೊಂಡಿರುವ ವಿಜಯೇಂದ್ರ, ರಾಜ್ಯಾಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಂದು ಭೇಟಿಯಾಗಿ ಆಶೀರ್ವಾದ ಪಡೆದ ಸಂದರ್ಭ. ಸಂತ ತೇಜಸ್ಸಿನ ಭಾರತಾಂಬೆಯ ಮಹಾನ್ ಸುಪುತ್ರನ ದರ್ಶನ ಪಡೆದ ಅನುಭವವಾಯಿತು ಎಂದು ಬರೆದುಕೊಂಡಿದ್ದಾರೆ. 2024ರ ಮಹಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಅತೀ ಹೆಚ್ಚು ಲೋಕಸಭಾ ಸ್ಥಾನಗಳನ್ನು ಮೋದಿ ಅವರ ಮಡಿಲಿಗೆ ಸಮರ್ಪಿಸಬೇಕೆಂಬ ನನ್ನ ಹೆಗ್ಗುರಿಯ ಹೆಜ್ಜೆಗೆ ಇಂದಿನ ಭೇಟಿಯ ಅವರ ಪ್ರೇರಣೆಯ ಮಾತುಗಳು ನನ್ನಲ್ಲಿ ಅದಮ್ಯ ಆತ್ಮ ವಿಶ್ವಾಸ ಮೂಡಿಸಿದೆ ಎಂದು ವಿಜಯೇಂದ್ರ ಅವರು ಹೇಳಿದ್ದಾರೆ.

ಜ.12, ಯುವನಿಧಿ ಯೋಜನೆ ಜಾರಿ

2023–24ನೇ ಸಾಲಿಗೆ ನಿರುದ್ಯೋಗ ಭತ್ಯೆ ನೀಡಲು 250 ಕೋಟಿ ರೂ. ಅನುದಾನ ಹಂಚಿಕೆ ಮಾಡಲಾಗಿದೆ ಎಂದರು. ಸಂಬಂಧಪಟ್ಟ ಶೈಕ್ಷಣಿಕ ಫಲಿತಾಂಶ ಪ್ರಕಟವಾದ 180 ದಿನಗಳು ಪೂರ್ಣಗೊಂಡ ನಂತರವೂ ನಿರುದ್ಯೋಗಿಯಾಗಿರುವ ಪದವೀಧರ ಅಭ್ಯರ್ಥಿ ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು 2 ವರ್ಷದವರೆಗೆ ಅಥವಾ ಉದ್ಯೋಗ ದೊರಕುವವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ ಪಡೆಯಲು ಅರ್ಹರಾಗಿರುತ್ತಾರೆ ಎಂದರು. ಆಸಕ್ತರು ಸೇವಾಸಿಂಧು ಜಾಲತಾಣಕ್ಕೆ ಲಾಗಿನ್ ಆಗಿ ಅರ್ಜಿ ಸಲ್ಲಿಸಬೇಕು, ಈಗಾಗಲೇ ಪದವಿ/ ಡಿಪ್ಲೋಮಾ ತೇರ್ಗಡೆಯಾದ ಅಭ್ಯರ್ಥಿಗಳ ಶೈಕ್ಷಣಿಕ ಪ್ರಮಾಣಪತ್ರಗಳನ್ನು ಖಚಿತಪಡಿಸಿಕೊಳ್ಳಲು ಪದವಿ/ ಡಿಪ್ಲೋಮಾ ಪ್ರಮಾಣಪತ್ರದಲ್ಲಿ ನೀಡಿರುವ ನೋಂದಣಿ ಸಂಖ್ಯೆಯನ್ನು ದಾಖಲಿಸಿ ಪರಿಶೀಲಿಸಿಕೊಳ್ಳಬಹುದು. ಇದಕ್ಕೆ ಪೂರಕವಾಗಿ ಸೇವಾಸಿಂಧು ಮುಖಪುಟದಲ್ಲಿ ಲಿಂಕ್ ನೀಡಲಾಗಿದೆ. ಯುವನಿಧಿ ಯೋಜನೆಗೆ ಅರ್ಜಿಗಳನ್ನು ಕರ್ನಾಟಕ–ಓನ್, ಬಾಪೂಜಿ ಸೇವಾ ಕೇಂದ್ರಗಳು, ಗ್ರಾಮ–ಓನ್ ಕೇಂದ್ರಗಳಲ್ಲಿ ಸಲ್ಲಿಸಬಹುದಾಗಿದೆ.

ಅರ್ಜಿ ಸಮರ್ಪಕವಾಗಿ ಸಲ್ಲಿಸಿದ ನಂತರ ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ಅರ್ಜಿ ಸ್ವೀಕೃತವಾದ ಬಗ್ಗೆ ಸಂದೇಶ ಬರುತ್ತದೆ ಎಂದರು.

ಆದರೆ ಎಚ್ಚರಿಕೆ ವಹಿಸಿ

ಸಂಪುಟದ ಉಪಸಮಿತಿ ರಚಿಸಲಾಗುವುದು. ತಜ್ಞರ ಸಮಿತಿ ನೀಡುವ ವರದಿ ಆಧರಿಸಿ ಉಪಸಮಿತಿ ಕಾಲಾನು ಕಾಲಕ್ಕೆ ಸಭೆ ನಡೆಸಿ ತೀರ್ಮಾನಗಳನ್ನು ಕೈಗೊಳ್ಳಲಿದೆ. ಹೊಸ ಉಪತಳಿ ಪ್ರಕರಣ ಗಳು ರಾಜ್ಯದಲ್ಲಿ 92 ಪತ್ತೆಯಾಗಿದೆ, ಬೆಂಗ ಳೂರಿನಲ್ಲಿ 80 ಪತ್ತೆಯಾಗಿದ್ದು 20 ಮಂದಿ ಮಾತ್ರ ಆಸ್ಪತ್ರೆಯಲ್ಲಿದ್ದಾರೆ, ಉಳಿದವರು ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ, 20 ರಲ್ಲಿ 7 ಮಂದಿ ಐಸಿಯುನಲ್ಲಿದ್ದಾರೆ, ಇವರಿಗೆ ಇತರೆ ಆರೋಗ್ಯ ಸಮಸ್ಯೆಗಳಿರುವ ಕಾರಣಕ್ಕೆ ಹೆಚ್ಚಿನ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರತಿದಿನ 5,000 ಟೆಸ್ಟ್‌ಗಳನ್ನು ನಡೆಸಲಾಗುತ್ತದೆ, ಬೆಂಗಳೂರಲ್ಲಿ ಒಂದು ಸಾವಿರ ಪರೀಕ್ಷೆ ನಡೆಸಲಾಗುತ್ತಿದ್ದು, ಗಡಿ ಜಿಲ್ಲೆಗಳಲ್ಲಿ ಹೆಚ್ಚೆಚ್ಚು ಪರೀಕ್ಷೆ ನಡೆಸಬೇಕೆಂದು ಆದೇಶಿಸಲಾಗಿದೆ.

ಸದ್ಯ ರಾಜ್ಯದಲ್ಲಿ 60 ವರ್ಷ ಕೆಳಗಿನವರಿಗೆ ಮಾಸ್ಕ್ ಕಡ್ಡಾಯವಿಲ್ಲ. ಜನಸಂದಣಿಗೆ ಹೋಗುವವರು ಮಾಸ್ಕ್ ಧರಿಸಿದರೆ ಒಳ್ಳೆಯದು. ಡೆಡಿಕೇಟೆಡ್ ಆಸ್ಪತ್ರೆಗಳಲ್ಲಿ ಸಕಲ ಸಿದ್ಧತೆ ಇರುತ್ತವೆ, ಎಲ್ಲಾ ಜಿಲ್ಲೆಗಳಲ್ಲೂ ಆಕ್ಸಿಜನ್, ಬೆಡ್, ವೆಂಟಿಲೇಟರ್ ಸೇರಿ ಕೋವಿಡ್ ಸಂಬಂಧಿತ ಎಲ್ಲವನ್ನೂ ವ್ಯವಸ್ಥೆ ಮಾಡಿಕೊಳ್ಳಬೇಕು, ಲಸಿಕೆಗಳನ್ನು ಸಿದ್ಧವಿಟ್ಟುಕೊಳ್ಳಲು ಸೂಚಿಸಲಾಗಿದೆ. ಕೇರಳದಲ್ಲಿ ಪರೀಕ್ಷೆ ಹೆಚ್ಚು, ಆದ್ದರಿಂದ ಪ್ರಮಾಣ ಕೂಡ ಹೆಚ್ಚಿದೆ, ಇಲ್ಲಿ ಪರೀಕ್ಷೆಗಳು ಹೆಚ್ಚಾದಂತೆ ಪತ್ತೆ ಪ್ರಮಾಣವೂ ಹೆಚ್ಚಾಗುವ ಸಾಧ್ಯತೆ ಇದೆ. ಕೋವಿಡ್ ನಿರ್ವಹಣೆಗೆ ಹಣಕಾಸಿನ ಕೊರತೆ ಇಲ್ಲ, ಪರಿಸ್ಥಿತಿ ನೋಡಿಕೊಂಡು ಡೆಡಿಕೇಟೆಡ್ ಆಸ್ಪತ್ರೆಗಳನ್ನು ನಿಗದಿ ಮಾಡುತ್ತೇವೆ ಎಂದರು.

ಡಿಸಿ ಡಾ.ಕೆ.ವಿ.ರಾಜೇಂದ್ರ ಭೇಟಿ

ಪ್ರದೇಶ ವ್ಯಾಪ್ತಿಯ ಬಾವಲಿ ಚೆಕ್‌ಪೋಸ್ಟ್ ಕರ್ನಾಟಕ–ಕೇರಳ ಗಡಿಯಾಗಿದ್ದು, ಪ್ರತಿದಿನ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸಲಿವೆ. ಈಗಾಗಲೇ ಹೆಚ್.ಡಿ.ಕೋಟೆ ತಾಲೂಕು ಆರೋಗ್ಯ ಇಲಾಖೆ ವತಿಯಿಂದ ಗಡಿಯಲ್ಲಿ ಆರೋಗ್ಯ ತಪಾಸಣಾ ಕೇಂದ್ರ ಸ್ಥಾಪಿಸಲಾಗಿದ್ದು, ಕೇರಳದಿಂದ ಕರ್ನಾಟಕ ಪ್ರವೇಶಿಸುವ ವಾಹನಗಳ ಪ್ರಯಾಣಿಕರಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಕಾರ್ಯಕರ್ತರ ಕಾರ್ಯ ವೈಖರಿ ಪರಿಶೀಲಿಸಲು ಸ್ಥಳಕ್ಕೆ ತೆರಳಿದ್ದ ಡಿಸಿ ಡಾ.ಕೆ.ವಿ.ರಾಜೇಂದ್ರ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಅವರಿಂದ ಮಾಹಿತಿ ಪಡೆದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕಾಡಂಚಿನ ಹಾಡಿಗಳಲ್ಲಿ ನೆಲೆಸಿರುವ ಜನ ವಿವಿಧ ಚಟುವಟಿಕೆ, ಕೆಲಸ ಸೇರಿದಂತೆ ಕೆಲ ಕಾರಣದಿಂದ ಕೇರಳಕ್ಕೆ ಹೋಗಿ ಬರುವವರನ್ನು ಗುರುತಿಸಿ, ಅವರಲ್ಲಿ ಜಾಗೃತಿ ಮೂಡಿಸಬೇಕು. ಕೇರಳಕ್ಕೆ ಹೋಗಿ ಬಂದವರಲ್ಲಿ ಅನಾರೋಗ್ಯದ ಸಮಸ್ಯೆ ಕಾಣಿಸಿಕೊಂಡರೆ ತಪಾಸಣೆ ಮಾಡಿಸಿಕೊಳ್ಳುವಂತೆ ಹಾಗೂ ಪ್ರತ್ಯೇಕವಾಗಿರುವಂತೆ ಜಾಗೃತಿ ಮೂಡಿಸಬೇಕು. ಚೆಕ್‌ಪೋಸ್ಟ್‌ನಲ್ಲಿ ಕಟ್ಟುನಿಟ್ಟಾಗಿ ತಪಾಸಣೆ ಮಾಡಬೇಕು ಎಂದು ಸಲಹೆ ನೀಡಿದರು.

ಸೆಂಟ್ ಫಿಲೋಮಿನಾ ಚರ್ಚ್‌ನಲ್ಲಿ ಕ್ರಿಸ್‌ಮಸ್ ಕಾರ್ನಿವಲ್ ಆರಂಭ

- ಮೂರು ದಿನ ಅದ್ದೂರಿಯಾಗಿ ನಡೆಯುವ ಧಾರ್ಮಿಕ ಉತ್ಸವ
- ಜೆರುಸಲೆಂ, ಬೆತ್ಲೆಹೆಂ, ಜುದೆಯಾ ಚಿತ್ರಣ
- ಭಕ್ತಿ ಭಾವ ಸಾರುವ ಗೋದಳಿ
- ಮಕ್ಕಳಿಗಾಗಿ ಕಿಡ್ಸ್ ಕಾರ್ನರ್
- ಹಿಮದಿಂದ ಆವೃತ್ತವಾದ ಸನ್ನಿವೇಶ ಸೃಷ್ಟಿ





ಮೈಸೂರು, ಡಿ.21(ಬಿಎಲ್‌ಯು)– ಕ್ರಿಸ್‌ಮಸ್ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ಪ್ರಖ್ಯಾತ ಸೆಂಟ್ ಫಿಲೋಮಿನಾ ಚರ್ಚ್‌ನಲ್ಲಿ ವಿನೋದ, ಉಲ್ಲಾಸ ಹಾಗೂ ರೋಮಾಂಚನಕಾರಿ ಅನುಭವ ನೀಡುವ ಕ್ರಿಸ್‌ಮಸ್ ಕಾರ್ನಿವಲ್ ಇಂದಿನಿಂದ ಅದ್ದೂರಿಯಾಗಿ ಆರಂಭಗೊಂಡಿದೆ.

ಇಂದಿನಿಂದ ಡಿಸೆಂಬರ್ 23ರವರೆಗೆ ಮೂರು ದಿನಗಳ ಕಾಲ ನಡೆಯುವ ಕ್ರಿಸ್‌ಮಸ್ ಕಾರ್ನಿವಲ್‌ನಲ್ಲಿ ಮನೋರಂಜನಾತ್ಮಕ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜಾತಿ, ಧರ್ಮ ಭೇದ–ಭಾವವಿಲ್ಲದೆ ಸ್ಥಳೀಯರು ಸೇರಿದಂತೆ ಪ್ರವಾಸಿಗರನ್ನು ಕ್ರಿಸ್‌ಮಸ್ ಕಾರ್ನಿವಲ್ ಕೈಬೀಸಿ ಕರೆಯುತ್ತಿದೆ.

ಪ್ರತಿ ವರ್ಷವೂ ಕ್ರಿಸ್‌ಮಸ್ ಕಾರ್ನಿವಲ್ ಆಯೋಜಿಸಲಾಗುತ್ತದೆ. ಆದರೆ ಕೊರೊನಾ ಹಿನ್ನೆಲೆಯಲ್ಲಿ 2020, 2021 ಹಾಗೂ 2022ರಲ್ಲಿ ರದ್ದು ಮಾಡಲಾಗಿತ್ತು ಆದರೆ ಈ ಬಾರಿ ಮೈಸೂರಿನಲ್ಲಿ ಕೊರೊನಾ ಸೋಂಕಿನ ಪ್ರಕರಣ ಬಾಧಿಸದ ಹಿನ್ನೆಲೆಯಲ್ಲಿ ಯಾವುದೇ ತೊಂದರೆ ಆಗುವುದಿಲ್ಲ ಎಂಬ ವಿಶ್ವಾಸದೊಂದಿಗೆ ಕ್ರಿಸ್‌ಮಸ್ ಕಾರ್ನಿವಲ್ ಅನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಸೆಂಟ್ ಫಿಲೋಮಿನಾ ಚರ್ಚ್‌ನ ಆವರಣದಲ್ಲಿ ಕ್ರಿಸ್‌ಮಸ್ ಕಾರ್ನಿವಲ್‌ಗಾಗಿ ಹಲವು ಅಂಗಡಿಗಳನ್ನು ತೆರೆಯಲಾಗಿದೆ. ವಿವಿಧ ರೀತಿಯ ಕೇಕ್‌ಗಳು, ತಿಂಡಿ–ತಿನಿಸುಗಳು, ಕ್ರಿಸ್‌ಮಸ್‌ಗೆ ಸಂಬಂಧಿಸಿದ ಅಲಂಕಾರಿಕ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮಕ್ಕಳನ್ನು ಆಕರ್ಷಿಸುವ ಹಲವು ಆಟಿಕೆಗಳಿರುವ ಕಿಡ್ಸ್ ಕಾರ್ನರ್ ಕೂಡ ನಿರ್ಮಾಣ ಮಾಡಲಾಗಿದೆ.

ಜೆರುಸಲೆಂ ಮಹಾಕೋಟೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. 40 ಅಡಿ ಎತ್ತರವಿರುವ ಮಾರ್ಬಲ್ ಪಿಲ್ಲರ್, ಚಿನ್ನದ ದ್ವಾರದಿಂದ ಸಿಂಗಾರಗೊಂಡಿರುವ ಮಹಾ ಕೋಟೆಯನ್ನು ಸೊಗಸಾಗಿ ಚಿತ್ರಿಸಲಾಗಿದೆ. ಇಸ್ರೇಲ್ ಜನಾಂಗದ ಮರಳುಗಾಡು, ಯೇಸು ಕ್ರಿಸ್ತ ದೀಕ್ಷೆ ಪಡೆದ ನೈಲ್ ನದಿ, ಬೆತ್ಲೆಯಮ್‌ನ ಪುಟ್ಟ ಗ್ರಾಮದಲ್ಲಿ ಯೇಸು ಕ್ರಿಸ್ತ ಜನಿಸಿದ ಗೋದಳಿ ನಿರ್ಮಾಣ ಮಾಡಲಾಗಿದೆ. ಈ ಮೂಲಕ ಯೇಸು ಜನ್ಮ ಸ್ಥಳದ ಐತಿಹಾಸಿಕ ಹಾಗೂ ಪ್ರಾಕೃತಿಕ ಸನ್ನಿವೇಶವನ್ನು ಕಣ್ಮುಂದೆ ತರಲಾಗಿದೆ.

ಗಗನಚುಂಬಿ ಕಟ್ಟಡಗಳಲ್ಲಿ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿರುವ ಈಗಿನ ಜೆರುಸಲೆಂ ನಗರದ ಕಣ್ಮನ ಸೆಳೆಯುವ ದೃಶ್ಯವನ್ನು ಚಿತ್ರಿಸಲಾಗಿದೆ. ಅಂದು ಕೋಟೆಯಿಂದ ಆವೃತವಾದ ಐತಿಹಾಸಿಕ ಜೆರುಸಲೆಂ ನಗರ ಹೇಗಿತ್ತು, ಆಧುನಿಕತೆಯಲ್ಲಿ ಈಗ ಯಾವ ರೀತಿ ರೂಪುಗೊಂಡಿದೆ ಎಂದು ಅರ್ಥಪೂರ್ಣವಾಗಿ ವರ್ಣಿಸಲಾಗಿದೆ.

ಕ್ರಿಸ್‌ಮಸ್ ಹಬ್ಬದ ಸಂಭ್ರಮದಲ್ಲಿ ಸೆಂಟ್ ಫಿಲೋಮಿನಾ ಚರ್ಚ್‌ಗೆ ಭೇಟಿ ನೀಡಿ ಕಾರ್ನಿವಲ್‌ನಲ್ಲಿ ಭಾಗಿಯಾದರೆ ವಿಶಿಷ್ಟ ಅನುಭವವಾಗುತ್ತದೆ. ಚರ್ಚ್ ಒಳಗೆ ದೇವರಿಗೆ ಪ್ರಾರ್ಥನೆ ಸಲ್ಲಿಸಿದ ನಂತರ ಶಾಪಿಂಗ್ ಮಾಡಬಹುದು. ತರುವಾಯ ಹಲವು ಮನೋರಂಜನಾ ಕಾರ್ಯಕ್ರಮ ವೀಕ್ಷಣೆ ಮಾಡಬಹುದು. ನಂತರ ಜೆರುಸಲೆಂ, ಬೆತ್ಲೆಹೆಂ, ಜುದೆಯಾ ಪ್ರಾಂತ್ಯದ ಚಿತ್ರಣವನ್ನು ವೀಕ್ಷಿಸಬಹುದು. ಈ ಮೂಲಕ ಕಾರ್ನಿವಲ್ ಕ್ರಿಸ್‌ಮಸ್ ಹಬ್ಬದ ಸಂಭ್ರಮವನ್ನು ಅರ್ಧ ದಿನ ಕಳೆಯಬಹುದು.

ಐರೋಪ್ಯ ರಾಷ್ಟ್ರಗಳಲ್ಲಿ ಡಿಸೆಂಬರ್ ತಿಂಗಳ ಚಳಿಗಾಲ ಆರಂಭವಾಯಿತು ಎಂದರೆ ಕ್ರಿಸ್‌ಮಸ್ ಹಬ್ಬದ ಆರಂಭ ಎಂದೇ ಅರ್ಥ. ಈ ಹಿನ್ನೆಲೆ ಹಿಮದಿಂದ ಆವೃತವಾಗಿರುವ ಬೆಟ್ಟ–ಗುಡ್ಡಗಳು, ಚರ್ಚ್‌ಗಳು, ಪಾರಂಪರಿಕ ಕಟ್ಟಡಗಳಿರುವ ಸನ್ನಿವೇಶವನ್ನು ಸೃಷ್ಟಿಸಲಾಗಿದೆ. ಅದರಲ್ಲೂ ಜುದೆಯಾ ಪ್ರಾಂತ್ಯದ ಚಿತ್ರಣವನ್ನು ಆಕರ್ಷಕವಾಗಿ ನಿರ್ಮಾಣ ಮಾಡಲಾಗಿದೆ.

ಕ್ರಿಸ್‌ಮಸ್ ಆಧ್ಯಾತ್ಮಿಕ ಕಾರ್ಯಕ್ರಮಕ್ಕೆ ಸಿದ್ಧತೆ

ಕ್ರಿಸ್‌ಮಸ್ ಹಬ್ಬಕ್ಕಾಗಿ ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್‌ನಲ್ಲಿ ಆಧ್ಯಾತ್ಮಿಕವಾಗಿ ನಡೆಸುವ ಕಾರ್ಯಕ್ರಮಗಳಿಗಾಗಿ ಸಿದ್ಧತೆಗಳು ಭರದಿಂದ ಸಾಗಿದೆ.

ಚರ್ಚ್‌ಗೆ ಪ್ರಖರವಾದ ಬಣ್ಣ ಬಣ್ಣದ ವಿದ್ಯುತ್ ಬೆಳಕಿನ ಸೊಬಗು ನೀಡಲು ತಯಾರಿ ಮಾಡಲಾಗಿದೆ. ಕ್ರಿಸ್‌ಮಸ್ ಹಿಂದಿನ ದಿನವಾದ ಡಿಸೆಂಬರ್ 24 ರಂದು ರಾತ್ರಿ ನಡೆಸುವ ಭಕ್ತಿ ಗಾಯನ, ಬಲಿ ಪೂಜೆ, ಗೋದಳಿಯಲ್ಲಿ ಬಾಲ ಯೇಸುವಿನ ಪ್ರತಿಷ್ಠಾಪನೆ ಸೇರಿದಂತೆ ಇತರೆ ಕಾರ್ಯಕ್ರಮಗಳಿಗೆ ತಯಾರಿ ಮಾಡಿಕೊಳ್ಳಲಾಗುತ್ತಿದೆ.

ಡಿಸೆಂಬರ್ 24 ರಂದು ರಾತ್ರಿ 10.30 ರಿಂದ 11.30 ಗಂಟೆವರೆಗೆ ಭಕ್ತಿ ಗಾಯನ, 11.30 ರಿಂದ 1.55 ಗಂಟೆ ತನಕ ಬಲಿ ಪೂಜೆ ನೆರವೇರಿಸಲಾಗುವುದು. ಸರಿಯಾಗಿ 12 ಗಂಟೆಗೆ ಬಾಲ ಯೇಸುವನ್ನು ಮೆರವಣಿಗೆ ಮೂಲಕ ಗೋದಳಿಯಲ್ಲಿ ಪ್ರತಿಷ್ಠಾಪನೆ ಮಾಡಲಾಗುವುದು ಎಂದು ಧರ್ಮಕೇಂದ್ರದ ಗುರು ಸ್ಟ್ಯಾನಿ ಅಲ್ಮೆಡಾ ತಿಳಿಸಿದರು.

ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಿಗೂ ನಿಗಮ ಮಂಡಳಿಗಳಲ್ಲಿ ಅವಕಾಶ ಕಲ್ಪಿಸಿ

ಮಾಜಿ ಕಾರ್ಪೊರೇಟರ್ ಎನ್.ಧ್ರುವರಾಜ್ ಸಿಎಂ, ಡಿಸಿಎಂಗೆ ಮನವಿ



ಮೈಸೂರು, ಡಿ.21(ಜಿಎ)–ಶಾಸಕರ ಜೊತೆಗೆ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಗಣನೆಗೆ ತೆಗೆದುಕೊಂಡು ಅವರಿಗೂ ನಿಗಮ ಮಂಡಳಿಗಳಲ್ಲಿ ಸ್ಥಾನ ನೀಡಬೇಕು ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎನ್.ಧ್ರುವರಾಜ್ ಪಕ್ಷದ ನಾಯಕರಲ್ಲಿ ಮನವಿ ಮಾಡಿದರು.

ಮೈಸೂರಿನ ಗಾಯತ್ರಿಪುರಂನಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರಿಗೆ ನಿಗಮ ಮಂಡಳಿ ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ, ಈಗ ಏನು 30 ಶಾಸಕರಿಗೆ ವಿವಿಧ ನಿಗಮಮಂಡಳಿಗಳಿಗೆ ನೇಮಕ ಮಾಡಲು ಮುಂದಾಗಿರುವಂತೆ 25 ಮಂದಿ ಕಾರ್ಯಕರ್ತರಿಗೂ ನಿಗಮಮಂಡಳಿಗಳಲ್ಲಿ ಸ್ಥಾನ ನೀಡಿ ಎಂದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಕಾರ್ಯಕರ್ತರ ಶ್ರಮ ಮುಖ್ಯ, ಚುನಾವಣೆ ಸಂದರ್ಭದಲ್ಲಿ ನಿಷ್ಠಾವಂತ ಕಾರ್ಯಕರ್ತರು ಯಾವ ಅಪೇಕ್ಷೆ ಪಡದೆ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಾಮಾಣಿಕವಾಗಿ ದುಡಿದಿದ್ದಾರೆ. ಆ ದುಡಿಮೆ ಕೂಲಿ ಕೊಡಿ ಎಂದಷ್ಟೇ ರಾಜ್ಯ ಎಲ್ಲಾ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಪರವಾಗಿ ಒತ್ತಾಯ ಮಾಡುತ್ತಿದ್ದೇನೆ ಎಂದರು.

ಶಾಸಕರಿಗೆ ಸಾಂವಿಧಾನಿಕ ಸ್ಥಾನಮಾನ ಇದೆ. ಅವರಿಗೆ ಮತ್ತೊಂದು ಜವಾಬ್ದಾರಿ ಕೊಟ್ಟು ಎಲ್ಲಾ ಅಧಿಕಾರವನ್ನು ಅವರಿಗೆ ನೀಡುವುದು ಎಷ್ಟು ಸರಿ? ಶಾಸಕರ ಗೆಲುವಿಗೆ ಸಹಕರಿಸಿದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೂ ಅಧಿಕಾರ ಬೇಕು ಎಂಬ ಆಸೆ ಆಕಾಂಕ್ಷೆ ಇರುವುದಿಲ್ಲವೇ? ಯಾವುದೇ ಚುನಾವಣೆ ಬಂದರೂ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರಾಮಾಣಿಕ ಕೆಲಸ ಮಾಡಿರುತ್ತಾರೆ. ಅಂತಹವರನ್ನು ಗುರುತಿಸಿ ಅಧಿಕಾರ ನೀಡಿ, ನಾನು ಸಹ ನಿಗಮ ಮಂಡಳಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದೇನೆ. ಇಂತಹದೆ ನಿಗಮ ಮಂಡಳಿ ಬೇಕೆಂದು ಕೇಳಲ್ಲ. ಪಕ್ಷ ಯಾವುದೇ ಸ್ಥಾನ ನೀಡಿದರು ನಿಭಾಯಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಲ್ಲಿ ಮನವಿ ಮಾಡಿದರು.

ಶಾಸಕ ತನ್ವೀರ್ ಸೇಠ್ ಅವರು ಸತತ ಆರು ಬಾರಿ ಚುನಾವಣೆಯಲ್ಲಿ ಗೆದ್ದಿದ್ದು, ಸೋಲಿಲ್ಲದ ಸರದಾರರಾಗಿ ಜನರ ಪ್ರೀತಿ ವಿಶ್ವಾಸ ಪಡೆದು ಉತ್ತಮ ಕೆಲಸ ಮಾಡಿದ್ದಾರೆ. ಅವರಿಗೆ ಸಚಿವ ಸ್ಥಾನ ಅಲ್ಲ. ಡಿಸಿಎಂ ಸ್ಥಾನ ನೀಡಿ ಎಂದ ಅವರು, ಕಾಂಗ್ರೆಸ್‌ನಲ್ಲಿ ಬಿ.ಕೆ.ಹರಿಪ್ರಸಾದ್ ಕಡೆಗಣನೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಬಿ.ಕೆ.ಹರಿಪ್ರಸಾದ್ ಅವರ ರಕ್ತದಲ್ಲಿಯೇ ಕಾಂಗ್ರೆಸ್ ಇದೆ ಯಾವುದೇ ಕಾರಣಕ್ಕೂ ಬಿಜೆಪಿಗೆ ಹೋಗಲ್ಲ. ಪಕ್ಷ ಬಿ.ಕೆ.ಹರಿಪ್ರಸಾದ್‌ರಿಗೂ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದರು.



ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಶ್ರೀ ಬಸವೇಶ್ವರ ವೀರಗಾಸೆ ಜಾನಪದ ತಂಡ ದ್ವಿತೀಯ ಸ್ಥಾನ ಪಡೆದಿದ್ದು, ತಂಡದ ಮುಖ್ಯಸ್ಥ ಅಂಬಳೆ ಶಿವಣ್ಣ ಅವರಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಬಹುಮಾನ ವಿತರಿಸಿದರು. ಕೆ.ಆರ್.ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೆಚ್.ವಿ.ಭಾಸ್ಕರ್ ಚಿತ್ರದಲ್ಲಿದ್ದಾರೆ.

ಮುಡಾ ಬಡಾವಣೆಗಳು ಗ್ರಾಪಂ ವ್ಯಾಪ್ತಿಗೆ

ಖಾತೆ, ಕಂದಾಯ, ನಕ್ಷೆಗಳು ಸಿಗದೆ ಮಾಲೀಕರ ಪರದಾಟ

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆರೋಪ



ಮೈಸೂರು, ಡಿ.21(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು ರಿಂಗ್ ರಸ್ತೆಯ ಹೊರವಲಯದಲ್ಲಿರುವ ಹಲವಾರು ಬಡಾವಣೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಿರುವುದರಿಂದ ಖಾತೆ, ಕಂದಾಯ, ನಕ್ಷೆಗಳು ಸಿದ್ಧವಾಗದೇ ನಿವೇಶನ ಮಾಲೀಕರು ಮತ್ತು ಖರೀದಿದಾರರು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಬೇಸರ ವ್ಯಕ್ತಪಡಿಸಿದ್ದಾರೆ.


ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದ ಏಕಾಏಕಿ ಈ ನಿರ್ಧಾರದಿಂದಾಗಿ ಸರ್ಕಾರದ ಬೊಕ್ಕಸಕ್ಕೂ ನಷ್ಟವಾಗುತ್ತಿದೆ. ತಾನು ಎಸಗಿರುವ ಲೋಪಗಳನ್ನು ಪಂಚಾಯಿತಿಗಳಿಗೆ ಹೊರಿಸುವ ಮುಡಾದ ಹುನ್ನಾರ ಇದಾಗಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಅವರು ಈ ಬಗ್ಗೆ ಗಮನ ಹರಿಸಿ ಮುಡಾ ಹಾಗೂ ಜಿಲ್ಲಾಧಿಕಾರಿಗಳ ಈ ಆದೇಶ ರದ್ದು ಪಡಿಸಬೇಕೆಂದು ಕೋರಿದರು.

ಈ ರೀತಿಯ ವರ್ಗಾವಣೆ ಬಳಿಕ ಯಾವ ನಿವೇಶನ ಯಾವ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂಬುದನ್ನೂ ಸ್ಪಷ್ಟಪಡಿಸಿಲ್ಲ. ಹೀಗಾಗಿ ನಿವೇಶನ ಮಾಲೀಕರು ಸಮಸ್ಯೆ ಎದುರಿಸುತ್ತಿದ್ದಾರೆ. ಖಾತೆಗಳೂ ಆಗುತ್ತಿಲ್ಲ. ಆರ್ಥಿಕ ಸಮಸ್ಯೆಯುಂಟಾಗಿ ನಿವೇಶನ ಮಾರಾಟ ಮಾಡಬೇಕೆಂದರೆ, ಬ್ಯಾಂಕ್ ಸಾಲ ಪಡೆಯಲು ಈಗ ಸಾಧ್ಯವಾಗುತ್ತಿಲ್ಲ. ಜೊತೆಗೆ ಇದೇ ರೀತಿ ಮುಡಾ ತನ್ನ ನಿವೇಶನಗಳನ್ನು ಹಸ್ತಾಂತರಿಸುತ್ತ ಹೋದಲ್ಲಿ ಮಾಡಲು ಯಾವುದೇ ಕೆಲಸವಿಲ್ಲದೇ ಮುಡಾ ಮುಚ್ಚಬೇಕಾದ ಪರಿಸ್ಥಿತಿಯುಂಟಾಗುತ್ತದೆ ಎಂದು ಎಚ್ಚರಿಸಿದರು.

ಮುಡಾ ಹಾಗೂ ಜಿಲ್ಲಾಧಿಕಾರಿಗಳ ಈ ನಿರ್ಧಾರಕ್ಕೆ ಸರ್ಕಾರದ ಯಾವುದೇ ಆದೇಶವಿಲ್ಲ. ಹೀಗಿದ್ದರೂ ಸುಮ್ಮನೆ ಗೊಂದಲ ಸೃಷ್ಟಿಸಿದ್ದಾರೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಇತ್ತ ಗಮನ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಜಯಂತ್, ಜಗದೀಶ್, ಲೋಕೇಶ್, ಸಿದ್ದಲಿಂಗಪ್ಪ ಉಪಸ್ಥಿತರಿದ್ದರು.

ಪಶುವೈದ್ಯರು, ಇತರೆ ಸಿಬ್ಬಂದಿಗೆ ತರಬೇತಿ

- ವನ್ಯಜೀವಿ ರಕ್ಷಣೆ, ನಿರ್ವಹಣೆ; ನಿಖರ ಗುರಿ, ಅರವಳಿಕೆ ಮದ್ದು ನೀಡುವ ಸಂಬಂಧ ತಜ್ಞರಿಂದ ತಿಳುವಳಿಕೆ



ಮೈಸೂರು,ಡಿ.21(ಎಂಟಿವೈ)– ರಾಜ್ಯದ ವಿವಿಧೆಡೆ ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವನ್ಯಜೀವಿಗಳ ರಕ್ಷಣೆ, ನಿರ್ವಹಣೆ ಸಂಬಂಧ ಪಶುವೈದ್ಯರು ಹಾಗೂ ಮುಂಚೂಣಿ ಸಿಬ್ಬಂದಿಗಳಿಗೆ ಪರಿಣತರಿಂದ ತರಬೇತಿ ನೀಡಲಾಯಿತು.

ಮೈಸೂರು ಮೃಗಾಲಯದಲ್ಲಿ ಅರಣ್ಯ ಇಲಾಖೆಯ ಸಹಯೋಗದಲ್ಲಿ ನಡೆದ 'ವನ್ಯಜೀವಿ ರಕ್ಷಣೆ ಮತ್ತು ನಿರ್ವಹಣೆ' ಕುರಿತ ಕಾರ್ಯಾಗಾರದಲ್ಲಿ ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ, ರಾಮನಗರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರಣ್ಯ ಹಾಗೂ ಪಶುಸಂಗೋಪನಾ ಇಲಾಖೆಯ ಪಶುವೈದ್ಯರು ಹಾಗೂ ಮುಂಚೂಣಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಕಾರ್ಯಾಗಾರದಲ್ಲಿ 18 ಮಂದಿ ಇಲಾಖೆಯ ಪಶುವೈದ್ಯರು, ನಾಲ್ವರು ಖಾಸಗಿ ಪಶುವೈದ್ಯರು, 14 ಮಂದಿ ಚಿರತೆ ಹಾಗೂ ಆನೆ ಕಾರ್ಯಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮುಂಚೂಣಿ ಸಿಬ್ಬಂದಿಗಳು ಪಾಲ್ಗೊಂಡು, ವನ್ಯಜೀವಿಗಳ ರಕ್ಷಣೆಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮ ಕುರಿತು ಮಾಹಿತಿ ಪಡೆದರು.

ಆನೆ ಸೆರೆ ಕಾರ್ಯಾಚರಣೆಯಲ್ಲಿ ಆನೆ ತುಳಿತಕ್ಕೆ ಒಳಗಾಗಿ ಶಾರ್ಪ್ ಶೂಟರ್ ವೆಂಕಟೇಶ್ ಸಾವು ಹಾಗೂ ದಸರಾ ಆನೆ ಅರ್ಜುನ ಸಾವಿನ ಪ್ರಕರಣದ ಹಿನ್ನೆಲೆಯಲ್ಲಿ ತರಬೇತಿ ಕಾರ್ಯಾಗಾರದಲ್ಲಿ ಮಹತ್ತರವಾದ ವಿಷಯಗಳ ಚರ್ಚೆಯೊಂದಿಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮ ಕುರಿತಂತೆ ಸಲಹೆ ಸೂಚನೆಗಳನ್ನು ನೀಡಲಾಯಿತು. ಸುರಕ್ಷತಾ ಕ್ರಮ, ಕಾರ್ಯಾಚರಣೆ ವೇಳೆ ಶಿಷ್ಟಾಚಾರ ಪಾಲನೆ, ವನ್ಯಜೀವಿ ಸಂಘರ್ಷದ ವೇಳೆ ಕಾರ್ಯಾಚರಣೆಗೆ ಎದುರಾಗುವ ಅಪಾಯ, ಅರವಳಿಕೆ ಚುಚ್ಚುಮದ್ದು ಪ್ರಯೋಗ, ಅರವಳಿಕೆ ನಿಷ್ಫಲಗೊಳಿಸಲು ಬಳಸುವ ಔಷಧಿ, ಪ್ರಾಣಿ ನಿಗ್ರಹಿಸುವ ಸುಧಾರಿತ ಸಾಧನ ಬಳಕೆ, ಕ್ಷೇತ್ರ ವೀಕ್ಷಣೆ ತಂತ್ರ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಕ್ಷೇತ್ರದಲ್ಲಿ ಡಿಜಿಟಲ್ ಮತ್ತು ಮಾಹಿತಿ ತಂತ್ರಜ್ಞಾನದ ಬಳಕೆ ಕುರಿತಂತೆ ವಿಸ್ತೃತವಾಗಿ ಚರ್ಚಿಸಲಾಯಿತು.

ಆನೆ ಮತ್ತು ಹುಲಿ ಯೋಜನೆಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಾಶ್ವತಿ ಮಿಶ್ರ ಮಾತನಾಡಿ, ವಿವಿಧೆಡೆ ನಡೆಯುತ್ತಿರುವ ಮಾನವ ಮತ್ತು ಪ್ರಾಣಿ ಸಂಘರ್ಷ ತಡೆಗಟ್ಟಲು ಅರಣ್ಯ ಇಲಾಖೆ ಸಾಕಷ್ಟು ಕ್ರಮ ಕೈಗೊಂಡಿದೆ. ಅದರ ಮುಂದುವರೆದ ಭಾಗವಾಗಿ ಪಶುವೈದ್ಯರು ಹಾಗೂ ಮುಂಚೂಣಿ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ ನಡೆಸಲಾಗುತ್ತಿದೆ. ಈ ಕಾರ್ಯಾಗಾರದಲ್ಲಿ ಹೊಸ ಉಪಕರಣ ಬಳಕೆ ಸೇರಿದಂತೆ ಇನ್ನಿತರ ಮಹತ್ತರ ವಿಷಯಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ತರಬೇತಿ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎ.ಕೆ.ಸಿಂಗ್, ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ಬಸವ ರಾಜ್, ಸೌರಭ್‌ಕುಮಾರ್, ಸೀಮಾ (ಹುಣಸೂರು), ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್, ಉಪನಿರ್ದೇಶಕಿ ರೋಶನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾಶ್ಮೀರದ ಪೂಂಚ್‌ನಲ್ಲಿ ಉಗ್ರರಿಂದ ಗುಂಡಿನ ದಾಳಿ, ಮೂವರು ಯೋಧರು ಹುತಾತ್ಮ

ಜಮ್ಮು, ಡಿ.21– ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಗುರುವಾರ ಸೇನಾ ವಾಹನದ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದು, ಘಟನೆಯಲ್ಲಿ ಕನಿಷ್ಠ ಮೂವರು ಯೋಧರು ಹುತಾತ್ಮರಾಗಿದ್ದಾರೆ ಮತ್ತು ಮೂವರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಠಾಣಮಂಡಿ–ಸುರನಕೋಟೆ ರಸ್ತೆಯ ಸಾವನಿ ಪ್ರದೇಶದಲ್ಲಿ ಹೊಂಚು ಹಾಕಿ ಕುಳಿತಿದ್ದ ಉಗ್ರರು, ಸೇನಾ ವಾಹನದ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಬುಫ್ಲಿಯಾಜ್ ನಲ್ಲಿ ಬುಧವಾರದಿಂದ ಭಯೋತ್ಪಾದಕರ ವಿರುದ್ಧ ಕಾರ್ಡನ್ ಮತ್ತು ಸರ್ಚ್ ಕಾರ್ಯಾಚರಣೆ ನಡೆಯುತ್ತಿದ್ದು, ಅಲ್ಲಿಗೆ ಯೋಧರನ್ನು ಹೊತ್ತೊಯ್ಯುತ್ತಿದ್ದ ವಾಹನ ಮೇಲೆ ಇಂದು ಉಗ್ರರು ದಾಳಿ ನಡೆಸಿದ್ದಾರೆ.

ಭಯೋತ್ಪಾದಕರು ಸೇನಾ ವಾಹನದ ಮೇಲೆ ಗುಂಡು ಹಾರಿಸಿದ್ದು, ಕನಿಷ್ಠ ಮೂವರು ಯೋಧರು ಹುತಾತ್ಮರಾಗಿದ್ದಾರೆ ಮತ್ತು ಮೂವರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಿನ ದಾಳಿ ನಡೆಸಿದ ಉಗ್ರರನ್ನು ಪತ್ತೆ ಹಚ್ಚಲಾಗಿದ್ದು, ಆ ಪ್ರದೇಶದಲ್ಲಿ ಗುಂಡಿನ ಚಕಮಕಿ ನಡೆಯುತ್ತಿದೆ ಮತ್ತು ಸ್ಥಳಕ್ಕೆ ಹೆಚ್ಚುವರಿ ಪಡೆಗಳನ್ನು ರವಾನಿಸಲಾಗಿದೆ ಎಂದು ಸೇನಾ ವಕ್ತಾರರು ತಿಳಿಸಿದ್ದಾರೆ.

ಜಸ್ಟ್‌ಪಾಸ್
ಹುಡುಗರ ಆಟ–ತುಂಟಾಟ...



'ಜಸ್ಟ್‌ಪಾಸ್' ಚಿತ್ರದ ನಿರ್ಮಾಪಕ ಕೆ.ವಿ.ಶಶಿಧರ್, ಕೆ.ಎಂ.ರಘು, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಇದ್ದಾರೆ.



'ಜಸ್ಟ್‌ಪಾಸ್' ಚಿತ್ರದಲ್ಲಿ ಶ್ರೀ ಮಹದೇವ್, ಪ್ರಣತಿ

ಪ್ರಶಸ್ತಿ ವಿಜೇತ ದೊಡ್ಡಹಟ್ಟಿ ಬೋರೇಗೌಡ ಚಿತ್ರವನ್ನು ನಿರ್ದೇಶಿಸಿದ್ದ ಕೆ.ಎಂ.ರಘು ಈಗ ಕಾಲೇಜು ಹುಡುಗರ ಕಥೆಯೊಂದನ್ನು ಕೈಗೆತ್ತಿಕೊಂಡು ಚಿತ್ರವನ್ನು ನಿರ್ದೇಶಿಸಿದ್ದಾರೆ. ಮೈಸೂರಿನ ಉದ್ಯಮಿ ಕೆ.ವಿ.ಶಶಿಧರ್ ಅವರು ನಿರ್ಮಿಸಿರುವ, ಕೆ.ಎಂ. ರಘು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ಶ್ರೀಮಹದೇವ್ ಹಾಗೂ ಪ್ರಣತಿ ನಾಯಕ–ನಾಯಕಿಯಾಗಿ ನಟಿಸಿರುವ 'ಜಸ್ಟ್‌ಪಾಸ್' ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಟೀಸರ್ ಬಿಡುಗಡೆ ನಂತರ ಮಾತನಾಡಿದ ನಿರ್ದೇಶಕ ಕೆ.ಎಂ.ರಘು, ನಾನು ನಮ್ಮ ಊರಿನ ಜಾತ್ರೆಗೆ ಹೋಗಿದ್ದಾಗ ನನ್ನ ಸ್ನೇಹಿತರೊಬ್ಬರು ಫೋನ್ ಮಾಡಿ ಮೈಸೂರಿನಲ್ಲಿ ಶಶಿಧರ್ ಅಂತ ಇದ್ದಾರೆ. ಅವರು ಸಿನಿಮಾ ನಿರ್ಮಾಣ ಮಾಡಲು ಹೊರಟಿದ್ದಾರೆ. ಕಥೆ ಹೇಳಬೇಕು ಬಾ ಎಂದರು. ತಕ್ಷಣ ಹೊರಟು ಬಂದ ನಾನು ಶಶಿಧರ್ ಹಾಗೂ ಅವರ ಸಹೋದರ ಶ್ರೀಧರ್ ಅವರಿಗೆ ಕಥೆ ಹೇಳಿದೆ. ನಾನು ಹೇಳಿದ 2 ಕಥೆಗಳಲ್ಲಿ ಶಶಿಧರ್ ಅವರು ಈ ಕಥೆ ಮೆಚ್ಚಿಕೊಂಡು ನಿರ್ಮಾಣಕ್ಕೆ ಮುಂದಾದರು. ಸಾಮಾನ್ಯವಾಗಿ ಹೆಚ್ಚು ಅಂಕಗಳನ್ನು ತೆಗೆದವರಿಗೆ ಕಾಲೇಜು ಇರುವಂತೆ. 'ಜಸ್ಟ್‌ಪಾಸ್' ಆದಂಥ ವಿದ್ಯಾರ್ಥಿಗಳಿಗಾಗಿಯೇ ಸ್ಥಾಪಿತವಾದ ಕಾಲೇಜು ನಮ್ಮ ಚಿತ್ರದಲ್ಲಿದೆ. ಈ ಕಾಲೇಜಿನಲ್ಲೇ ಹೆಚ್ಚಿನ ಕಥೆ ನಡೆಯುತ್ತದೆ. ಬಹುದೊಡ್ಡ ತಾರಾಬಳಗ ಹಾಗೂ ತಾಂತ್ರಿಕವರ್ಗ ನಮ್ಮ ಚಿತ್ರದಲ್ಲಿದೆ. ನಿರ್ಮಾಪಕರು ಯಾವುದೇ ಕೊರತೆಯಿಲ್ಲದಂತೆ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರು.

ನಾನೊಬ್ಬ ನಟನಾಗಬೇಕೆಂಬ ಆಸೆಹೊತ್ತು ಬೆಂಗಳೂರಿಗೆ ಬಂದವನು ಎಂದು ಮಾತನಾಡಿದ ನಿರ್ಮಾಪಕ ಕೆ.ವಿ.ಶಶಿಧರ್, ಆರಂಭದಲ್ಲಿ ನಾನು ಅವಕಾಶಕ್ಕಾಗಿ ಸಾಕಷ್ಟು ಅಲೆದರೂ ಯಾವ ಚಿತ್ರದಲ್ಲೂ ನಟಿಸುವ ಅವಕಾಶ ಸಿಗಲಿಲ್ಲ. ಆನಂತರ ಬೇರೆ ಉದ್ಯಮ ಆರಂಭಿಸಿದೆ. ಈಗ ನಿರ್ಮಾಪಕನಾಗಿ ಚಿತ್ರರಂಗಕ್ಕೆ ಬಂದಿದ್ದೇನೆ. ನನ್ನಂತೆ ಅವಕಾಶವಂಚಿತ ಪ್ರತಿಭೆಗಳಿಗೆ ಚಿತ್ರದಲ್ಲಿ ಅವಕಾಶ ನೀಡಿದ್ದೇವೆ. ಬರುವ ಜನವರಿ ಕೊನೆಯಲ್ಲಿ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದರು.

ನಾಯಕ ಶ್ರೀಮಹದೇವ್ ಮಾತನಾಡಿ ಅರ್ಜುನ ನನ್ನ ಪಾತ್ರದ ಹೆಸರು. ಜಸ್ಟ್ ಪಾಸ್ ವಿದ್ಯಾರ್ಥಿ, ತರಲೆ ತುಂಟಾಟ ಮಾಡುವುದೇ ನನ್ನ ಹಾಬಿ ಎಂದು ತಮ್ಮ ಪಾತ್ರದ ಬಗ್ಗೆ ಹೇಳಿದರು. ತಾನು ಮೊದಲ ಬಾರಿಗೆ ಪ್ರಾಂಶುಪಾಲರ ಪಾತ್ರ ಮಾಡಿರುವುದಾಗಿ ಹಿರಿಯನಟ ರಂಗಾಯಣ ರಘು ತಿಳಿಸಿದರು.

ಚಿತ್ರದ ನಾಯಕಿ ಪ್ರಣತಿ, ನಟ ಗೋವಿಂದೇಗೌಡ ಮುಂತಾದ ಕಲಾವಿದರು, ನಿರ್ಮಾಪಕರ ಸಹೋದರ ಕೆ.ವಿ.ಶ್ರೀಧರ್, ಸಂಗೀತ ನಿರ್ದೇಶಕ ಹರ್ಷವರ್ಧನ್ ರಾಜ್, ನಿರ್ದೇಶಕರೊಂದಿಗೆ ಸಂಭಾಷಣೆ ಬರೆಯಲು ಜೊತೆಯಾಗಿರುವ ರಘು ನಿಡುವಳ್ಳಿ ಹಾಗೂ ಛಾಯಾಗ್ರಾಹಕ ಸುಜಯ್‌ಕುಮಾರ್ ಜಸ್ಟ್‌ಪಾಸ್ ಚಿತ್ರದ ಕುರಿತಂತೆ ಮಾತನಾಡಿದರು.

ಮಂಚ ಮಹತ್ವ ಸಾರುವ ಟ್ರೈಲರ್



ಖ್ಯಾತನಟ ಇವಿ ಗಣೇಶ್‌ಬಾಬು ನಟಿಸಿರುವ ಹಾಗೂ ಅವರೇ ನಿರ್ದೇಶಿಸಿ, ನಿರ್ಮಿಸಿರುವ ಚಿತ್ರ "ಮಂಚ", ಈ ಚಿತ್ರದ ಟ್ರೇಲರ್ ಇದೀಗ ಬಿಡುಗಡೆಯಾಗಿದೆ, ಹಾಡುಗಳಿಂದಲೇ ಕನ್ನಡಿಗರ ಮನ ತಣಿಸಿದ ಅಮೃತವರ್ಷಿಣಿ ಚಿತ್ರದ ಸಂಗೀತ ನಿರ್ದೇಶಕ ದೇವಾ ಅವರ ಪುತ್ರ ಶ್ರೀಕಾಂತ್ ದೇವಾ ಅವರು ಹೃದಯಸ್ಪರ್ಶಿ ಹಾಡುಗಳನ್ನು ಮಾಡಿಕೊಟ್ಟಿರುವ ಚಿತ್ರ "ಮಂಚ". ಕೇವಲ ವ್ಯಕ್ತಿಗಳ ಜೊತೆಗೆ ಮಾತ್ರವಲ್ಲದೆ ನಿರ್ಜೀವ ವಸ್ತುಗಳ ಜೊತೆಗೂ ಕೂಡ ನಮಗಿರುವ ಭಾವನಾತ್ಮಕ ಸಂಬಂಧಗಳ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿಯುವ ಕಥಾಹಂದರ 'ಮಂಚ' ಚಿತ್ರದಲ್ಲಿದೆ. ತಮಿಳು ಹಾಗೂ ಕನ್ನಡದಲ್ಲಿ ಬಿಡುಗಡೆಯಾಗುತ್ತಿರುವ ಈ ಚಿತ್ರಕ್ಕೆ ಪುಷ್ಪ ಖ್ಯಾತಿಯ ವರದರಾಜ್ ಚಿಕ್ಕಬಳ್ಳಾಪುರ ಸಾಹಿತ್ಯ ಹಾಗೂ ಸಂಭಾಷಣೆ ಬರೆದು ಡಬ್ಬಿಂಗ್ ಮಾಡಿದ್ದಾರೆ. 'ಮಂಚ' ಎಂದರೆ ಅದು ಕೇವಲ ಮಲಗಲು ಬಳಸುವ ಸಾಧನವಲ್ಲ, ಹಲವು ಜನನ ಮರಣಗಳಿಗೆ ಸಾಕ್ಷಿಯಾಗುವ ಒಂದು ಅಚಲಿತ ಜೀವವಾಗಿರುತ್ತದೆ. ಕೇವಲ ಕಣ್ಣುಗಳಿಂದ ನೋಡಿದರೆ ಅದೊಂದು ನಿರ್ಜೀವ ವಸ್ತುವಾಗಿ ಕಾಣುತ್ತದೆ. ಅದೇ ಮನಸ್ಸಿನಿಂದ ನೋಡಿದರೆ ಅದು ನಮ್ಮ ಕುಟುಂಬದ ಒಂದು ಅವಿಭಾಜ್ಯ ಸದಸ್ಯನಂತೆ ಕಂಡುಬರುತ್ತದೆ. ಈ ಮಂಚದ ಸುತ್ತಲೂ ನಡೆಯುವ ಸಂಘಟನೆಗಳೇ ಈ ಚಿತ್ರದ ಕಥಾಹಂದರವಾಗಿದೆ.

'ಚೆಫ್ ಚಿದಂಬರ'
ನಿಧಿ ಸುಬ್ಬಯ್ಯ ವಿಲನ್



ಬಹಳ ದಿನಗಳ ನಂತರ ಬೆಳ್ಳಿತೆರೆ ಮೇಲೆ ಬರುತ್ತಿರುವ ನಟ ಅನಿರುದ್ದ್ ಅಡುಗೆ ತಯಾರಕನಾಗಿ ನಟಿಸಿರುವ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿದ ಚಿತ್ರ 'ಚೆಫ್ ಚಿದಂಬರ'. ಎಂ.ಆನಂದರಾಜ್ ನಿರ್ದೇಶಿಸಿರುವ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ನೆಗೆಟಿವ್ ಶೇಡ್‌ನಲ್ಲಿ ಕಾಣಿಸಿಕೊಂಡಿರುವ ನಿಧಿ ಸುಬ್ಬಯ್ಯ ಅವರ ಕ್ಯಾರೆಕ್ಟರ್ ಪರಿಚಯಿಸುವ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಈ ಚಿತ್ರದಲ್ಲಿ ನಿಧಿ ಸುಬ್ಬಯ್ಯ ಅವರ ಪಾತ್ರದ ಹೆಸರು ಮೋನ. ಅವರ ಕೈಯಲ್ಲಿ ಬೇಡಿಯಿದ್ದು, ಆ ಬೇಡಿ ಸಾಕಷ್ಟು ಕುತೂಹಲಗಳನ್ನು ಹುಟ್ಟು ಹಾಕಿದೆ.

ಡಾರ್ಕ್ ಕಾಮಿಡಿ ಜಾನರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಟ ಅನಿರುದ್ ಅವರು ಒಬ್ಬ ಶೆಫ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಪಾತ್ರಕ್ಕಾಗಿ ಅವರು ಸಾಕಷ್ಟು 'ಶೆಫ್'ಗಳ ಜೊತೆ ಬೆರೆತು ತಯಾರಿಯನ್ನು ಮಾಡಿಕೊಂಡಿದ್ದರು. ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್. ಅವರು ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಿರ್ದೇಶಕ ಆನಂದರಾಜ್ ಅವರೇ ಕಥೆ ಬರೆದಿದ್ದು, ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಗಣೇಶ್ ಪರಶುರಾಮ್ ಬರೆದಿದ್ದಾರೆ. ಉದಯ ಲೀಲ ಅವರ ಛಾಯಾಗ್ರಹಣ, ರಿತ್ವಿಕ್ ಮುರಳಿಧರ್ ಅವರ ಸಂಗೀತ ನಿರ್ದೇಶನ, ವಿಜೇತ್ ಚಂದ್ರ ಅವರ ಸಂಕಲನ, ವಿಕ್ರಾಂತ್ ರೋಣ ಖ್ಯಾತಿಯ ಆಶಿಕ್ ಕುಸುಗೊಳ್ಳಿ ಅವರ ಡಿ.ಐ. ನರಸಿಂಹಮೂರ್ತಿ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರದ ನಾಯಕಿಯಾಗಿ ಲವ್‌ಮಾಕ್ಟೇಲ್ ಖ್ಯಾತಿಯ ರೆಚೆಲ್ ಡೇವಿಡ್ ಅಭಿನಯಿಸಿದ್ದಾರೆ. ಉಳಿದಂತೆ ಶರತ್ ಲೋಹಿತಾಶ್ವ, ಕೆ.ಎಸ್.ಶ್ರೀಧರ್, ಶಿವಮಣಿ ಇತರೆ ಪಾತ್ರಗಳಲ್ಲಿದ್ದಾರೆ.

ಸಿನಿಪದಬಂಧ–505

1			2					3		
					4					
		5								6
							7			
8					9					
		10					11			
									12	
13										
					14		15			
		16								
17						18				

ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ವಿಜೇತರು: ಜಿ.ಟಿ.ಕೌಸಲ್ಯ, #2715/2ಎ, 2ನೇ ಮುಖ್ಯ ರಸ್ತೆ, ವಿ.ವಿ.ಪುರಂ, ಮೈಸೂರು



ಉಮ್ಮತ್ತೂರು ಇಂದುಶೇಖರ್
ಮೊ.9880820462

ಎಡದಿಂದ ಬಲಕ್ಕೆ

1. "_ _ _ _ _ ಬೆಳಕಾಗಿ ಜಗಕೆ ನೀ ಬಂದವನೇ..... " 5
3. ಆರಂಭದಿ ಧಾನ್ಯವೊಂದನ್ನು ಕೊನೆಯಲ್ಲಿ ಪಕ್ಷಿಯೊಂದನ್ನು ಇರಿಸಿ ಕೊಂಡಿರುವ ನಟಿ 3
4. ರಮೇಶ್–ಸುಧಾರಾಣಿ ಅಭಿನಯದ "ರಾಜಶುಕ" 4
5. ಅಂಬರೀಶ್ ಆಡಿದ ಶಿಕಾರಿ 2
7. ಮಾರುತಿ ಶಿವರಾಮ್ ನಿರ್ದೇಶನದಲ್ಲಿ ನಿಸ್ವಾರ್ಥವಾಗಿ ಬಿಟ್ಟು ಕೊಟ್ಟಿದ್ದಾನೆ 4
8. ದರ್ಶನ್ ಅಭಿನಯದಲ್ಲಿ ಬಂದ ಆನೆ 2
10. ಕೆ.ವಿ.ಜಯರಾಮ್ ಅವರ ಉಸುಕಿನ ಕೊಂಡಿ 7
12. ಬಿ.ಆರ್.ಪಂತುಲು ಅವರ ತಾಯಿ 2
13. ಅಂಬಿಯ ನೀರವತೆಯ ಹಾಡು ಇಲ್ಲಿ ತಿರುಗಿದೆ 4
15. ಯುಕ್ತಿಯೊಂದಿಗಿನ ಬಲ 2
16. ಮಾಂಗಲ್ಯಂ ತಂತೂ ನಾನೇನ ಎನ್ನುವ ವೇಳೆ ಮಹೇಂದರ್ ಚಿತ್ರ ಪ್ರತ್ಯಕ್ಷ! 4
17. ಹಗಲಿನ ಜೊತೆ ಬಂದ ರಾತ್ರಿ 3
18. ಹೃದಯ ಮಿಡಿಯುವ ದೃಶ್ಯಗಳಿಗೆ ಹೀಗೂ ಹೇಳಿ 5

ಮೇಲಿನಿಂದ ಕೆಳಕ್ಕೆ

1. ಹೃದಯ ಗೀತೆ ಚಿತ್ರದ ಹಾಡಿನ ಸಾಲು ಚಿತ್ರವೂ ಆಗಿದೆ 9
2. ವಿಷ್ಣುವರ್ಧನ್–ಮಂಜುಳಾ ಕುಟುಂಬದಲ್ಲಿ ಗದ್ದಲ ಎದ್ದಿದೆ 6
3. ಮಾಲಾಶ್ರೀ ದ್ವಿಪಾತ್ರಾಭಿನಯಕ್ಕೆ ಬಿ.ರಾಮಾಮೂರ್ತಿ ನಿರ್ದೇಶಕ 6
4. ಬಿ.ಸಿ.ಪಾಟೀಲ್ ಹಿಡಿದ ಆಯುಧ 2
6. ಶಂಕರನಾಗ್, ಜಯಮಾಲಳಿಗೆ ಖುಷಿ ಖುಷಿಯಾಗಿರು ಎಂದು ಹೇಳಿದ ಚಿತ್ರ 9
9. ಹಾಡುಗಳಲ್ಲಿ ಬಂದ ಸೂರ್ಯ ಮಾಲೆ ಧರಿಸಿದ್ದಾನೆ 3
10. ನೆಲದ ಪುತ್ರನನ್ನು ಸ್ತ್ರೀ ರೂಪ ಗೊಳಿಸಿದರೆ ಜಯಂತಿ ಅಭಿನಯವಿದೆ 6
11. ತ್ರಿಮೂರ್ತಿಗಳಲ್ಲಿ ಒಬ್ಬನ ಉರಗ ನಿದ್ರೆ 6
14. ದಮಯಂತಿಯ ಗಂಡನ ಪಾಕ 2

ಸಿನಿ ಪದಬಂಧ 504ರ ಉತ್ತರ

ಶ	ನಿ	ಪ್ರ	ಭಾ	ವ				ಗಂ	ಧ	ರ್ವ
ರ			ಗ್ಯ		ಜೇ	ನು	ಗೂ	ಡು		
ವೇ		ಮಾ	ದ		ಡ			ಗ		ನ
ಗ			ಬಾ				ಕ	ಲಿ	ಯು	ಗ
ದ	ಕ್ಷ		ಗಿ		ಒ			ರಾ		ರ
ಸ		ಕೋ	ಲು	ಮಂ	ಡೆ	ಜಂ	ಗು	ಮ		ದ
ರ		ಕಿ			ಯ		ರು		ಗಿ	ಲ್ಲಿ
ಧಾ	ನ್ಯ	ಲ	ಕ್ಷ್ಮಿ				ಜ			ನಾ
ರ		ಮೋ			ಮೊ		ಗ	ಲ್ಲಿ		ಯ
		ಹ	ತ್ಯಾ	ಕಾಂ	ಡ		ದ್ಗು			ಕ
ವಿ	ಲ	ನ್				ಗು	ರು	ಶಿ	ಷ್ಯ	ರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ನಾಳೆ ಮೈಸೂರಲ್ಲಿ 'ಮಾದಿಗರ ಮುನ್ನಡೆ' ಸಮಾವೇಶ

ಹೆಚ್.ಡಿ. ಕೋಟೆ, ಸರಗೂರಿನ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ

ಹೆಚ್.ಡಿ.ಕೋಟೆ, ಡಿ.21– ಮೈಸೂರು ನಗರದ ಪಡುವಾರಹಳ್ಳಿಯ (ಹೊಸ ಮಹಾರಾಣಿ ಕಾಲೇಜು ಪಕ್ಕ) ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪದಲ್ಲಿ ಡಿ.23 ರಂದು 'ಮಾದಿಗರ ಮುನ್ನಡೆ' ಸಮಾವೇಶ ನಡೆಯಲಿದ್ದು, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಮಾದಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆಯ ತಾಲೂಕು ಉಪಾಧ್ಯಕ್ಷ ಹುಡಾ ನಾಗರಾಜ್ ಮನವಿ ಮಾಡಿದ್ದಾರೆ.



ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಪರಿಶಿಷ್ಟ ಸಮುದಾಯದವರ ಸಂಖ್ಯೆ 1.4 ಕೋಟಿಯಷ್ಟಿದೆ. ಅದರಲ್ಲಿ ಮಾದಿಗ ಮತ್ತು ಉಪ ಜಾತಿಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದೆ. ಆದ್ದರಿಂದ 101 ಪರಿಶಿಷ್ಟ ಜಾತಿಗಳಲ್ಲಿ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ನೀಡಬೇಕೆಂದು ಮಾಜಿ ಮುಖ್ಯ ಮಂತ್ರಿಗಳಾದ ಎಸ್.ಎಂ. ಕೃಷ್ಣ ಅವರ ಕಾಲದಿಂದ ಹಿಡಿದು ಬಸವರಾಜ ಬೊಮ್ಮಾಯಿ ರವರ ಕಾಲದವರೆಗೂ ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ ಎಂದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಗಳಾಗಿದ್ದ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15 ರಿಂದ 17ಕ್ಕೆ ಏರಿಸಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದರು. ನಮ್ಮ ಈ ಮನವಿಯ ಕೂಗನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಲು ಈ ಸಮಾವೇಶ ಹಮ್ಮಿಕೊಂಡಿದ್ದು, ಈ ಸಮಾವೇಶ ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿಗಳ ಸಮ್ಮುಖದಲ್ಲಿ ನಡೆಯಲಿದೆ. ಕೇಂದ್ರ ಸಚಿವರಾದ ಎ.ನಾರಾಯಣಸ್ವಾಮಿ, ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಮಾಜಿ ಸಚಿವರು ಹಾಗೂ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಸಿ.ರಮೇಶ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಬಿ.ಹೆಚ್. ಅನಿಲ್‌ಕುಮಾರ್ ಹಾಗೂ ಇನ್ನಿತರ ಮುಖಂಡರುಗಳು ಭಾಗವಹಿಸುವರು ಎಂದರು.

ಈ ಕಾರ್ಯಕ್ರಮ ಪಕ್ಷಾತೀತವಾಗಿ ನಡೆಯುತ್ತಿದ್ದು, ಹೆಚ್.ಡಿ. ಕೋಟೆ ಹಾಗೂ ಸರಗೂರು ತಾಲೂಕುಗಳ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಾಬು ಜಗಜೀವನರಾಂ ವಿಚಾರ ವೇದಿಕೆಯ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಪುರಸಭಾ ಸದಸ್ಯ ಶಾಂತಮ್ಮ ಗೋವಿಂದರಾಜು, ಪಟ್ಟಣ ಪಂಚಾಯಿತಿ ಸದಸ್ಯ ಸಣ್ಣತಾಯಮ್ಮ, ಹಿರೇಹಳ್ಳಿ ಪ್ರಕಾಶ್, ಪೇಂಟ್ ನಾಗರಾಜ್, ಸುಭಾಷ್, ಚಾಮರಾಜು, ನಾಗರಾಜು ಹಾಜರಿದ್ದರು.

ಮಕ್ಕಳೊಂದಿಗೆ ಅಸಭ್ಯ ವರ್ತನೆ; ಮುಖ್ಯ ಶಿಕ್ಷಕ ಅಮಾನತು



ತಿ.ನರಸೀಪುರ: ಶಾಲಾ ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದ ಹಿನ್ನೆಲೆಯಲ್ಲಿ ತಾಲೂಕಿನ ಕೊಳತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಂ.ಪಿ.ಸದಾನಂದಮೂರ್ತಿ ಅವರನ್ನು ಡಿಡಿಪಿಯು ಎಚ್.ಕೆ.ಪಾಂಡು ಅಮಾನತುಗೊಳಿಸಿ ತಕ್ಷಣ ಜಾರಿಗೆ ಬರುವಂತೆ ಆದೇಶಿಸಿದ್ದಾರೆ.

ಪ್ರಾಥಮಿಕ ಶಾಲೆಯ ಹೆಣ್ಣು ಮಕ್ಕಳೊಂದಿಗೆ ಮುಖ್ಯ ಶಿಕ್ಷಕ ಸದಾನಂದ ಮೂರ್ತಿ ಅಸಭ್ಯ ವರ್ತನೆಯ ದೂರಿನ ಹಿನ್ನೆಲೆಯಲ್ಲಿ ಶಾಲೆಗೆ ಭೇಟಿ ನೀಡಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಶೋಭರವರು ಮಕ್ಕಳ ಹೇಳಿಕೆ ಪಡೆದು ಮುಖ್ಯ ಶಿಕ್ಷಕರ ಮೇಲಿನ ಆರೋಪ ದೃಢಪಟ್ಟಿರುವ ಬಗ್ಗೆ ತಿಳಿಸಿ ಮುಖ್ಯ ಶಿಕ್ಷಕರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಕೋರಿದ್ದರು.

ಈ ಹಿನ್ನೆಲೆಯಲ್ಲಿ ಆರೋಪಗಳ ಸಂಬಂಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಲಾಗಿದೆ. ಕೇಂದ್ರ ಸ್ಥಾನ ಬಿಡದಂತೆ ಸೂಚಿಸಲಾಗಿದೆ ಎಂದು ಅವರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಚಿಲ್ಕುಂದ ಏತ ನೀರಾವರಿ ಯೋಜನೆಗೆ ಹೆಚ್ಚುವರಿಯಾಗಿ 4 ಕೋಟಿ ರೂ. ಮಂಜೂರು

ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದ ಎಂಎಲ್‌ಸಿ ವಿಶ್ವನಾಥ್

ಹುಣಸೂರು, ಡಿ.21– ತಾಲೂಕಿನ ಚಿಲ್ಕುಂದ ಗ್ರಾಮದ ಏತ ನೀರಾವರಿ ಯೋಜನೆ ಪೂರ್ಣಗೊಳಿಸಲು ಸರ್ಕಾರದಿಂದ ಹೆಚ್ಚುವರಿಯಾಗಿ ಮತ್ತೆ 4 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಕಾಮಗಾರಿ ಶೀಘ್ರವಾಗಿ ಮುಕ್ತಾಯಗೊಳ್ಳಲಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ತಿಳಿಸಿದರು.

ನಗರದ ಪತ್ರಿಕಾ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕ್ಷೇತ್ರದ ಶಾಸಕರಾಗಿದ್ದ ಅವಧಿಯಲ್ಲಿ ಲಕ್ಷ್ಮಣತೀರ್ಥ ನದಿಯಿಂದ ಚಿಲ್ಕುಂದ ಗ್ರಾಮದ ಸುತ್ತಮುತ್ತಲಿನ 15 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಗೆ 21 ಕೋಟಿ ಅಂದಾಜಿನಲ್ಲಿ ಚಾಲನೆ ನೀಡಲಾಗಿತ್ತು. ಈ ಯೋಜನೆಯಲ್ಲಿ ಗುರುತ್ವಾಕರ್ಷಣೆ ಆಧರಿಸಿ ಪೈಪ್‌ಲೈನ್ ಅಳವಡಿಸಲಾಗಿತ್ತು. ಅದರೆ ಕಾಮಗಾರಿಗೆ ಹಣ ಸಾಲದೆ. ಈಗ ಮತ್ತೆ ಹೆಚ್ಚುವರಿಯಾಗಿ 4 ಕೋಟಿ ಅನುದಾನ



ತಂದಿದ್ದು 15 ಕೆರೆಗಳ ಜೊತೆಗೆ ಹೆಚ್ಚುವರಿಯಾಗಿ 4 ಕೆರೆ ಸೇರಿಸಲಾಗಿದೆ. ಮೋಟಾರ್ ಪಂಪ್ ಅಳವಡಿಸಿ ನೀರು ಕೆರೆಗಳಿಗೆ ತಲುಪಿಸುವ ಯೋಜನೆ ರೂಪಿಸಲಾಗಿದೆ ಎಂದರು.

ಕಟ್ಟೆಮಳಲವಾಡಿ ಒಡಿಕೆ ಕಟ್ಟೆ ಕೆರೆ ಸೇರಿದಂತೆ 42 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಅಂದಿನ ಸರ್ಕಾರದ ಬಜೆಟ್‌ನಲ್ಲಿ ಸೇರಿಸಿ ಅನುಮೋದನೆ ಪಡೆದಿದೆ. ನಂತರದ ಜನಪ್ರತಿನಿಧಿಗಳು ಈ ಯೋಜನೆ ಬಗ್ಗೆ ಗಮನಿಸಲಿಲ್ಲ. ಈಗಿನ ಸರ್ಕಾರದಲ್ಲಿ ಸಣ್ಣ ನೀರಾವರಿ ಸಚಿವ ಬೋಸರಾಜ್ ಗಮನಕ್ಕೆ ತಂದಿದ್ದೇನೆ ಎಂದರು.

ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಮಲ್ಲಿಕಾರ್ಜುನ ಖರ್ಗೆ ಇಂಡಿಯಾ ಒಕ್ಕೂಟದ ಪ್ರಧಾನಿ ಅಭ್ಯರ್ಥಿ ಎಂದು ಪ್ರಸ್ತಾಪಿಸಿದ್ದು, ನರೇಂದ್ರ ಮೋದಿ ಅವರಿಗೆ ಸರಿಸಮಾನ ಬಲ. ಕಾಂಗ್ರೆಸ್‌ನಲ್ಲಿ ರಾಹುಲ್ ಗಾಂಧಿ ಪ್ರಧಾನಿ ಅಭ್ಯರ್ಥಿ ಎಂಬ ಮಾತು ಕೇಳಿ ಬಂದಿತ್ತು, ಆದರೆ 28 ಪಕ್ಷಗಳ ಒಕ್ಕೂಟದ ಒಮ್ಮತದ ಅಭ್ಯರ್ಥಿಯಾಗಿ ಮಲ್ಲಿಕಾರ್ಜುನ ಖರ್ಗೆ ಆಯ್ಕೆಗೊಂಡಿದ್ದು, ದೇವೇಗೌಡರ ನಂತರದಲ್ಲಿ ರಾಜ್ಯದ ನಾಯಕರೊಬ್ಬರು ಆ ಸ್ಥಾನ ತುಂಬಿದರೆ ಸಂತೋಷ ಎಂದರು.

ವಿಷಾದ: ಸಂಸದರ ಪ್ರತಿಭಟನೆಯಲ್ಲಿ ಉಪರಾಷ್ಟ್ರಪತಿ ಅವರನ್ನು ವ್ಯಂಗ್ಯ ಮಾಡುವ ವಿಡಿಯೋ ಚಿತ್ರೀಕರಣ ಮಾಡಿದ ರಾಹುಲ್ ಗಾಂಧಿ ಕ್ರಮ ಸರಿಯಲ್ಲ. ಈ ವಿಷಯದಲ್ಲಿ ಅವರು ಶಿಷ್ಟಾಚಾರ ಮುರಿದಿದ್ದಾರೆ. ಅವರಿಂದ ಈ ರೀತಿ ಅಗುತ್ತದೆ ಎಂದು ಯಾರು ನಿರೀಕ್ಷಿಸಿರಲಿಲ್ಲ ಎಂದು ವಿಷಾದಿಸಿದರು. ಸುದ್ದಿಗೋಷ್ಠಿಯಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಶಿವಕುಮಾರ್, ಕುರುಬ ಸಮುದಾಯದ ತಾಲೂಕು ಅಧ್ಯಕ್ಷ ಹಾಗೂ ಮಾಜಿ ಜಿ.ಪಂ ಸದಸ್ಯ ಡಿ.ಕೆ. ಕುನ್ನೇಗೌಡ ಉಪಸ್ಥಿತರಿದ್ದರು.

ನಂ.ಗೂಡು ಉಪ ಚುನಾವಣೆ: ಬಿಜೆಪಿ ಅಭ್ಯರ್ಥಿ ಪರ ಮಾಜಿ ಶಾಸಕ ಹರ್ಷವರ್ಧನ್ ಮತಯಾಚನೆ



ನಂಜನಗೂಡು, ಡಿ.21– ನಗರದ 20ನೇ ವಾರ್ಡ್‌ನ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮಹೇಶ್ ಅತ್ತಿಖಾನೆ ಪರವಾಗಿ ಉತ್ತಮ ವಾತಾವರಣವಿದ್ದು, ಅವರ ಗೆಲುವು ನಿಶ್ಚಿತವಾಗಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ಬುಧವಾರ ರಾತ್ರಿ ಬಿಜೆಪಿ ಪಕ್ಷದ ಅಭ್ಯರ್ಥಿ ಮಹೇಶ್ ಅತ್ತಿಖಾನೆ ಪರವಾಗಿ ಮನೆ ಮನೆಗೆ ತೆರಳಿ ಮತಯಾಚನೆ ನಡೆಸಿ ಮಾತನಾಡಿದ ಅವರು, ನಾನು ಕಳೆದ 5 ವರ್ಷಗಳಲ್ಲಿ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು ಮತ್ತು ನಗರ ವ್ಯಾಪ್ತಿಯಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳನ್ನು ಜನರು ಮೆಚ್ಚಿದ್ದಾರೆ ಮತ್ತು ನರೇಂದ್ರ ಮೋದಿ ಅವರ ಕೇಂದ್ರ ಸರ್ಕಾರದ ಸಾಧನೆಯನ್ನು ನೋಡಿ ಮತದಾರರು ಬಿಜೆಪಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲು ನಿರ್ಣಯಿಸಿದ್ದಾರೆ ಎಂದರು.

ಜೊತೆಗೆ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಕೀಲ ಮಹೇಶ್‌ಅತ್ತಿಖಾನೆ ಶಿಕ್ಷಣ ಕ್ಷೇತ್ರದಲ್ಲಿ 15 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದು ಉತ್ತಮ ಅಭ್ಯರ್ಥಿ ಎಂಬುದಾಗಿ ಜನರ ಮನಸ್ಸಿನಲ್ಲಿದೆ. ಕಳೆದ ಬಾರಿ ಸಹ ಈ ವಾರ್ಡಿನ ಮತದಾರರು ಬಿಜೆಪಿಯನ್ನು ಬೆಂಬಲಿಸಿದ್ದರು. ಮನೆ ಮನೆಗೆ ಬೇಟಿ ನೀಡಿದ ಸಂದರ್ಭದಲ್ಲಿ ಈ ಬಾರಿಯೂ ಸಹ ಬೆಂಬಲ ನೀಡುವುದಾಗಿ ಮತದಾರರು ಹೇಳಿಕೆ ನೀಡುತ್ತಿದ್ದಾರೆ. ಆದ ಕಾರಣ ಈ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿ ಅಭ್ಯರ್ಥಿ ಪಿ.ಮಹೇಶ್ ಅತ್ತಿ ಖಾನೆ ಮಾತನಾಡಿ, ಮತದಾರರ ಸೇವೆ ಮಾಡುವ ಉದ್ದೇಶದೊಂದಿಗೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದೇನೆ. ಈ ಬಾರಿ ನನಗೆ ಅಧಿಕ ಮತಗಳನ್ನು ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮತಯಾಚನೆ ವೇಳೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ, ಬಿಜೆಪಿ ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಮಾಜಿ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ನಗರಸಭಾ ಮಾಜಿ ಸದಸ್ಯರಾದ ಕೆ.ಜಿ.ಆನಂದ್, ಮುಖಂಡರಾದ ಬಾಲಚಂದ್ರು, ಎನ್.ಸಿ. ಬಸವಣ್ಣ, ಶಂಕರಪ್ಪ, ಬಾಲಚಂದ್ರು, ಪ್ರೇಮಾ ಶಂಭಯ್ಯ, ಸಂಜಯ್ ಶರ್ಮಾ, ಮಹೇಶ್, ನಗರಸಭಾ ಸದಸ್ಯರಾದ ಮಹದೇವಪ್ರಸಾದ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮುರುಗನಹಳ್ಳಿ ಡೇರಿಯಲ್ಲಿ ನೂತನ ಕಟ್ಟಡ ಉದ್ಘಾಟನೆ

ಮೈಮುಲ್‌ನಿಂದ ಸಿಗುವ ಸೌಲಭ್ಯಗಳನ್ನು ಬಳಸಿಕೊಳ್ಳಲು ಕರೆ

ಹೆಚ್.ಡಿ.ಕೋಟೆ, ಡಿ.21– ಮುರುಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ 5 ಲಕ್ಷ ರೂ. ಅನುದಾನದಡಿ ನಿರ್ಮಿಸಲಾಗಿರುವ ನೂತನ ಕಟ್ಟಡವನ್ನು ಮೈಮುಲ್ ನಿರ್ದೇಶಕರಾದ ಕೆ.ಈರೇಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮೈಮುಲ್ ವತಿಯಿಂದ ಸಿಗುವ ಸೌಲಭ್ಯಗಳಾದ ಮರಣ ಹೊಂದಿದ ಹಾಲು ಉತ್ಪಾದಕರಿಗೆ ಮರಣ ಪರಿಹಾರ 1 ಲಕ್ಷ ರೂ., ಹೈನುರಾಸು ವಿಮೆ ಸೌಲಭ್ಯ, ಪದವಿ ಶಿಕ್ಷಣ ಪಡೆಯುತ್ತಿರುವ ರೈತರ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ, ವಿದ್ಯಾರ್ಥಿ ವೇತನ, ಶೇ.50 ರಷ್ಟು ರಿಯಾಯಿತಿ ದರದಲ್ಲಿ ಹಸುಗಳ ಮ್ಯಾಟ್, ಮೇವು ಕತ್ತರಿಸುವ ಯಂತ್ರ, ಹಾಲು ಕರೆಯುವ ಯಂತ್ರ, ಪಶು ವೈದ್ಯಕೀಯ ತುರ್ತು ಸೇವೆ, ಕೃತಕ ಗರ್ಭಧಾರಣೆ ಸೇವೆ ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.



ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎನ್.ವಿಜಯಕುಮಾರ್ ಮಾತನಾಡಿ, ಅಂಟಿಬಯೋಟಿಕ್ಸ್, ಅಫ್ಲೋಟಾಕ್ಸಿನ್, ಪೆಸ್ಟಿಸೈಡ್ ಅಂಶ ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅರಿವು ಮೂಡಿಸಿ, ಶುದ್ಧ ಹಾಲು ಉತ್ಪಾದಿಸಲು ಕೊಟ್ಟಿಗೆ ಹಾಗೂ ವೈಯಕ್ತಿಕ ನೈರ್ಮಲ್ಯ, ಪಾತ್ರೆಗಳ ಸ್ವಚ್ಛತೆ, ರಾಸುಗಳ ಆರೋಗ್ಯ ಹಾಗೂ ಸ್ವಚ್ಛತೆ ಉತ್ತಮ ನಿರ್ವಹಣೆಯ ಮೂಲಕ MBRT ಉತ್ತಮಪಡಿಸಲು ಪಶು ಆಹಾರ, ಖನಿಜ ಮಿಶ್ರಣದ ಸಮತೋಲನ ಬಳಕೆಯಿಂದ SNF ಉತ್ತಮಪಡಿಸಲು ಸಲಹೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ಮೈಮುಲ್ ನಿರ್ದೇಶಕಿ ದ್ರಾಕ್ಷಾಯಿಣಿ ಬಸವರಾಜಪ್ಪ, ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎನ್.ವಿಜಯಕುಮಾರ್, ವ್ಯವಸ್ಥಾಪಕರಾದ ಡಾ. ಸಿ.ದಿವಾಕರ್, ಸಹಾಯಕ ವ್ಯವಸ್ಥಾಪಕ ಡಾ. ಮುಕುಲ್, ವಿಸ್ತರಣಾಧಿಕಾರಿಗಳಾದ ಆರೀಫ್ ಇಕ್ಬಾಲ್, ಜಯಂತ್, ಕುಮಾರ್, ರಾಮಪ್ಪ ಬಾರ್ಕಿ ಯೋಗೀಶ್, ಜಗದಾಂಬ ಅವರುಗಳು ಭಾಗವಹಿಸಿದ್ದರು.

ಆಸ್ತಿಗಾಗಿ ಪತ್ನಿ, ಆಕೆಯ ಸಂಬಂಧಿಗಳ ಕಿರುಕುಳ; ವಿಷ ಸೇವಿಸಿ ರೈತ ಆತ್ಮಹತ್ಯೆ

ಪಿರಿಯಾಪಟ್ಟಣ, ಡಿ.21–ಪ್ರೀತಿಸಿ ವಿವಾಹವಾದ ಪತ್ನಿ ಹಾಗೂ ಆಕೆಯ ಮನೆಯವರು ಆಸ್ತಿ ವಿಚಾರವಾಗಿ ನೀಡಿದ ಕಿರುಕುಳ ತಾಳಲಾರದೆ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಪಿರಿಯಾಪಟ್ಟಣ ತಾಲೂಕು ಕೋಡಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಕೆಲ್ಲೂರು ಗ್ರಾಮದ ಮೋಹನ್ ರಾಜ್(27) ಆತ್ಮಹತ್ಯೆಗೆ ಶರಣಾದವನಾಗಿದ್ದು, ಈತ ಕಳೆದ 8 ತಿಂಗಳ ಹಿಂದೆ ಮಹದೇವ ಎಂಬುವರ ಪುತ್ರಿ ಬಿಂದು(21) ಎಂಬಾಕೆಯನ್ನು ಪ್ರೀತಿಸಿ, ಮನೆಯವರಿಗೂ ತಿಳಿಸದೆ ಹುಣಸೂರು ತಾಲೂಕು ಗದ್ದಿಗೆ ದೇವಸ್ಥಾನದಲ್ಲಿ ಮದುವೆಯಾಗಿದ್ದ. ವಿಷಯ ತಿಳಿದ ನಂತರ ಈತನ ತಂದೆ ಮಹದೇವ ಅವರು ಮಗ ಮತ್ತು ಸೊಸೆಯನ್ನು ಕರೆತಂದು ರಾವಂದೂರಿನ ಮಾತೃಶ್ರೀ ಕಲ್ಯಾಣ ಮಂಟಪದಲ್ಲಿ ಆರತಕ್ಷತೆ ಮಾಡಿದ್ದರು.

ಇದಾದ ಕೆಲ ದಿನಗಳ ನಂತರ ಮೋಹನ್ ರಾಜ್ ಮತ್ತು ಬಿಂದು ಬೋಗನಹಳ್ಳಿ ಗ್ರಾಮಕ್ಕೆ ತೆರಳಿ ನೆಲೆಸಿದ್ದರು. ನಂತರ ತನಗೆ ಆಸ್ತಿಯಲ್ಲಿ ಪಾಲು ಬೇಕು ಎಂದು ಮೋಹನ್ ರಾಜ್ ತನ್ನ ತಂದೆಯ ವಿರುದ್ಧ ಪಿರಿಯಾಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದ. ಈ ವೇಳೆ ಕೆಲ್ಲೂರು ಮತ್ತು ಬೋಗನಹಳ್ಳಿ ಗ್ರಾಮದ ಮುಖಂಡರ ಸಮ್ಮುಖದಲ್ಲಿ ಪಂಚಾಯ್ತಿ ನಡೆದು ಮೋಹನ್ ರಾಜ್‌ಗೆ ಒಂದೂವರೆ ಎಕರೆ ಜಮೀನು ಹಾಗೂ ಒಂದು ಬ್ಯಾರೆನ್ ನೀಡಲಾಗಿತ್ತು.

ಆನಂತರ ತಂದೆ ಮನೆಯಿಂದ ಮತ್ತಷ್ಟು ಆಸ್ತಿ ತರಬೇಕೆಂದು ಪತ್ನಿ ಬಿಂದು ಆಕೆಯ ತಂದೆ ಮಹದೇವ(55) ತಾಯಿ ಸಾಕಮ್ಮ(45) ಮತ್ತು ಸಂಬಂಧಿಕ ಬೀರೇಶ(41) ಅವರು ಕಿರುಕುಳ ಕೊಟ್ಟ ಹಿನ್ನೆಲೆಯಲ್ಲಿ ಮನ ನೊಂದ ಮೋಹನ್ ರಾಜ್ ಡಿ.15ರಂದು ಕೋಡಿಹಳ್ಳಿ ಗ್ರಾಮದಲ್ಲಿರುವ ಅವರ ಜಮೀನಿನಲ್ಲಿ ವಿಷ ಸೇವಿಸಿ ಅಸ್ವಸ್ಥನಾಗಿ ಬಿದ್ದಿದ್ದ. ಈತನನ್ನು ಮನೆಯವರು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಡಿ.18ರಂದು ಸಂಜೆ ಸಾವನ್ನಪ್ಪಿದ್ದಾನೆ. ಈ ಸಂಬಂಧ ಮೋಹನ್ ರಾಜ್‌ನ ತಂದೆ ಕೆ.ಎಸ್.ಮಹದೇವ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪಿರಿಯಾಪಟ್ಟಣ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.


ನಶಿಸುತ್ತಿರುವ ಹೈನುಗಾರಿಕೆ, ಕೆಜಿ ಮಾಂಸಕ್ಕೆ 1500 ರೂ. ಸಾಧ್ಯತೆ

ಹುಲ್ಲಿಗೆ ಚಿನ್ನದ ಬೆಲೆ, ಹುಲ್ಲು ಬೆಳೆಯಿರಿ ಲಾಭ ಪಡೆಯಿರಿ: ಡಾ.ನಾಗರಾಜ್

ತಿ.ನರಸೀಪುರ, ಡಿ.21– ರಾಜ್ಯದಲ್ಲಿ ಶೇ.90 ರಷ್ಟು ಮಂದಿ ಮಾಂಸಾಹಾರಿಗಳಾಗಿದ್ದು, ಎಲ್ಲರಿಗೂ ಮಾಂಸ ಬೇಕು. ಆದರೆ ಹೈನುಗಾರಿಕೆಯೇ ನಶಿಸುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಎಲ್ಲರಿಗೂ ಮಾಂಸ ಪೂರೈಕೆ ಸಾಧ್ಯವೇ ಎಂದು ಪ್ರಶ್ನಿಸಿದ ಪಶು ಸಂಗೋಪನಾ ಇಲಾಖೆಯ ಮೈಸೂರು ಜಿಲ್ಲಾ ಸಹಾಯಕ ನಿರ್ದೇಶಕ ಡಾ. ನಾಗರಾಜ್, ಇದೇ ರೀತಿಯಾದರೆ ಮುಂದೆ ಮಾಂಸ ಕೆ.ಜಿ.ಗೆ 1500 ರೂ.ಗಳು ಆಗಬಹುದು, ಹಾಗಾಗಿ ರೈತರು ಹೆಚ್ಚು, ಹೆಚ್ಚಾಗಿ ಕುರಿ, ಮೇಕೆಗಳನ್ನು ಸಾಕಿ ಆರ್ಥಿಕವಾಗಿ ಸುಧಾರಿಸಬೇಕು ಎಂದರು.

ಪಶು ಸಂಗೋಪನಾ ಇಲಾಖೆ, ಕರ್ನಾಟಕ ಕುರಿ ಮತ್ತು ಉಣ್ಣೆ ನಿಗಮ ನಿಯಮಿತದ ಸಂಯುಕ್ತಾಶ್ರಯದಲ್ಲಿ ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ತಾಲೂಕಿನ ಬನ್ನೂರು ಪಟ್ಟಣದ ಎನ್.ಆರ್.ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಕುರಿ, ಮೇಕೆ ಸಾಕಾಣಿಕೆ ಮತ್ತು ಮೇವು ನಿರ್ವಹಣೆ ಕುರಿತ ಎರಡು ದಿನಗಳ ಉಚಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಹೈನುಗಾರಿಕೆ ಅವಸಾನದ ಅಂಚಿಗೆ ತಲುಪುತ್ತಿದೆ. ಮೇಯಲು ಗೋಮಾಳದ ಕೊರತೆ ಸೇರಿದಂತೆ ಕುರಿ ಸಾಕಾಣಿಕೆ ಮಾಡಲು ರೈತರು ಆಸಕ್ತಿ ತೋರುತ್ತಿಲ್ಲ. ಎಲ್ಲರೂ ಉದ್ಯೋಗ ಅರಸಿ ಪಟ್ಟಣಕ್ಕೆ ವಲಸೆ ಹೋಗುತ್ತಿರುವುದರಿಂದ ಅವುಗಳ ಸಂತತಿ ಕಡಿಮೆಯಾಗುತ್ತಿದೆ. ಆದರೆ ರೈತರು ಕುರಿ ಎಂದಿಗೂ ನಡೆದಾಡುವ ಬ್ಯಾಂಕ್ ಎಂಬುದನ್ನು ಮರೆಯಬಾರದು.



ಯಾವುದೇ ಕಷ್ಟ ಕಾಲದಲ್ಲಿ ಅದು ನಿಮ್ಮನ್ನು ಕಾಪಾಡುತ್ತದೆ ಎಂದರು.

ಕುರಿ ಸಾಕಾಣಿಕೆಗೆ ಹೆಚ್ಚು ಸಾಲ ಸೌಲಭ್ಯ: ಕೇಂದ್ರ ಸರ್ಕಾರದ ಯೋಜನೆಯಡಿ ಕುರಿ ಸಾಕುವವರಿಗೆ ಹೆಚ್ಚು ಸಾಲ ಸೌಲಭ್ಯ ದೊರಕಲಿದೆ. 500 ಕುರಿ ಸಾಕಣಿಕೆ ಮಾಡುವ ದೊಡ್ಡ ರೈತರಿಗೆ 1 ಕೋಟಿ ಸಾಲ ನೀಡಲಾಗುತ್ತದೆ. ಈ ಸಾಲಕ್ಕೆ ಶೇ.50 ರಷ್ಟು ಸಬ್ಸಿಡಿ ನೀಡಲಾಗುತ್ತದೆ. 100 ಕುರಿ ಸಾಕಿದರೆ 20 ಲಕ್ಷ ಸಾಲ ಹಾಗೂ 10 ಲಕ್ಷ ರೂ.ಗಳ ಸಹಾಯಧನ ನೀಡಲಾಗುತ್ತಿದೆ. ಈ ಸಾಲವನ್ನು ಬಡವರು, ಶ್ರೀಮಂತರು ಎಂಬ ಭೇದ ಭಾವ ಇಲ್ಲದೇ ಬ್ಯಾಂಕಿನಲ್ಲಿ ಸಾಲ ಕೊಡಲು ಒಪ್ಪಿದರೆ ಯಾರು ಬೇಕಾದರೂ ಸಾಲ ಪಡೆಯಬಹುದಾಗಿದ್ದು, ರೈತರು ಯೋಜನೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಮಿಷನ್ ಕಟಿಂಗ್ ಬೇಡ,ಕೈಯಲ್ಲೇ ಹುಲ್ಲು ಕುಯ್ಯಿರಿ: ಬರಗಾಲದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುಂಜಾಗ್ರತ ಕ್ರಮವಾಗಿ ಮೇವಿನ ಜೋಳದ ಬಿತ್ತನೆ ಬೀಜ ನೀಡುತ್ತಿದೆ. ಜಾನುವಾರುಗಳಿಗೆ ಹುಲ್ಲಿನ ಅವಶ್ಯಕತೆ ಹೆಚ್ಚಿದೆ. ಮುಂದೆ ಹುಲ್ಲಿಗೆ ಚಿನ್ನದ ಬೆಲೆ ಬರಲಿದೆ. ಹಾಗಾಗಿ ರೈತರು ಹೆಚ್ಚಾಗಿ ಹುಲ್ಲನ್ನು ಬೆಳೆಸಿ ಲಾಭಪಡೆಯಿರಿ ಎಂದ ಡಾ.ನಾಗರಾಜು, ಮಿಷನ್ ಕಟಿಂಗ್‌ನಲ್ಲಿ ಭತ್ತ ಕಟಿಂಗ್ ಮಾಡಲಾಗುತ್ತಿದೆ. ಆದರೆ ಈ ಪ್ರಕ್ರಿಯೆಯಿಂದ ಶೇ.50 ರಷ್ಟು ಲಾಭ ಕಡಿಮೆಯಾಗುತ್ತದೆ. ಹಾಗಾಗಿ ಕೈಯಲ್ಲೇ ಭತ್ತ ಕಟಿಂಗ್ ಮಾಡಿದರೆ ಹುಲ್ಲು ಮೇವಿಗೆ ಸಿಗಲಿದೆ ಅಲ್ಲದೇ ಲಾಭಸಹ ಬರಲಿದೆ ಎಂದರು.

ಶ್ರೀಗಂಗಾ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ರಾಜ್ ಕಾಮಯ್ಯ ಮಾತನಾಡಿ, ಕೇಂದ್ರ ಸರ್ಕಾರದ ಎನ್‌ಎಲ್‌ಎಂ, ಪಿಎಂಇಜಿಪಿ ಹಾಗೂ ಸ್ಟ್ಯಾಂಡ್ ಅಫ್ ಇಂಡಿಯಾ ಎಂಬ ಯೋಜನೆಯಡಿ ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೆ ಸಹಾಯಧನದೊಂದಿಗೆ ಸಾಲ ಸೌಲಭ್ಯ ಕಲ್ಪಿಸಿಕೊಡಲಾಗುತ್ತಿದೆ. ಸ್ಟ್ಯಾಂಡ್ ಅಫ್ ಇಂಡಿಯಾ ಸ್ಕೀಂನಲ್ಲಿ ಯಾವುದೇ ಅಡಮಾನ ಇಡದೇ 1 ಕೋಟಿ ವರೆಗೂ ಸಬ್ಸಿಡಿ ಸಹಿತ ಸಾಲ ಸೌಲಭ್ಯ ದೊರಕುತ್ತಿದ್ದು ರೈತರು ಸಾಲದ ಯೋಜನೆ ಸದುಪಯೋಗಕ್ಕೆ ಮುಂದಾಗಬೇಕೆಂದು ಮನವಿ ಮಾಡಿದರು.

ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಎಚ್.ಮಂಜುನಾಥ್, ಕಾರ್ಯದರ್ಶಿ ದಿವ್ಯಶ್ರೀ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕ ಡಿ.ಎನ್.ನಾಗರಾಜು, ಪಶು ಸಂಗೋಪನಾ ಇಲಾಖೆಯ ಮುಖ್ಯ ಪಶು ಅಧಿಕಾರಿ ಡಾ.ಲಿಂಗರಾಜು, ಪಶು ತರಬೇತಿ ಕೇಂದ್ರದ ಅಧಿಕಾರಿ ಡಾ.ಎಂ.ಕೃಷ್ಣಪ್ಪ, ಪಶು ಸಂಗೋಪನಾ ಅಧಿಕಾರಿ ಡಾ.ಕಾರ್ತಿಕ್, ಸಹಾಯಕ ತೋಟಗಾರಿಕಾ ಅಧಿಕಾರಿ ಡಾ.ಟಿ.ಅರಸ್, ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್‌ನ ನಿರ್ದೇಶಕರಾದ ಬಿ. ಶಂಕರ್, ಶಿವರಾಮೇಗೌಡ, ಮರಿಗೌಡ, ಚಿಕ್ಕಲಿಂಗೇಗೌಡ, ರವಿಕುಮಾರ್, ಟ್ರಸ್ಟ್‌ನ ರಾಜಣ್ಣ, ಶಶಾಂಕ್, ರಚನಾ, ನವ್ಯ, ಚಾಂದಿನಿ, ಕಿರಣ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಡಂಕಿ(ಹಿಂ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಡಂಕಿ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಸಲಾರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಸಲಾರ್ (ತೆ)	4 ಪ್ರದರ್ಶನಗಳು
ರಾಜಕಮಲ್	
ಅಕ್ವಾ ಮ್ಯಾನ್ ಅಂಡ್ ದ ಲಾಸ್ಟ್ ಕಿಂಗ್‌ಡಮ್(ಇಂ)	4 ಪ್ರದರ್ಶನಗಳು
ಸಂಗಂ	
ಡಂಕಿ(ಹಿಂ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಬನ್ನೂರಿನ ಆದಿಚುಂಚನಗಿರಿ ಬಾಲಜಗತ್ ಶಿಕ್ಷಣ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ ಪೋಷಕರ ಕ್ರೀಡಾಕೂಟವನ್ನು ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಉದ್ಘಾಟಿಸಿದರು. ಪರಿಸರ ಜಾಗೃತಿ ವೇದಿಕೆಯ ಅಧ್ಯಕ್ಷ ಮಹೇಂದ್ರಸಿಂಗ್ ಕಾಳಪ್ಪ, ಆನಂದ್ ಮೊದಲಾದವರು ಇದ್ದರು.

ವಿಶ್ವ ರೈತರ ದಿನಾಚರಣೆ ಬಗ್ಗೆ ಚರ್ಚೆ



ಹಂಪಾಪುರ, ಡಿ.21– ಹೆಗ್ಗಡದೇವನಕೋಟೆ ತಾಲೂಕು ಹಂಪಾಪುರ ಹೋಬಳಿಯ ಇರನಂದಿ, ಹೊಳೆಹುಂಡಿ, ಕರಿಗಳ, ಹೈರಿಗೆ, ಶಂಖಳ್ಳಿ, ಪಾಳ್ಯ, ಕಾನನಳ್ಳಿ, ಬಾಚೇಗೌಡನಹಳ್ಳಿ ಹಾಗೂ ಹಂಪಾಪುರ ರೈತರಿಗೆ ಡಿ.23ರ ವಿಶ್ವ ರೈತರ ದಿನಾಚರಣೆ ಹಾಗೂ ಸಾಲ ಮನ್ನಾದ ಬಗ್ಗೆ ಹೆಚ್.ಬಿ. ರಾಜೇಶ್ ಹಾಗೂ ಕೆಂಡಗಣ್ಣ ಅಧ್ಯಕ್ಷತೆಯಲ್ಲಿ ಮಾಹಿತಿ ನೀಡಿ ಡಿ.23 ರಂದು ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ವಿಶ್ವ ರೈತರ ದಿನಾಚರಣೆಗೆ ಆಗಮಿಸುವಂತೆ ಕೋರಲಾಯಿತು.

AFFIDAVIT

I, Lethisiya Jessy Pinto, wife of late Francis Xavier Pinto, aged 67 years, residing at No.16, 27th Block, BEML Layout, Srirampura 2nd Stage, Mysuru-570034 have sworn an affidavit on my own free will and desire for correction of my name from **Lithecia Jassy Pinto** to **Lethisiya Jessy Pinto** vide affidavit sworn before Notary Public K.V. Vasu, Mysuru on 13.10.2023, for the purpose of my passport renewal. Henceforth, I shall be called and known as **Lethisiya Jessy Pinto**

Sd/- Lethisiya Jessy Pinto



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





